ಕರ್ನಾಟಕ ಕಾವ್ಯಕಲಾನಿಧಿ- ನಂ ೧೭.

ಶ್ರೀಮನ್ಮಹೀಶೂರ ಮಹಾಸಂಸ್ಥಾನಾಧೀಶ

ಶ್ರೀಮದ್ರಾಜಾಧಿರಾಜ

ಶ್ರೀ ಚಿಕದೇವ ಮಹಾರಾಜ ವಿರಚಿತಮಪ್ಪ

ದಿವ್ಯಪ್ರಬಂಧಂಗಳೊಳ್

# ಶ್ರೀ ಗೀತಗೋಪಾಲಂ

ಎಸ್. ಜಿ. ನರಸಿಂಹಾಚಾರ್ಯರ್

ಗೌರ್ನಮೆಂಟ್ ಕನ್ನಡ ಟ್ರಾನ್ಸ್ಲೇಟರ್, ಎಜುಕೇಷನ್ ಡಿಪಾರ್ಟ್‌ಮೆಂಟ್ ಮೈಸೂರು,

ಮತ್ತು

ಮ. ಎ. ರಾಮಾನುಜಯ್ಯಂಗಾರ್

ಅಸಿಸ್ಟೆಂಟ್ ಮಾಸ್ಟರ್ ವೆಸ್ಲಿಯನ್ ಮಿಷನ್ ಹೈಸ್ಕೂಲ್, ಮೈಸೂರು—

ಇವರುಗಳಿಂದ ಪರಿಶೋಧಿಸಲ್ಪಟ್ಟು

ಮೈಸೂರು :

ಜಿ. ಟಿ. ಎ. ಪ್ರೆಸ್ಸಿನಲ್ಲಿ ಮುದ್ರಿತವಾಯಿತು.

1915.

UNIVERSAL LIBRARY
OU_200509
UNIVERSAL LIBRARY

Registered according to Act XXV, of 1867
(All rights reserved)

# ಶ್ರೀ ಗೀತಗೋಪಾಲಂ.

## ಪೀಠಿಕೆ.

ಕರ್ಣಾಟಕ ಮಂಡಲಾಧೀಶ್ವರ ಶ್ರೀಚಿಕದೇವ ಮಹಾರಾಜ ವಿರಚಿತವಾದ "ದಿವ್ಯಪ್ರಬಂಧಗಳಲ್ಲಿ" ಈ ಗ್ರಂಥವು ಒಂದಾಗಿದೆ. ಈ ಗ್ರಂಥದ ರಚನೆಯ ವಿಷಯವಾಗಿ ಕವಿಯು ತನ್ನ ಉದ್ದೇಶವನ್ನು ಗ್ರಂಥಾದಿಯಲ್ಲಿ ಈರೀತಿ ಹೇಳಿಕೊಳ್ಳುತ್ತಾನೆ:—

ಕಂ|| ಅನವಧಿದಯೆಯಿಂದೀಪರಿ।
ಜನಮನಿತುಮನರಸುಗೆಯ್ತುಮಿಂ ತೊಳಲಿದಪುದೊಳ್ ||
ನೆನೆದಂ ಪರಸುಖಮನಪ।
ರ್ಗನುಗೊಳಿಪರವಾಪ್ಪುದೆಂದು ಚಿಕದೇವೇಂದ್ರಂ ||

ಪಲಿಕಿಸೆ ಪರಿಕಿಸೆ ಕಿವಿಯೊಳ್ ।
ಪರಾಶರವ್ಯಾಸಮುಖ್ಯಮುನಿಸಮ್ಮತದಿಂ ||
ಹರಿಸಂಕೀರ್ತನಮೊಂದೇ ।
ಪರಗತಿಗನುಕೂಲಮೆಂದು ನಿರವಿಸಿ ನೆಗಳ್ದಂ ||

ಪಾಲಂ ಬಯಸಿದ ರೋಗಿಗೆ ।
ಪಾಲಿಂದೌಷಧಮನೀವ ವೈದ್ಯನ ತೆಱದಿಂ ||
ದೀಲೋಗರೊಲ್ವ ಗೀತದ ।
ಮೂಲದೊಳೇ ಮುಕ್ತಿಗತಿಯ ಪೊಗದೋಱುಸಿದಂ ||

ತೊಡರ್ದಿರೆ ಸುಡಿಸುಣ್ಣರಗಳ ।
ಜಿಡಂಗು ಮನಮೊಲ್ದು ಗೀತಗೋಪಾಲಮನ ||
ವರ್ಣಿಪೆದೊಳ್ಗನ್ನಡಗಬ್ಬಮ ।
ನೊಡರಿಸಿ ಚಿಕದೇವರಾಯನುನ್ನತಿವೆತ್ತಂ ||

"ಗೀತಗೋಪಾಲ ಮಹಾಪ್ರಬಂಧಂ" ಎಂದು ಕವಿಯು ತಾನೇ ಹೇಳುವುದರಿಂದ ಈ ಗ್ರಂಥವನ್ನು ಮಹಾ ಪ್ರಬಂಧಗಳ ಗಣನೆಯಲ್ಲಿ ಸೇರಿಸುತ್ತಾನೆಂದು ತೋರುತ್ತದೆ. ಕವಿಯು ಈ ಗ್ರಂಥದಲ್ಲಿ ಪ್ರಸಿದ್ಧವಾದ ಜಯದೇವನ ಗೀತಗೋವಿಂದಕಾವ್ಯದ ಕ್ರಮವನ್ನು ಅನುಸರಿಸಿ, "ಗೋಪಿಕಾವೃತ್ತಾಂತನಿರೂಪಣವ್ಯಾ

ಜವಿಂ ಭಗವದ್ಗುಣಂಗಳಂ, ” “ ಮೋಕ್ಷೋಪಾಯಮುಮಂ ಸಾಧಿಸುವುದರ್ಕೆ ಉಪಾಯಮಾದ ಪ್ರಪತ್ತಿಸ್ವರೂಪಮುಂ ” ಕೀರ್ತನೆಗಳ ದ್ವಾರಾ ನಿರೂಪಿಸಿ, ತನ್ಮೂಲಕ ವೇದಾಂತತಾತ್ಪರ್ಯಾರ್ಥವನ್ನು ಸಂಗ್ರಹಿಸಿ ಹೇಳಿರುತ್ತಾನೆ.

ಈ ಗ್ರಂಥದಲ್ಲಿ ಪೂರ್ವ ಉತ್ತರ ಎಂಬದಾಗಿ ಎರಡು ಭಾಗಗಳಿವೆ. ಪ್ರತಿ ಭಾಗದಲ್ಲಿಯೂ ಏಳೇಳು ಖಂಡಗಳಿವೆ. ಆ ಪ್ರತಿಯೊಂದು ಖಂಡದಲ್ಲಿಯೂ ಏಳೇಳು ಪದಗಳಿವೆ. ಹೀಗಿರುವುದರಿಂದ ಪ್ರತಿ ಖಂಡಕ್ಕೂ “ ಸಪ್ತಪದಿ ” ಎಂಬ ಹೆಸರನ್ನು ಕವಿಯು ಕೊಟ್ಟಿರುತ್ತಾನೆ. ಒಂದೊಂದು ಸಪ್ತಪದಿಯಲ್ಲಿ ಒಂದೊಂದು ವಿಷಯವು ಹೇಳಲ್ಪಟ್ಟಿದೆ. ಆಯಾ ವಿಷಯಗಳ ಸಾರಾಂಶವು ಆಯಾ ಸಪ್ತಪದಿಗಳ ಆದಿಯಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿದೆ. ಈ ಗ್ರಂಥದ ಕೀರ್ತನೆಗಳಲ್ಲಿ ಇತಿಹಾಸ ಪುರಾಣಾದಿಗಳಲ್ಲಿ ಕಂಗೊಳಿಸುವ ಭಾಗವತೋತ್ತಮರ ಸೂಕ್ತ್ಯಭಿಪ್ರಾಯಗಳೂ, “ ಆಳ್ವಾರ್ ” ಎಂಬ ನಾಮದಿಂದ ಪ್ರಸಿದ್ಧರಾದ ಭಕ್ತಾಗ್ರಗಣ್ಯರ ಶ್ರೇಷ್ಠವಾದ ಅಭಿಪ್ರಾಯಗಳೂ ಸಹ ಅಡಕವಾಗಿ ಇವೆ.

ಪ್ರತಿಯೊಂದು ಕೀರ್ತನೆಯಲ್ಲಿಯೂ ಪಲ್ಲವಿ ಚರಣಗಳು ಇವೆ. ಕೀರ್ತನೆಗಳನ್ನು ಹಾಡಲು ಅನುಕೂಲಿಸುವುದಕ್ಕೆ ಆಯಾ ಕೀರ್ತನೆಗಳ ಮೇಲೆ ತಾಳರಾಗಗಳನ್ನು ಕವಿಯು ಕೊಟ್ಟಿರುತ್ತಾನೆ. ಅಲ್ಲದೆ ಆ ಕೀರ್ತನೆಗಳ ತಾತ್ಪರ್ಯವು ಸುಗಮವಾಗುವುದಕ್ಕೆ ಆಯಾ ಕೀರ್ತನೆಗಳ ಆದಿಯಲ್ಲಿ ಒಂದೊಂದು ಕಂದಗಳನ್ನು ಬರೆದಿರುತ್ತಾನೆ. ಈ ಗ್ರಂಥದ ಪದ್ಯಗಳು ಹಳಗನ್ನಡದ ಶೈಲಿಯನ್ನು ಅನುಸರಿಸಿದ್ದರೂ ಕೀರ್ತನೆಗಳು ಮಾತ್ರ ಹೊಸಗನ್ನಡದ ಶೈಲಿಯನ್ನನುಸರಿಸಿವೆ. ಇದರಿಂದ ಸ್ತ್ರೀ ಬಾಲ ಸಾಮಾನ್ಯವಾಗಿ ಪಂಡಿತ ಪಾಮರರೆಲ್ಲರಿಗೂ ಉಪಯೋಗವಾಗಬೇಕೆಂಬುದೇ ಕವಿಯ ಉದ್ದೇಶವೆಂದು ತೋರುತ್ತದೆ.

ಈ ಗ್ರಂಥದಲ್ಲಿರುವ ಅನೇಕ ಪದ್ಯಗಳು ತಿರುಮಲೆಯಾರ್ಯಕೃತವಾದ “ ಅಪ್ರತಿಮವೀರಚರಿತ ” “ ಚಿಕದೇವರಾಜವಿಜಯ ” ಇವೇ ಮೊದಲಾದ ಗ್ರಂಥಗಳಲ್ಲಿ ಸಿಕ್ಕುತ್ತವೆಯಾದುದರಿಂದ, ಧಾವಕಕವಿಯಂತೆ ತಿರುಮಲೆಯಾರ್ಯನೂ ಕೂಡ ಈ ಗ್ರಂಥವನ್ನು ಬರೆದು ಚಿಕದೇವಮಹಾರಾಜರ ಹೆಸರಲ್ಲಿ ಪ್ರಸಿದ್ಧಿಪಡಿಸಿದನೆಂದು ಊಹಿಸಲು ಅವಕಾಶವುಂಟು.

ಮತಾಭಿಪ್ರಾಯಗಳನ್ನು ತಿಳಿಯಲಾಸಕ್ತಿಯುಳ್ಳವರಿಗೆ ಅತ್ಯಾದರಣೀಯವಾಗಿರುವುದರಿಂದಲೂ, ಭಜನೆ ಮಾಡಲು ಅಪೇಕ್ಷೆಯುಳ್ಳ ಭಕ್ತರಿಗೆ ಉಪಯೋಗವಾಗುವುದರಿಂದಲೂ, ಸುಲಭವಾದ ಮಾತುಗಳಿಂದ ಮಹತ್ತಾದ ವಿಷಯಗಳು ಸಂಗೀತಸರಣಿಯಲ್ಲಿ ಹೇಳಲ್ಪಟ್ಟಿರುವ ಕಾರಣ ಹೆಣ್ಣುಮಕ್ಕಳ ಸಂಗೀತ ವಿದ್ಯೆಯಲ್ಲಿ ಅಭಿಮಾನವುಳ್ಳ ಹಿತೈಷಿಗಳಿಗೆ ಸಹಾಯವಾಗಬಹುದಾದುದರಿಂದಲೂ, ಈ ಗ್ರಂಥವನ್ನು ಮುದ್ರಿಸಿರುತ್ತೇವೆ.

# ವಿಷಯ ವಿವರಣ.

## ಪೂರ್ವ ಭಾಗ.


| | | ಪುಟಾದಿ ಸಂಖ್ಯೆ. |
|---|---|---|
| | ಪ್ರವೇಶ ... .. ... ... | ೧ |
| | ಮಂಗಳಾಚರಣ ... ... ... | ೩ |
| I | ಪ್ರಾಬೋಧಿಕ ಸಪ್ತಪದಿ ... ... ... | ೫ |
| II | ಪ್ರಥಮಾನುರಾಗ ಸಪ್ತಪದಿ ... ... | ೧೧ |
| III | ವಿರಹ ಸಪ್ತಪದಿ ... ... ... | ೧೬ |
| IV | ವಿರಹೋದ್ರೇಕ ಸಪ್ತಪದಿ ... ... ... | ೧೯ |
| V | ಪ್ರಣಯಕಲಹ ಸಪ್ತಪದಿ ... ... ... | ೨೪ |
| VI | ರೂಪಕತಾಳ ಸಪ್ತಪದಿ ... ... ... | ೨೯ |
| VII | ಮಂಗಳ ಸಪ್ತಪದಿ ... ... ... | ೩೩ |


## ಉತ್ತರ ಭಾಗ.


| | | |
|---|---|---|
| | ಪ್ರವೇಶ ... ... ... ... | ೩೧ |
| I | ಗುರುಪರಂಪರಾ ಸಪ್ತಪದಿ ... ... | ೪೨ |
| II | ಸಂಬುಗೆಯ ಸಪ್ತಪದಿ .. ... ... | ೪೭ |
| III | ಅನ್ಯಾಪದೇಶ ಸಪ್ತಪದಿ ... ... ... | ೫೨ |
| IV | ಮಹಿಮೆಯ ಸಪ್ತಪದಿ ... ... .. | ೫೭ |
| V | ಉಪಾಯ ಸಪ್ತಪದಿ ... ... ... | ೬೩ |
| VI | ಫಲಸಪ್ತಪದಿ .. ... ... | ೬೫ |
| VII | ಮೂರ್ತಿಧ್ಯಾನ ಸಪ್ತಪದಿ ... ... ... | ೬೬ |

॥ ಶ್ರೀರಸ್ತು ॥

# ಶ್ರೀ ಗೀತಗೋಪಾಲಂ.

ರಾಗ ॥ ಭೈರವಿ ॥

ಕಂದ ॥ ಶ್ರೀಯುಂ ತನ್ನ*ರ್ಧಾವನಿಯೊಳ್ ।
ಭೂಯುವತಿಯುಮಡಿಯೊಳಿಂಬುಗೊಳಿಸಿದ ಸರಸಂ ॥
ಪಾಯುಂ ಮಂಗಳಕಾಯುಂ ।
ಶ್ರೀಯುಂ ಮಿಗೆ ಸಿರ್ಗೆ* ಚೆಲುವಗೋಪವರಾಯುಂ ॥ ೧

ಭಯವನಿಸ್ಸೀಮತಸಕಲ ।
ಶ್ರೀಯುಮನೊಸೆದೀವ ಧರಣಿಮಂಡಲಪತಿಯುಂ ।
ಶ್ರೀಯುಂ ಚಿಕದೇವನುಮಾ ।
ರಾಯಂಗೊಲ್ದೀಗೆ ಚೆಲುವಗೋಪವರಾಯುಂ ॥ ೨

ರಾಗ ॥ ಕಾಂಬೋಧಿ ॥

ಚೆಲುವಂ ಚೆಂಗುವಲಂಸ್ರಗಾಭರಣಮುಂ ಸಂಗೀತಸಾಹಿತ್ಯಕೌ ।
ಶಲಮುತ್ಸಾಹಂ ವಿವೇಕಪಾಲಿ ಸಮುದಿಂ ಸೌಮ್ಯಗಾಂಭೀರ್ಯ ಕಳಾ ॥
ವಿಲಸೊಳ್ಪುತುಗಸೌಂದರ್ಯಮುಚಿತತ್ವಂ ಭಾವುಕಂ ಭಾವಿಸಲ್ ।
ಹೃದಯಗ್ರಾಹಿ ದಯಾಪರತ್ವ ಚಿಕದೇವೇಂದ್ರಂ ಮಹೀಚಂದ್ರಮಂ ॥ ೩

ಮತ್ತಂ,

ಬಳೆಗುಂ ಸಂತಸಮುಣ್ಮುಗುಂ ಬಗೆಯರಲ್ಗುಂ ಪುಷ್ಟಿ ಸಲ್ಗುಂ ವಚಂ ।
ಪೊಳೆಕುಂ ಗೆಂಟ್ಟ ಮದಲ್ಗೆ ಮೊಗ್ಗ ಸಮರಂ ಪೊಸೆ ಬಾಗುಂ ಮತ್ತಮೇಂ ॥
ಕೆಳೆಗೊಳ್ಗುಂ ಸವಿಯಿಲ್ಲದಲ್ಲ ಜಗಮುಂ ತಾಳ್ಗುಯ್ಗು ವಾತ್ಸಲ್ಯಮುಂ ।
ತಳರ್*ದಸ್ಕಂ ಚಿಕದೇವರಾಯನ ಪರಾಂಕುಶಂ ಕಟಾಕ್ಷಾಂತದೊಳ್ ॥ ೪

ರಾಗ ॥ ಕೇತಾರಗೌಳ ॥

ಜಗದೊಳ್ ಶ್ರೀಚಿಕದೇವನಿಂ ಪಿರಿಯರಿಲ್ಲೆತ್ತಾನುಮುಂಟಾದೊಡಂ |
ಬಗೆಗೊಳ್ಗುಂ ಪಟುವಾತಿನೊಳ್ ದೊರೆಯುಮಿಲ್ಲೆತ್ತಾನುಮುಂಟಾದೊಡಂ ||
ಬಗೆಗೊಳ್ಗುಂ ಪ್ರತಿಬಿಂಬದೊಳ್ ಮಲೆಪರಿಲ್ಲೆತ್ತಾನುಮುಂಟಾದೊಡಂ |
ಬಗೆಗೊಳ್ಗುಂ ಪ್ರಣಯಾಪರಾಧವಿಧಿಯೊಳ್ ಮೆಯ್ದೋಱುವಿನ್ನಿಲ್ಲಿಯುಂ ||೪

ಅರಸಂ ನೇಹಿಗನೊಲ್ಮೆಗಂ ನೆಱವಿಗಂ ಕಾವಂ ಹಿತಂ ತೆತ್ತಿಗಂ |
ಸರಸಂ ಮನ್ನಿಪನಾವಗಂ ತಿರುಮಲಾರ್ಯಂಗೆಂಬಿನಂ ಕೋವಿದರ್ ||
ಪೊರೆದೋಱೆತೊಲ್ದೊಡನಾಡಿಯೋವಿಪುದಿದಿತ್ತಟ್ಕತ್ತು ಪೆಂಪೇಱುಗುಂ |
ಬಿರುದಂತೆಂಬರ ಗಂಡಸಪ್ರತಿಮವೀರಂ ಬಲ್ಲರೊಳ್ ಬಲ್ಲಹಂ || ೫

ಮತ್ತಂ,

ರಾಗ ॥ ಅಸಾವೇರಿ ॥

ನೆವಮಿನಿತಿಲ್ಲದೊಳ್ಗುವೊಸೆಗುಂ ನೆನೆಗುಂ ಬಱಿಕುಂ ದಯಾರಸಂ |
ಕವಿತರೆ ನಿಟ್ಟಿಕುಂ ನಲಿಗುವಪೂವರಿಕುಂ ಮನವಾಱೆ ಮನ್ನಿಕುಂ ||
ಸವಿನುಡಿದೋಱುಗುಂ ತಿರುಮಲಾರ್ಯನೊಳಪ್ರತಿಮಪ್ರಭಾವದಿಂ |
ದವನಿಯುನಾಳ್ಗೆ ಬಾಳ್ಗೆ ಸತತಂ ಚಿಕದೇವನರೇಂದ್ರಚಂದ್ರಮಂ || ೬

ಅನವಧಿಸಮಯದಿಂದೀಸರಿ |
ಜನಮನಿತುಮುಸರಸುಗೆಯ್ತ್ತಿಂ ಪೊರೆದಿಪದೊಳ್ ||
ನೆನೆವಂ ಪರಸುಖಮನವ |
ಗಸುಗೊಳಪಿರವಾವುದೆಂದು ಚಿಕದೇವೇಂದ್ರಂ || ೭

ರಾಗ ॥ ಮುಖಾರಿ ॥

ಪರಿಕಿಸೆ ಪರಿಕಿಸೆ ಕಿವಿಯೊಳ್ |
ಪರಾಶರವ್ಯಾಸಮುಖ್ಯಮುನಿಸಮ್ಮತದಿಂ ||
ಹರಿಸಂಕೀರ್ತನವೊಂದೇ |
ಪರಗತಿಗನುಕೂಲಮೆಂದು ನಿರವಿಸಿ ನೆಗಟ್ದಂ* || ೮

ರಾಗ ॥ ಶಂಕರಾಭರಣಂ ॥

ಪಾಲಂ ಬಯಸಿದ ರೋಗಿಗೆ |
ಪಾಲಿಂದೌಷಧಮನೀವ ವೈದ್ಯನ ತೆಱದಿಂ |

ದೀಲೋಗರೊಲ್ವ ಗೀತವ |
ಮೂಲದೊಳೇ ಮುಕ್ತಿಗತಿಯ ಮೊಗದೋಱಿಸಿವಂ || ೧೦

ತೊಡರ್ದಿರೆ* ಸುಡಿಸುೞ್ಱ ರಗಳ |
ಬೆಡಂಗು ಮನವೊಲ್ದು ಗೀತಗೋಪಾಲವೆಸ ||
ವರ್ಣಡೆದೊಳ್ಗನ್ನಡಗಬ್ಬಮ |
ನೊಡರಿಸಿ ಚಿಕದೇವರಾಯನುನ್ನತಿವೆತ್ತಂ || ೧೧

ರಾಗ || ಸಾಟಿ || ತಾಳ—ಜಂಪೆ ||

ಗೆಲವುಗೆಲವು । ಗೆಲವು ಗೆಲವಾಸತರಿಗೆಲ್ಲಮನೀವ ।
ಬಲವದಪ್ರತಿಮಗೋಪಾಲರಾಯನಿಗೆ || ಪಲ್ಲವಿ ||

ಚರಣ || ಮನವೊಲಿದು ಸಜ್ಜನರ ಮನ್ನಣೆಯೊಳೋವಿ ದು ।
ರ್ಜನರ ತೊತ್ತಳದುೞಿದು ಜಾತಿಧರ್ಮವನು ||
ಆನುಗೊಳಿಸಲವತರಿಸಿ ಯದುಕುಲದಿ ನಂದಗೋ ।
ಪನ ಭಾಗ್ಯಫಲವೆನಿಸಿ ಬಳೆವ ಗೋವಳಗೆ || ೧

ಬಱಿಕ ಪೂತನಿಯುಸುವ ಪಾಲ್ವೆರಸು ಸವಿದೀಂಟಿ।
ಸುೞಿಗಾಳಿರಕ್ಕಸನ ಸೊಕ್ಕಮುಱಿದಿಕ್ಕಿ ||
ಕಳೆದು ಶಕಟನ ಜೀವಕಳೆಯುನೆಣೆವರವನುಡಿ ।
ದಿಳೆಯೊಳಡಗೆಡಹಿ ನಗುವೆಳೆಯ ಗೋವಳಗೆ || ೨

ಪುಸಿಗಱುವ ಮಡುಪಿ ಬೊಸಬಸವನನು ಬಸವಟಿಸಿ।
ಮಸಗಿ ಖರತುರಗನೆನಿಪಸುರರನು ಗೆಲಿದು ||
ಬಿಸದ ಮಡುವನು ಕಲಕಿ ಪೆಡೆಮೆಟ್ಟಿ ಕಾಳಿಯನ ।
ವಸರಿಸಿದ ಕಾೞ್ಗಿಚ್ಚ ಪರಿದ ಗೋವಳಗೆ || ೩

ತನಗೊಡರಿಸದ ಪೂಜೆ ತಪ್ಪಿದಱಿಂದೆ ಕಡು।
ಗನಲಿಯೆಡೆವಿಡದೆ ಮೞೆಗಱೆವ ವಾಸವನ ||
ತನಿಗೊರ್ವ್ವ ತಳಕಿೞಿಯೆ ತಳೆದು ಗೋವರ್ಧನ।
ವನನುಗೊಳಿಸಿ ಕಱುತುಱುವನಾಳ್ದ ಗೋವಳಗೆ || ೪

ಕೊಳಲ ದನಿಯಿಂದೆ ಗೋವಳಗುವರಿಯರ ಬಗೆಯ ।
ನೊಳಗುಗೆಯ್ದೊಡನಾಟಕೆಳಸಿಯೊಡವೆರಸಿ ||
ಕೆಳೆಗೊಡಂಬಡೆ ರಾಸಕೇಳಿಯೊಳು ಸೊಗವಡಿಸಿ ।
ಸ್ಸುೞಿಸುೞಿದು ನಲಿಸಲಿಪ ಸೊಬಗುಗೋವಳಗೆ || ೫

ರಾಗ ॥ ಮಾಳವಿ ॥ ತಾಳ—ತ್ರಿವುಡೆ ॥

ಗೋವಳರಾಯಾ ಪರಾಕು, ದೇವಾದಿದೇವಾ ॥ ಪಲ್ಲವಿ ॥

ಚರಣ ॥ ಪರಮರಕ್ಷಕ ನಿನ್ನ ಪಾದಾರವಿಂದವ ।
ಸಿರದೊಳು ಪೊಱಲವಸರವೆಳಸಿ ॥
ಪರಭಕ್ತಿಯೊಳು ನಿಂದ ಬ್ರಹ್ಮಾದಿಸುರರೊಳು ।
ಕರುಣಕಟಾಕ್ಷವ ಕಡೆಗೋಡಿಸೊಮ್ಮೆ ॥ ೧

ಜಲಜಲೋಚನ ನಿನ್ನ ಸರಸಗುಣಾಮೃತ ।
ಕಲಿಗಳ ಸವಿದರ್ದ*ಗರಗಿ ಸೊರ್ಕಿ ॥
ಬಲಿದು ನಾರದಾದಿಗಳೊಗ್ಗರಲೊಳು ನಲಿ ।
ನಲಿದು ಪಾಡುವ ಗಾನವ ಕಿವಿಗೊಳಿಸೊಮ್ಮೆ ॥ ೨

ಎಳೆಸಿರಿನೀಳೆಯುರೆಱೆಯುಃ ನಿನ್ನಾಳ್ತನ ।
ದೊಳು ನೆಲೆ ನಿಂದೆಪೆಂದೋಜೆಯಿಂದೆ ॥
ಬಳಸಿ ಪರಾಂಕುಶಪರಕಾಲಾದಿಗಳೆಂತು ।
ಬಳೆಯಿಸುವ್ವೊಱಿಗಂಗಳ ಬಗೆಗೊಳಿಸೊಮ್ಮೆ ॥ ೩

ರಾಗ ॥ ಕಾಂಬೋಧಿ ॥ ಆದಿತಾಳ ॥

ಬಿರಿಮುಗುಳನು ಮಿಗೆ ಬೀಱಿದರು ।
ಸರಿಮಿಗಿಲೆನೆ ಸಿರಿಯುರಸನೊಳಸಿಯರು ॥ ಪಲ್ಲವಿ ॥

ಚರಣ ॥ ಮುಗುಳುನಗೆಯ ಬೆಳಗೊ ತೇಲುವ ಮುದ್ದುನೋಟದ ಬೆಳಗೊ ।
ತಳತಳಿಸುವ ಮಣಿತಾಟಂಕದೊಳುಱೆ ಬಿಗಿದ ಮುತ್ತಿನ ತನಿಬೆಳ್ವಳಗೋ ಎನೆ ॥ ೧

ಸೊಗಸುಕಮ್ಮಲರ್*ಗಳ ಸೂಸಿದರು ।
ಬಗೆಗಾತಿಯರು ಗೋಪಾಲನ ಮೆಯ್ಯೊಳು ॥ ಪಲ್ಲವಿ ॥

ಚರಣ ॥ ಕರರುಹಗಳವೊಗರೊ ಮುತ್ತಿನುಂಗುರಗಳ ಕುಡಿವೊಗರೊ ।
ಕರಕಮಲದ ಮಣಿಕಡಗದೊಳೊಪ್ಪುವ ವರವಜ್ರಂಗಳ ಬೆಳ್ವೊಗರೋ ಎನೆ ॥ ೨

ಮೊಲ್ಲೆಮಲ್ಲಿಗೆಗಳ ಚೆಲ್ಲಿದರು ।
ಚೆಲ್ಲಗಾತಿಯರು ಚೆಲುವ ಗೋವಳನೊಳು ॥ ಪಲ್ಲವಿ ॥

ಚರಣ ॥ ಸೊಗಸುಗೋಪಾಲನೊಳು ಸಜ್ಜನಸನ್ನುತಶೀಲನೊಳು ।
ತಿರುಮಲೆಯಾರ್ಯರ ದೇವರೆನಿಸಿ ಭೂವರಚಿಕದೇವನ ಪೊಱೆದು ಮೆಱೆವನೊಳು ॥ ೩

ವೃ ॥ ಶ್ರೀಮಂತಂ ಯದುಶೈಲವಲ್ಲಭಪದಾಂಭೋಜಾತಭೃಂಗಂ ಗುಣಾ|
ರಾಮಂ ಪಶ್ಚಿಮರಂಗಧಾಮನಗರೀಸಿಂಹಾಸನಾಧೀಶನು ॥
ದ್ದಾಮಶ್ರೀಯದುವಂಶಕಲ್ಪಕತರುಪ್ರೌಢಪ್ರವಾಳಂ ಜಗ |
ತ್ಪ್ರೀಮಂಜೆತ್ತು ನೆಗಳ್ಗೆ ಬಾಳ್ಗೆ ಚಿಕದೇವೇಂದ್ರಂ ಮಹೀಚಂದ್ರಮಂ॥೧೦

ರಾಗ ॥ ವಸಂತಭೈರವಿ ॥

ನಿಗುರಿಸಿ ಗೋಣ್ಗಳಂ ದಿಗಿಭಸಂತತಿ ಸಂತಸಮಿರ್ಪಿನಂ ಮಹೋ |
ರಗಪತಿ ವಿಶ್ರಮಂಬಳೆದು ಮೆಯ್ಮುಱುಮಂ ತಲೆಯೆತ್ತಿ ಬಾಳ್ವಿನಂ ॥
ಸೊಗವಿಡಿದಾಳ್ವಿನಂ ಕಳೆದು ಜೆಂಜೆಮರಂ ಕಮಠಂ ಧರಿತ್ರಿಯಂ |
ಬಗೆಗೊಳೆ ಬಾಹುಪೂರದೆಸಕಂ ತಳೆಸ್ಟೆ ಚಿಕದೇವಭೂವರಾ ॥ ೧೩

ಅಕ್ಕರದೋಮವಂದೆ ಕಱುಪಾಮದು ರೂಢಿಯ ಸತ್ಯವಾಕ್ಯಮೂ |
ರ್ಮಕ್ಕಳೊಳಾಡುವಂದೆ ಕಱುಪಾಮದು ಸಂದ ಪರಾಕ್ರಮಂ ಕರಂ ॥
ತಕ್ಕುಮ ಚಿಕ್ಕದೇವವಿಭುಗಗ್ಗದ ಸತ್ಯಪರಾಕ್ರಮಾಂಕಮೇ |
ನಕ್ಕುಮೆ ಮಿಕ್ಕ ಸೊರ್ಕಿನರಮಕ್ಕಳ ಮೊಕ್ಕಳಕಿಂತು ಪೆರ್ಗಳಂ ॥ ೧೪

ವಚನಂ ॥ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಪ್ರೌಢ ಪ್ರತಾಪಾಪ್ರತಿಮವೀರ ಶ್ರೀನರಪತಿ ಚಿಕದೇವಮಹಾರಾಯರಿಂ ಗೀತಗೋಪಾಲ ಮಹಾಪ್ರಬಂಧದೆರಡುಂ ಭಾಗದೊಳ್ ಶ್ರೀಮನ್ನಾರಾಯಣನ ಗುಣಾನುಭವದಾದ ಸಿತ್ಯಫಲಮಂ ಅವಸಡಿದಾವರೆಯೊಳ್ ಸಂಬುಗೆಯೆಂಬ ತಮಪಾಯಮುಮಂ ನಿರೂಪಿಸುವರ್. ಅದಱೊಳ್ ಪ್ರಥಮಭಾಗದೇೞುಂ ಸಪ್ತಪದಿಗಳೊಳಂ ಪಲವುಂ ತೆಱದ ಕಲ್ಯಾಣಗುಣಂಗಳನನುಭವಿಸುವರ್. ಇದಱೊಳೊರ್ದಲ ಸಪ್ತಪದಿಯೊಳ್ ಯಶೋದಾವೃತ್ತಾಂತವ್ಯಾಜದಿಂ ಶ್ರೀಕೃಷ್ಣನ ಬಾಲ್ಯಕೌಮಾರಲೀಲೆಗಳಂ ನಿರೂಪಿಸುವರ್. ಅದೆಂತೆನೆ ;—

ರಾಗ ॥ ಭೂಪಾಳಿ ॥

ಕಂ ॥ ಜಗದುದಯಸ್ಥಿತಿವಿಲಯಮಾ |
ದಿಗಳಿಂದಂ ಲೀಲೆಗೆಯ್ವಿನಂ ಗೋಪಿ ದಿಟಂ ॥
ಮಗುವೆಂದಪ್ಪಿಕೈತೊಟ್ಟಡನದು |
*ರ್ಮಗುವಾತಿಂ ನಿಪ್ಪದಿಳವಿನಂ ನಿರವಿಸಿದಳ್ ॥ ೧೫

|| ಆದಿತಾಳ ||

ಮೂಡವೆಳಗಾಯಿತೆಚ್ಚಱು ಮುದ್ದುಗೋಪಾಲಾ ।
ಆಡುವ ಮಕ್ಕಳು ನಿನ್ನನಱಸುತ್ತೆ ಬಂದಿವೆ ನೋಡು || ಪಲ್ಲವಿ ||
ಚ|| ಮಂಗಳವಮೂರುತಿಯೆಳಮಕ್ಕಳ ಮಾಣಿಕವೆ ।
ತಂಗಾಳಿಯು ತಣ್ಪೆ ನೆರೆದಿಂಗಳ ಸೊಂಪೆ ||
ಮುಂಗುರುಳನೋಸರಿಸಿ ಮೋಹನತಿಲಕವಿಟ್ಟು ।
ಸಿಂಗರಿಪೆ ನಿನ್ನ ಮಯ್ಸಿಂಗವೆಯೆಚ್ಚಱು ಬೇಗ || ೧
ಕಟ್ಟಾಣಿಮಣಿಯೆಯೆನ್ನ ಕಂದ ಕಣ್ಣ ಪುಣ್ಯವೆ ।
ಪಟ್ಟದ ಕುವರ ಭೂಮಿಭಾಗ್ಯಫಲವೆ ||
ಕಟ್ಟಿದ ಪೊನ್ಗೆಜ್ಜೆ ಕಾಲ ಕಡಗ ಘಲಿಘಲಿರೆನೆ ।
ದಟ್ಟಡಿಯಿಡುವ ಕುಲಧನವೆ ನೀನೆಚ್ಚಱು ಬೇಗ || ೨
ಪೊನ್ನ ಪುತ್ತಳಿಯೆ ಪೊಚ್ಚ ಪೊಸಪೂವಿನ ಸೆಂಡೆ ।
ಕನ್ನಡಿಕಳಸವೆಯೆನ್ನ ರನ್ನದೊಡವೆ ||
ಪೊನ್ನುಡೆಯುಡಿಸಿ ಮೆಯ್ಯ ಪೊಗರ ಪೊಸತೆನಿಸುವೆ ।
ಎನ್ನೆಳಗೋವಳರಾಯಯೆನ್ನಾನೆಯೆಚ್ಚಱು ಬೇಗ || ೩ —೧—

ರಾಗ || ಮಲಹರಿ ||

ಕಂ || ವಸುಧೆಯ ಭಾರಮನಿೞಿಸವೆ |
ಸಿಸುತನದಿಂ ಪೊಱ್ತುಗಳೆವ ಪುಣ್ಯಂ ಕಂಡೆ ||
ಱಿಸಿ ಬಿಸರುಹನಾಭನೊಳಂ |
ಬ *
ತುಸಿದರ್ ಬಿಡುಗಣ್ಣರುಚಿತಕಾರ್ಯೋದಯಮಂ || ೧೬ ||

|| ಧೃವತಾಳ ||

ಎತ್ತಣ ನಿದ್ದೆಯೋೞೇೞು ಗೋಪಾಲಾ ।
ನಿತ್ಯನಿರ್ಮಲ ನಿನಗೇನು ಬಿನದವಿ । ದೆತ್ತಣನಿದ್ದೆಯೋೞೇೞು ಗೋಪಾಲಾ || ಪ||
ಪೊಡವಿಯಾಣ್ಮರೆನಿಸಿ ಪುಟ್ಟಿದ ದಾನವರ ।
ಮಡುಹಿ ಪ್ರೇಮದೊಳು ಮನ್ನಿಸಿ ಸಜ್ಜನರ ||
ವೊಡನೆ ಸದ್ಧರ್ಮಂಗಳನುನ್ನತಿಗೊಳಿಸಿ ಬಂ ।
ದೊಡನಾಡಿಗೋವಳರೊಳೊಡಲುಮುೞಿವರೆ || ೧
ಪೊತ್ತಪೊಱೆಯಿೞುಹಿ ಭೂಮಿಯು ಪೊರೆವನೆಂ ।
ದಿತ್ತ ನಂಬುಗೆವಾತನೀಡೇಱಿಸದಿಂತು ||
ಪತ್ತುಗೆಗೆಯ್ದು ಗೋಪಾಲಕರೊಡನಾಡಿ ।
ಯುತ್ತಮಪುರುಷ ನೀನೊಡಲುಮುೞಿವರೆ || ೨

ಮಾಯೆಗೆ ಸಿಲುಕಿ ಮೆಯ್ಮರೆದಿರ್ಪ ಮಾನವ ।
ರಾಯುಸವಡಗಿಸಲವತಾರವೆಸಗಿ ॥
ಬಾಯು ತೆರೆದು ಮುಕ್ತಿಪದವ ಬಣ್ಣಿಸದೆ ನೀ ।
ನೀಯೆಡೆಯೊಳು ಮಲಗಿರುವುದುಚಿತವೇ ॥೩ —೨—

ರಾಗ ॥ ಮಾಳವಶ್ರೀ ॥

ಕಂ ॥ ಮುಡಿಯಿಂದಡಿವರೆಗಂ ನ ।
ಲ್ದೊಡವುಗಳಂ ತುಡಿಸಲೆಂದು ದಾದಿ ಮನಗೊಂ ॥
ಡೊಡನಾಡಿಗುವರರೊಗ್ಗಿನೊ ।
ಳೊಡೆವೆರೆದೆಬ್ಬಿಸಿ ನುಡಿದಳಂತಚ್ಯುತನಂ ॥ ೧೩

ತಾಳ ॥ ತ್ರಿವುಡೆ ॥

ಮರೆದೊರಗದಿರೇಳು ಮೊಗುಪೆ ಈ ।
ಕಳುಗಾವ ಮಕ್ಕಳು ಬಂದಿವೆ ಕೃಷ್ಣಾ ॥ ಪಲ್ಲವಿ ॥

ಕುರುಳುಪಜ್ಜೆಯು ಸುಣ್ಣಗೊಳಿಸಿ ಚಂಡಿಕೆಗಟ್ಟಿ ।
ತರವೇರುಸುವ ತಾತಿಸರವ ಸುತ್ತಿ ॥
ಅರಳೆಲೆಯುಸು ಪಣೆಗಮರಿಸಿ ಸೊಗಸೆನೆ ।
ತಿರುಮಣಿತಿಲುಕವ ತಿದ್ದಿ ಕಳಿಪುವೆನು ॥ ೧

ಕಳಿವೆತ್ತ ಮುತ್ತಿನ ಕಡಕು ಮಾಗಾಯಿ ಪ ।
ಜ್ಜಳಿಪ ಬಜ್ಜರದ ಬಾವುಲಿಯುನಿಟ್ಟು ॥
ತೊಳಗುವ ಸುಗ್ಗಲ್ಲದೊಳು ದಿಟ್ಟಿಯು ಬೊಟ್ಟ ।
ನಳವುಗೊಳಿಸಿ ನಿಸ್ನ ಫಳಿಲನೆ ಕಳಿಪುವೆ ॥ ೨

ಕೊರಲ ಸರಿಗೆ ಕಂಟಸರ ಪುಲಿಯು ।
ಗುರು ಪೊಂಜರಪಣಿ ತಾಳಿಯು ಜತೆಗೊಳಿಸಿ ॥
ಸರಿಸರಿಪದಕವ ಪವಣುಗೊಳಿಸಿ ಪೀತಾಂ ।
ಬರವನಳವಡಿಸಿ ಭರದಿ ಕಳಿಪುವೆನು ॥ ೩

ಪೊಳೆವ ರನ್ನದ ಬಾಹುಪುರಿ ಭುಜಕೀರ್ತಿ ತೋ ।
ಳ್ವಳೆ ತಾತಿಮಣಿಗಳ ಕೆಳೆಗೊಳಿಸಿ ॥
ತೊಳಪ ಮುಂಗೈಮುರಿ ತೋರಮುತ್ತಿನ ಸರ ।
ತಳುಕಿನುಂಗುರಗಳ ಧರಿಸಿ ಕಳಿಪುವೆನು ॥ ೪

ಒಳುರನ್ನವಿಡಿದ ಪೊನ್ನುಡೆದಾರ ಕಡೆದ ಪ ।
ವಳದ ಸವಡಿಸರಗಳನು ಕಟ್ಟಿ ॥
ನಳನಳಿಸುವ ಪಾದಸಳಿನಕಂದುಗೆಗೆಜ್ಜೆ ।
ಗಳನನುಗೊಳಿಸಿ ಸಿಂಗರಿಸಿ ಕಳಿವುವೆನು ॥ ೫ —೩—

ರಾಗ ॥ ಮಂಗಳಕೈಶಿಕೆ ॥

ಕಂ ॥ ವಾಸವಶಂಕರವಾರಿರು ।
ಹಾಸನರಂ ಮೋಸಗೆಯ್ದು ಮಾಧವನಿರವಂ ॥
ಕಾಸುರಿಯುದೆಳೆಯು ಗೋವಳ ।
ರೋಸರಿಸಲ್ ನುಡಿವರೊಲ್ಮೆಬಲ್ಮೆಗಳಿಂದಂ ॥ ೧೪

ತಾಳ ॥ ಜಂಪೆ ॥

ನಿನ್ನಿಸಾಟವ ಗೆಲಿದು ನೀ ಮಲಗಿದೊಡೆ ಬಿಡುವೆನೆ ।
ಇಂದೆನ್ನ ಮೈಮೆಯು ತೋರ್ಪೆನೇಟು ಗೋವಳರಾಯಾ ॥ ಪಲ್ಲವಿ ॥
ಉಜ್ಜುಗಿಸಿ ನಾವನಿಬರೊಡ್ಡುಗಾಯಾಡುತಿರೆ ।
ಬಿಜ್ಜುಗಿದಂತೆ ನೀ ಬೇಗ ಬಂದು ॥
ಪಜ್ಜಳಿಸುವೆರ್ದೆಯು ಕೆಂಬರಲಿಂಪೆ ಗುಜುಯುಟ್ಟು ।
ಗಜ್ಜುಗವ ಗೆಲಿದೆಯುದ ಗರುವರೆಣಿಸುವರೆ ॥ ೧
ಗುಡುಗುಡಾಡುವ ನೆವದಿ ಸಂಗಡಿಗರೊಡವಾಯ್ದು ।
ಗುಡುಗುಡಿಪ ದನಿಯಿನಿಸು ಕುಂದಿ ಬರಲು ॥
ಒಡನೆ ಶಂಖವನೂದಿಯುಟಿದುದನು ಪೂರೈಸಿ ।
ಕಡೆಹಾಯ್ಸಿ ಗೆಲಿದೆಯುದ ಗರುವರೆಣಿಸುವರೆ ॥ ೨
ಮೊತ್ತವಡೆದಾವು ಕಣ್ಮುಚ್ಚಾಲೆಯಾಟದೊಳು ।
ಕತ್ತಲೆಮನೆಯೊಕ್ಕು ಕಾಣಿಸದಿರೆ ॥
ಬಿತ್ತರಿಸಿ ಚಕ್ರದೊಳ್ಪೆಳಗ ಮರ್ಬಿನ ಕೊರ್ಬ ।
ಕತ್ತರಿಸಿ ಗೆಲಿದೆಯುದ ಗರುವರೆಣಿಸುವರೆ ॥ ೩ —೪—

ರಾಗ ॥ ಬವುಳಿ ॥

ಕಂ ॥ ಪ್ರಳಯಾಂಬುಧಿಯೊಳ್ ಪವಡಿಸಿ ।
ದೆಳಮೆಯು ತೆಟಪಿಂತಿದೆಂಮ ನಿರವಿಸಿ ತಿಳಿವಾ ॥
ಪಟುಯರ್ ಪಟನುಡಿಯಿಂ ಗೋ ।
ವಳಗುವರರ ಕವಡುನಿದ್ದೆಯಂ ಪುಸಿಗೆಯ್ದರ್ ॥ ೧೫

ತಾಳ || ರೂಪಕ ||

ಮಾಯದ ನಿದ್ದೆಯ ಮಟ್ಟುಗೊಳಿಸಿನ್ನು ।
ಮಾರ್ಕಂಡೇಯನಱುಹಿದನಿದಱಾಯುವದೆಮಗೆ || ಪಲ್ಲವಿ ||

ಚ || ಎಲ್ಲಾ ಲೋಕಂಗಳನಿತ್ರೀಯ ನುಂಗಿ ।
ಯುಲ್ಲಾಸವಡಿಸಿ ನೀನುದರದೊಳಿಟ್ಟು ||
ಚೆಲ್ಲವಾಡಿದೆ ಗಡ ಜಲನಿಧಿಶಯನ ।
ಬಲ್ಲೆಬಲ್ಲೆವು ನಿನ್ನ ಬಾಲ್ಯದ ಬಗೆಯ || ೧

ಅಂದೇಕಾರ್ಣವದೊಳಾಲದೆಲೆಯೊಳಾ ।
ಸಂದದೊಳೊಱಗಿ ಕೆಯ್ಯಿಂದಿಬ್ಬದುಯ್ದು ||
ಒಂದು ಕಾಲುಂಗುಟವನೊಲಿದು ಬಾಯೊಳಿಟ್ಟು ।
ಕಂದನಂದದದೊಳಿರ್ದ ಕತೆಯ ಕೇಳಿದುವು || ೨

ಪುಲಿದೊವಲುಡೆಯನು ಬೊಮ್ಮನುಮಂದು ।
ಬಲದ ಮೆಯ್ಯೊಳು ನಾಭಿಪದ್ಮಗರ್ಭದೊಳು ||
ನೆಲಬಲುಮೆಯೊಳಂತು ನಿರ್ಭಯಮಪಡೆಯೆ ।
ಮಲಗಿದೆ ಗಡ ನಿನ್ನ ಮೆಯ್ಮೆಯಱುಯಪೆ || ೩ — ೫ —

ರಾಗ—ಸಾರಾಯಣಿ ||

ಕಂದ || ಪಲವುಂ ಗೋವಳವನೆಯೊಳ್ |
ಪಲಮೆಯ್ಯಿಂ ಪಲವು ಲೀಲೆಯುಂ ಪಸರಿಸಿ ಮು ||
ನ್ನೆಲೆಯೊಳ್ ಮಗುವಿತೆ ಮಱುವ |
ಲಲನೆಯುರಂ ಗೋಪಿ ಜಡಿದು ತಲೆವಾಗಿಸಿದಳ್ || ೭೦

ತಾಳ || ಝಂಪೆ ||

ಎನ್ನಯ್ಯ ನಿದ್ದೆದಿಳಿದೇೞು ಬೇಗ ।
ಆರಯ್ಯದೀಪರಿ ನಿನ್ನ ರಕ್ಷೆಗೆಯ್ವರ ಪಾತ ಪುಣ್ಯನಿಸುತೆ || ಪಲ್ಲವಿ ||

ಚ || ಮನೆವೊಕ್ಕು ತಡಕಿ ನೆಲವಿನೊಳು ಪಱೆಮಾಡಿದೆಳ ।
ಗೆನೆವೊಸರ ಕಂಡಲಸು ಕೀೞುಗೀೞುಹ ||
ಮನವಾಱೆ ಸವಿದುೞಿದ ಮಡಕೆಗಳನೊಡೆದಿಟ್ಟು ।
ನೆನುತ ದೂಱುವ ಗೋಪವನಿತೆಯರು ನಾಣ್ಚಲೆನ್ನಯ್ಯ || ೧

ಕಱೆವುದಕೆ ಮೊದಲೆಯೆಳಗಱುವನುಣಪಿಟ್ಟೋಡಸೆ ।
ತೆಱೆದು ಪಂಜರವ ಗಿಳಿವಱಿಯ ಪಱುಬಿ ||

ಮಱೆದೊಱಗಿದರ ಮೊಗಕೆ ಮಸಿಯು ಪೂಸಿದನೆಂದು ।
ಒಱಲದೆ ಬಂದೊದಱುವೀಭಾವೆಯುರು ನಾಣ್ಚಾಲೆ ॥ ೨

ಸಿಸುಗಳಾಡುವ ಬೊಗರಿಸೆಂಡುಗಳನಪಹರಿಸಿ ।
ಮಿಸುಕಿಯಿದಿರಿಸಲವರ ಮೆಟ್ಟಿ ಸದೆದು ॥
ಅಸಿಯುರದ್ಧರಿಸಲವರಳವುಗಿಡಿಸಿದನೆಂದು ।
ಬಸವಱಿದು ಗಳವುವೀಭಾವೆಯುರು ನಾಣ್ಚಾಲೆ ॥೩ —೬—

ರಾಗ ॥ ದೇವಗಾಂಧಾರಿ ॥

ಕಂದ ॥ ಪರಮಪ್ರಾಪ್ಯಪ್ರಾಪಕ ।
ಮೆರಡುಂ ಸಿರಿಯುರಸನಡಿಗಳೆಂದಿರ್ಪ ಮಹಾ ॥
ಪುರುಷರ್ ಪ್ರೋಟ್ಟಱೆಯಿರವಂ ।
ದೊರೆಗೊಳಿಸಿದರಾದಿಪುರುಷನೇಱಕವ ತೆಱಸಂ ॥

॥ ಅಟತಾಳ ॥

ನಪ್ಪಿಳಗಾದುದು ನವನೀತಚೋರಾ ।
ನಿನ್ನ ಚೆಲ್ವ ನೋಟದ ಕಡೆಸೆಱಗುದೋಱಸು ಕೃಷ್ಣಾ ॥ ಪಲ್ಲವಿ ॥

ಚರಣ ॥ ಮುಸುಕಿದ ಸಂಸಾರಮೋಹವಪಡೆಗೆ ನೀ ।
ನೆಸಗುವ ನಸುನೋಟದೆಟ್ಟರದಂತೆ ।
ಮಸುಳಿಸುವಿರುಳಿನ ಮದದುರ್ಬ ಮಗ್ಗಿಸಿ ।
ಮಿಸುಗಿತು ಮೂಡಣ ದೆಸೆ ಮೋಹನಕೃಷ್ಣಾ ॥ ೧

ಓಜೆವಡೆಯೆ ಸತ್ವದೊಡನಿರ್ದ ತಾಮಸ ।
ರಾಜಸಗಳ ತನಿರಸವಾಱುವಂತೆ ॥
ತೇಜದುನ್ನತಿಯೊಳು ತೆರಳಿತು ಕತ್ತಲೆ ।
ರಾಜಿಪ ಸಂಧ್ಯಾರಾಗದೊಡನೆ ಕೃಷ್ಣಾ ॥ ೨

ಬಿಡದೆ ಪಸರಿಸುವ ಬಿಸ್ನಣದಿಂದೊಡ ।
ಲೊಡೆಯೊಳೊಪ್ಪುವ ಜೀವದೇಱಗೆಯಂತೆ ॥
ತೊಡರಿದ ಬಿಸಿಲಿಂದ ತೊಳಗಿತು ನೇಸಱೆ ।
ಲ್ಲೊಡೆಯೊಳು ಚಿಕದೇವೇಂದ್ರವರದ ಕೃಷ್ಣಾ ॥ ೩ —೭—

ಪ್ರಬೋಧಿಕ ಸಪ್ತಪದಿ ಸಂಪೂರ್ಣಂ.

## — ಸಪ್ತಪದಿ — II

ಶರಣಂ ಶ್ರೀ ಚಿಕದೇವ ನಿನ್ನ ಚರಣಂ ಭೀತರ್ಗೆ ಮತ್ತಂ ಭಯೋ —
ತ್ತರಣಂ ನಿನ್ನ ಪದಾಬ್ಜರೇಣುಭರಣಂ ತಾನೇ ಮಗುಳ್ದಾಪದು ॥
ತ್ಸರಣಂ ತಾವಕದಿವ್ಯನಾಮಕರಣಂ ಮತ್ತಂ ಮಗುಳ್ದಂ ಕುಲೋ ।
ದ್ಧರಣಂ ನಿನ್ನಸಘಾಂಘ್ರ್ಯಾಸ್ಯವರಣಂ ಬೇಱಿಲ್ಲ ಬೇಱಿಲ್ಲ ಕೇಳ್ ॥ ೨೦

ಆರಾಣ್ಮರ್ ಚಿಕದೇವನಾರ್ ನೆಗಳ್ವರಾ ಶ್ರೀಚಿಕ್ಕದೇವೇಂದ್ರನಿ ।
ನ್ನಾರೊಳ್ವರ್ ಚಿಕದೇವನಾರ್ ಸಲಹುವರ್ ಶ್ರೀಚಿಕ್ಕದೇವೇಂದ್ರನಿ ॥
ನ್ನಾರೀವರ್ ಚಿಕದೇವನಾರ್ ಬಳೆಯಿಪರ್ ಶ್ರೀಚಿಕ್ಕದೇವೇಂದ್ರನಿಂ ।
ತಾರಾರುಂ ಬೆಸಗೊಳ್ವ ಪೇಳ್ವ ನುಡಿಯೊಳ್ ಶ್ರೀಚಿಕ್ಕದೇವೇಂದ್ರನೇ ॥ ೨೩

ವಚನ ॥ ಇಂತು ಮೊದಲ ಸಪ್ತಪದಿಯೊಳ್ ಶ್ರೀಕೃಷ್ಣನ ಬಾಲ್ಯ ಕೌಮಾರಲೀಲೆಗಳಂ ಭಾವಿಸಿ ಮೇಗಣ್ಯದುಂ ಸಪ್ತಪದಿಯೊಳ್ ಯೌವನಾರಂಭಲೀಲೆಗಳಂ ನಿರೂಪಿಸುವರ್.

ಆದಿತಾಳ ॥ ರಾಗ—ಕಾಂಬೋಧಿ ॥

ಕಂದ॥ ಪೊಂಗುವ ಪೊಸಮೇಟಿದ ಗೋ ।
ಪಾಂಗನೆ ತನ್ನಳವುಗಿಡಿಸಿ ಮೆಯ್ಮಱೆಯಿಸಿದಾ ॥
ಮಂಗಳಮೂರ್ತಿಯ ಸಿಂಗರ ।
ದಿಂಗಿತಮಂ ಕೆಳದಿಗಿಂತು ಬಣ್ಣಿಪುಗೆ ಪೇಳ್ದಳ್ ॥ ೨೪

ಸೊಗಸುವನೆಗೆಗಳಿಗೆ ಬಗೆಸೋತೆ ಕಾಣಮ್ಮಾ ।
ನಗೆಮೊಗದ ನಲ್ನುಡಿಯ ನಲವುಗಾಱ ಗೋಪಾಲನ ॥ ಪಲ್ಲವಿ ॥

ಚ॥ ಮೆಟ್ಟಿದ ಪಾವುಗೆಯೊಳು ಮಿನುಗುವ ಪೊಂಗೆಜ್ಜೆಗಳ ।
ಕಟ್ಟುಲಿಯುಡಿಗಡಿಗೆ ಘಲಿಬುಘಲಿಱೆನೆ ॥
ನೆಟ್ಟನೆಯೊಡವರುವ ನೇಹಿಗರ ನೆರವಿಯೊಳು ।
ಕಟ್ಟಾಣಿಮಣಿಯೊರ್ವನ ಕೈಲಾಗಿನೊಳೆಯ್ತರುವ ॥ ೧

ನಿಂದುನಿಂದಲ್ಲಿಗಲ್ಲಿಗೆ ನೆರಮನೆಮುಂಮನೆಯೊಳಿರುವ ।
ಅಂದಗಾತಿಯರ ಬಗೆಯನಳವುಗಿಡಿಸುತ ।

ಸಂದಿಸಿದ ಕೆಳೆಯುರೊಳು ಸರಸವಾಡುವ ನೆವದೊ ।
ಳೆಂದಚಂದಗಳ ತೋಱುತಾನಂದದೊಳೆಯ್ತುರುವ ॥ ೨

ಬಟ್ಟದೊಡೆಸೋಂಕಿನೊಳು ಪರವಶಗೊಂಡಂತೆ ಬಿಗಿ ।
ದುಟ್ಟ ಪೊಂದಟ್ಟಿಯು ಸಡಿಗೊಯ್ಯನೊಲೆಯೆ ।
ಕಟ್ಟಿದ ಕಾಂಚಿಯು ಘಂಟೆ ಘಣಘಣಿಱನೆ ಕಾವನ ।
ಪಟ್ಟದಾನೆಯಂತೆ ಮದಪರವಶದೊಳೆಯ್ತುರುವ ॥ ೩

ಪೊಳೆವ ಪೊನ್ನ ಸರಗಳ ಪೊಗರು ಮಿಂಚಿನೊಳೊಗುವಿಗೆ ।
ಕಳೆವೆತ್ತ ಕಾರ ಮುಗಿಲ ಕರುವಿನಂದದಿ ॥
ಬಱಿಕನ್ನವ ಬಯಸದೇಕಭಾವದೊಳು ಬಱಿಸಲು ।
ವೆಳವೆಣ್ಣುಚಾದಗೆಗಳಿಗಿಂಪುದೋಱುತೆಯ್ತುರುವ ॥ ೪

ಕಡುನೇಹಗಾತಿಯವೊಲು ಕೈಸೇರಿದ ಪೊಂಗೊಳಲ ।
ನುಡಿಸಿ ನುಡಿಸಿ ಸಂತಸವಡುವಂತೆವೊಲು ॥
ಒಡನೆ ಬಾಯೊಳು ಬಾಯ್ವಿಱಿಯೊಂದಿರೆಯೊಡಲುಮುಱಿತು ।
ಕಡೆಗಣ್ಣ ತೆಱೆಯು ಮಿಗೆ ಕರೆಗಣ್ಮಿಸುತೆಯ್ತುರುವ ॥ ೫ —೧—

ಕಂ ॥ ವೇಣುವ ನುಡಿಸಲ್ ಪೂಡಿದ ।
ತಾಣಕಮಂ ತನ್ನನೊಲಿಸ ಗೆಯ್ತುಂಗೆತ್ತು ॥
ಜಾಣೆ ಜಗಧೀಶಸಿರಮಂ ।
ಕಾಣಿಸಿ ತಿಳಿಪುತ್ತು ತನ್ನ ಸೊಬಗಂ ಮೆಱೆದಳ್ ॥ ೨೫

ಕೊಳಲ ನುಡಿಪುದೆನ್ನ ಕೂರ್ತು ಕಾಣಮ್ಮ ಎನ್ನ ।
ಕೆಳದಿ ನಿನಗಿದಱೊಳೊಂದೊಳವನೊರೆವೆ ಕೇಳು ॥ ಪಲ್ಲವಿ ॥

ಚ ॥ ಅಡಿಯೊಂದನೂಱಿ ನಿಂದಡೆ ಮುಂದಕೆ ಮತ್ತೊಂ ।
ದಡಿಯನಡವಾಯಿಸುವಂದದಿಂದ ॥
ಕಡೆಗೆ ತೊಲಗದಂತೆನ್ನಡಿಯನಳವಳಿಸಿ ।
ಪಿಡಿದೊತ್ತಿಗೆಱೆದುಯ್ವ ಬೆಡಗ ತೋಱುವನಮ್ಮ ॥ ೧

ಸೊಗಸುಗೊಳಲನಾಂತು ಸೊಗಯಿಪ ತೋಳ್ಗಳ ।
ನೆಗಹಿಯುಮರಿಸುವ ನೆವದೊಳೆನ್ನ ॥
ಬಗೆಗರಗಿಸುತ ಮೋಲ್ವಾಯ್ವು ಪಿಡಿದು ಬಿಗಿ ।
ಬಿಗಿದೆಮರ್ದಪ್ಪುವ ಬಿಷಗ ತೋಱುವನಮ್ಮ ॥ ೨

ಕಡುಸೊಬಗಿಂದ ಕೊಳಲೆಡೆಯೊಳ್ಳಿಂದುಟಿಯುನಿ।
ಟ್ಟೊಡನೆ ಪೂರೈಸುವೊಂದೋಜೆಯಿಂದ ॥
ಪಡಗರ ಮಿಗೆ ಪೊಗಸಸಿಯು ಪೊಗದೊಳಿಟ್ಟು ।
ಬಿಡದೆ ಮುದ್ದಿಸುವೊಂದು ಬೆಡಗ ತೋಱುವನಮ್ಮ ॥ ೩ —೨—

ಕಂ ॥ ಒಡವೆರೆವೆಳವೆಯ ಜವ್ವನ ।
ದೆಡೆಯಾಟದೊಳೆಸೆವ ಕೊಳಲ ಗೋವಳನೊಡಲಂ ॥
ತೊಡರ್ದೊಳ್ಪಸದನಮೊಸಟ
ಣ್ಪಿಡಿವಿರೆ ತನ್ನಂತೆಗೆತ್ತು ಕೆಳದಿಯುಸುಸಿರ್ದಳ್ ॥ ೧೬

ಕಣ್ಣಿನಲ್ಲಿ ಕಟ್ಟಿದಂತಿದೆ। ಬಣ್ಣವಾತಲ್ಲವೆನ್ನಂತೆ ಭಾವಿಸಿ ನೋಡಬಾರದೆ ॥ಪ॥

ಚ ॥ ಸೂಡಿದ ಸೋಗೆಗಱಿಯು ಕಡುಸೊಂಪು ।
ಸೊಗಸುವಡೆದ ಸುಱಿಗುರುಳಿನ ಗುಂಪು ॥
ಆಡುವ ಮುರುಕುವಮಾಗಾಯ್ಗಳ ಪೆಂಪು ।
ಕೂಡೆ ಕುಣಿವ ಕುಡುಪ್ಪುರ್ವಿನಲಂಪು ॥ ೧

ಕೊಳಲೆಡೆಗೆಡೆಗಮರುವ ಕೆಂಬೆರಲು ।
ಕೊನಬುವಡೆಯೆ ಕೊಂಕುವ ಗಱಿಗೊರಲು ॥
ತಳತಳಿಸುವ ತೇಲುವ ಕಣ್ಮಲರು ।
ತನಿಗಂಪನು ಸೂಸುವ ಸುಯ್ಯೆಲರು ॥ ೨

ಸಿರಿಯೆದೆಯೊಳು ತೊಳಗುವ ಪುಲಿಯುಗುರು ।
ಸಿಂಗರಿಸಿದ ಸಿರಿಗಂದದ ತಿಗುರು ॥
ಕೊರಲ ದಂಡೆಯ ತೊಳಸಿಯ ಪೊಸಚಿಗುರು ।
ತೆರೆಮುಸಗುವ ಪೊಂದುಗುಲದ ಪೊಗರು ॥ ೩

ಮುಳಿದು ಯಶೋದೆ ಕಟ್ಟಿದ ಪೊಡೆದಾರ ।
ಮುದ್ದುವಡೆದ ನೇವಳದುಡಿದಾರ ।
ಬಳಸಿದ ಪವಳಸರದ ಸಿಂಗಾರ।
ಬಣ್ಣದುಡೆಯ ಬಿಗಿದುಟ್ಟ ವೈಯ್ಯಾರ ॥ ೪

ಒಂದಡಿ ತಲದೊಳು ನಿಂದಿಹ ನಿಲವು ।
ಮತ್ತೊಂದಡಿಯನು ಸಾರ್ಚಿದ ಬಲುಗೆಲವು ॥

ಮುಂದೆಯು ಪಸುಗಳ ಮನ್ನಿಪ ನಲವು ।
ಮಡವ ಸವಿವ ಸಲ್ಲುಱುವಿನೊಳೊಲವು ॥ ೫ — ೩ —

ಕಂದ॥ ಸಿರಿಗೆಯ್ಗೆ ಸೇರಿ ಕಿವಿಗಿಂ ।
ಚರವಂ ಕಱೆವಧರಸುಧೆಯನೀಂಟುವ ಕೊಳಲಂ ॥
ಸರಿಸವತಿಗೆತ್ತು ಕಱುಬು ।
ತ್ತೊರೆದಳ್ ತನ್ನಂತರಂಗಮಂ ಕೆಳದಿಯರೊಳ್ ॥ ೧೨

ಏನು ನೇಮದೊಳಿರ್ದುದೊ ಪೊಂಗೊಳಲೇನೋಂತುದೊ ಕೆಳದಿ ।
ತಾನೊಲಿದಿನಿಯನ ದಕ್ಕುಗೊಳಿಸುತಿದೆ ॥ ಪಲ್ಲವಿ ॥

ಚ ॥ ಪಿಂದು ಮುಂದನಾರಯ್ಯದೆ ಬೆದಱು ಬೇವಸಗೊಳದೆ ।
ಮುಂದುವರಿದಿನಿಯನೊಳು ಮೋಹವಡೆದು ॥
ಕೆಂದಾವರೆಯೆಸಳ್ಗಳ ಕೆಳೆಗೊಂಡು ಮೆಱೆವ ಕೆಯ್ಯ ।
ಚೆಂದಳದ ಸೋಂಕಿನೊಳು ಸಂದು ಸೊಗವಡುತಿದೆ ॥ ೧

ಬಳಸಿದರ ಬಗೆಯದೆ ಭರದಿಂದ ಪಿಂದೆಗೆಯದೆ ।
ತಳುವದಿನಿಯನೆಣಿಸುವ ದಾರಿವಿಡಿದು ॥
ಅಳುಕದೆಯವನ ಕಿವಿಗಮೃತರಸದ ಸೊನೆಯು ।
ಸಳಪ್ಪಗೊಳಿಸುತ ಮಿಗೆಯಾನಂದವಡೆಯುತಿದೆ ॥ ೨

ಇವರಿವರಿಗಳುಕದೆಯೆಡಬಲವನೇಣಿಸದೆ ।
ತವಕದಿಂದವನ ಮೊಗದಾವರೆಯೊಳು ॥
ಕವಿದು ಬಾಯೊಳು ಬಾಯಿಟ್ಟು ಪವಳದುಟಿಯೊಳುಜೇನ ।
ಸವಿದು ಸವಿದೀಂಟುತ ಮಿಗೆ ಸಂತಸವಡೆಯುತಿದೆ ॥ ೩ — ೪ —

ಕಂದ॥ ಇನಿಯಂ ತನ್ನೊಳ್ ಬೞಯಿಸು ।
ವಿನಿಗೆಯ್ತ್ತಮನೆಸಿತನೆಳಸಿದಳ್ ಮನದೊಳ್ ತಾ ॥
ನನಿತಂ ಕೊೞಲುಲಿಗಳೊಳೇ ।
ಅನುಭವಿಸಿದ ಸೊಗಸನಿಂತು ಕೆಳದಿಯೊಳುಸಿರ್ದಳ್ ॥ ೧೮

ಸೊಗಯಿಸುತಿದೆ । ಕೊಳಲುಲಿಯಿಂತು ಸೊಗಯಿಸುತಿದೆ ।
ಬಗೆಗರಗಿಸಿ ಮಿಗೆ ಪರವಶಗೊಳಿಸುತ ॥ ಪಲ್ಲವಿ ॥

ಚ ॥ ಬಿಗುಹ ಬಿಡಿಸಲೆಂದು ಬೆದಱಿಸುವಂತೊಮ್ಮೆ ।
ಬಗೆಯಱಿತೊಡನೊಡಬಡಿಪಂತೊಮ್ಮೆ ॥

ಸೊಗಸುಮಾತುಗಳಿಂದ ಸೊಕ್ಕುಗೊಳಿಪಂತೊಮ್ಮೆ।
ನಗುತ ನಗುತ ಮಿಗೆ ನಲ್ಲುಬಿವಂತೊಮ್ಮೆ ॥ ೧

ಮುನಿದಿದಿರೊಳು ನಿಂದು ಮೂದಲಿಪಂತೊಮ್ಮೆ ।
ಮುನಿಸ ತಿಳುಹಲೆಂದು ಮುದ್ದಿಪಂತೊಮ್ಮೆ ॥
ಇನಿಮಾತಿನಿಂದೆಸಗುವಿಜ್ಜ ಕದಂತೊಮ್ಮೆ ।
ಮನಗರಗಿ ನುಡಿವ ಮೆಲುಕಮಾತಿನಿಂತೊಮ್ಮೆ ॥ ೨

ಕರೆದು ಸಂತಸದೊಳೇಕಾಂತಮಾಡುವಂತೊಮ್ಮೆ ।
ಮರುಳುಗೊಳಿಪ ಮೋಹಮಂತ್ರದಂತೊಮ್ಮೆ ॥
ಎರೆಹೊರೆಯಿನಿತಿಲ್ಲದೆಚಕಮಾತಿನಂತೊಮ್ಮೆ ।
ಸರಸದೊಳೆಸಗುವ ಸನ್ನೆಮಾತಿನಿಂತೊಮ್ಮೆ ॥ ೩ —೫—

ಕಂದ॥ ಸಿಟ್ಟಿಸೆಯಾಲಿಸೆ ಜಾಣಿಸೆ ।
ಬಟ್ಟಮೊಗಂ ವೇಣುನಾದವನಾಮೆಯ್ಸಿರಿಯುಂ ॥
ತೊಟ್ಟಸೆ ಕಣ್ಕಿವಿಬಗೆಗಳ್
ಬಟ್ಟೆಗೆ ಬರ್ಸಂದಪಂ ಪುಸಂಬುಗೆ ಪೇಟ್ರಿಳ್ ॥ —೯

ಏಮೇಬುಪೆಸೆನ್ನ ಬಗೆಯು ।
ಗೋಮಳರರಸನಿಂತು ಕೋಟಲೆಗೊಳಿಪನಮ್ಮ ॥ ಪಲ್ಲವಿ ॥

ಚ ॥ ನಿಟ್ಟಿಸಿದೆಡೆಯೆಲ್ಲಾ । ತೋಲುವ। ನಿಡಿದಾವರೆಗಣ್ಣ। ಯಿಟ್ಟ ಕತ್ತುರಿನಾಮುದ ಕುಡುವುರ್ವಿನ । ಬಟ್ಟಮೊಗದ ಬಣ್ಣಿಗೆ ಪಸರಿಸುತಿದೆ ॥ ೧

ಆಲಿಸುವೆಡೆಯಲ್ಲಾ । ಅಡಿಗಡಿಗಮೃತದ ಪೊಸಲಂತೆ। ಲೀಲೆ ಕೈಮಿಗೆ ಕೊಳಲಿಂದುಣ್ಮುವ ರಾ । ಗಾಲಾಪದೆ ಕಿವಿಗನುಗೊಳಿಸುತಲಿದೆ ॥ ೨

ಸಂದಿಪ ನೆನಹೆಲ್ಲಾ । ಚೆಂದುಟಿಯೊಂದಿದ ಪೊಂಗೊಳಲ । ಒಂದಡಿಯೂಱಿ ಮತ್ತೊಂದಡಿಯುಸು ನಾರ್ಚಿ। ನಿಂದ ನೆಲೆಯುನುಱೆ ಬಂದಿಗೊಳುತಲಿದೆ ॥೩ —೬—

ಕಂ ॥ ಎಡೆವಿಡಪೆ ಜಾಸದಿಂ ಸಿರಿಯೊಡ ।
ಲೆಡೆಗಳೊಳೊಂದುವೆರಸಿಯುದಱೆಱೆಸಕಂ ॥
ಬಡೆವೆಸೆವ ತನ್ನ ಚಿತ್ತದ ।
ಕಡುಕರ್ಮೆಯನೊರೆದು ಮೆಱೆವಳೊಳ್ಗದಿಯರೊಳ್ ॥ —೯

ಪಲಕ್ಷಿಜನಾಗುತಿದೆ। ಯೆನ್ನ ಮನಸು । ಪಲಕ್ಷಿಜನಾಗುತಿದೆ ।
ಚೆಲುವ ಗೋಪಾಲನ ಮೆಯ್ಸಿರಿಯ ಬಱಿವಿಡಿದು ॥ ಪಲ್ಲವಿ ॥

ಚ ॥ ಸುಱಿಗುರುಳಿನೊಳಱಿ ಸುತ್ತುವರಿಯುತಿದೆ ।
ತೊಳಪ ನುಣ್ಬಣೆಯೊಳು ತೊಳಗುತಿದೆ ॥
ಎಳವೆಱೆನಾಮದೊಳು ಇನಿಸು ಕೊಂಕುತಲಿದೆ ।
ತಳಿರುವ ನೋಟದೊಳು ತಣ್ಪುವಡೆಯುತಿದೆ ॥ ೧

ಸಲಿವ ಪುರ್ಬಿನೊಡನೆ ಸಲಿಸಲಿದಾಡುತಿದೆ ।
ಉಲಿವ ಪೊಂಗೊಳಲೊಡನುಲಿಯುತಿದೆ ॥
ಅಲೆವ ಬೆರಲ್ಗಳೊಡನಲೆವಡೆಯುತಿದೆ ।
ಒಲೆವೊಳುಗೊರಲೊಡನೊಯ್ಯನೊಲೆಯುತಿದೆ ॥ ೨

ಸರಿಸದೊಳ್ಳಡಿಯುಂತೆ ಸರಿಸವೆನಿಸುತಿದೆ ।
ಬೆರಲೂಱುದಡಿಯುಂತೆ ಬಿಂಕದೊಳಿರೆ ॥
ನರಪತಿ ಚಿಕದೇವನಾಥ ಶ್ರೀಗೋಪಾಲನ ।
ಸರಸಗುಣಗಳಂತೆ ಸರಸವೆನಿಸುತಿದೆ ॥ ೩ —೭—

ಪ್ರಥಮಾನುರಾಗ ಸಪ್ತಪದಿ ಸಂಪೂರ್ಣಂ.

## —ಸಪ್ತಪದಿ— III

ಪಿಡಿವ ಕಚಾಗ್ರಮಂ ಸಳೆಯೆ ನೀಂ ಜಯಲಕ್ಷ್ಮಿಯ ನಾಜಿರಂಗದೊಳ್ ।
ತೊಡತೊಡರುತ್ತೆ ಮುಂಬರಿವ ನಿನ್ನಡಿಯಂ ಬಿಡದಿರ್ಪಳೊಲ್ಮೆಯಿಂ ॥
ಕುಡೆ ಚಿಕದೇವ ನೀನಭಯಮಂ ಪಗೆವರ್ನಿಜದೇಶಕೋಶಮಂ ।
ಕುಡುವರದೆಂತವರ್ ನಿನಗೆ ನೋಲ್ಪರಪ್ರತಿಮಾ ವಿಚಾರಿಸಾ ॥ ೩೦

ಅಡರ್ವರ್* ತಾಂ ಮೇರುಶೃಂಗಕ್ಕರಿಗಳಪರೆ ನೀಂ ತನ್ಮಹಾದುರ್ಗಮಂ ಪಾ।
ಯ್ದು ಶಿವಸ್ವರ್ದ್ವಾರಮಂ ತಾಮುಡಿಯೆ ಪುರುಪುರೀಗೋಪುರವ್ರಾತಮಂ ನೀಂ ॥
ಪಿಡಿವರ್ಬಾಣಂಬೆಣ್ಡಿರಂ ತಾಂ ಪಿಡಿಯೆ ಜಡಿದುತತ್ಕನ್ಯಕಾರತ್ನಮಂ ನೀಂ ।
ಸುಡಿ ನೀನಿಂತಿರ್ದೊಡೆಂತಪ್ರತಿಮನೆನಿಸುವೈ ಶೂರಲೋಕೈಕವೀರಾ ॥ ೩೧

ವಚನ || ಈ ಮೂಱನೆಯ ಸಪ್ತಪದಿಯೊಳ್ ಶ್ರೀಕೃಷ್ಣನಂ ಕೂಡಿಯಗಲ್ದ ವಿರಹಿಣಿಯರ ವಚನವ್ಯಾಜದಿಂದವನ ಗುಣಂಗಳಂ ಪೇೞ್ವರ್.

ರಾಗ—ಕಾಂಬೋಧಿ || ಆದಿತಾಳ ||

ಮಂಗಳಮೂರುತಿ ಮೆಯ್ದೋಱನಮ್ಮ । ಮನವಿಡಿದಿರಲಾಱೆನಮ್ಮ ||ಪಲ್ಲವಿ||

ಚ || ನಲಿಯುತೆನ್ನಿದಿರಿಗೆ ನಡೆತಂದನಮ್ಮ । ನಡೆದು ನಾಣ್ಗೆಡಿಸಿದನಮ್ಮ ||
ಹಲವು ಮೆಯ್ಸಿರಿಗಳ ಹರಹಿದನಮ್ಮ । ಹರಹಿ ಹದಗೆಯ್ದನಮ್ಮ || ೧

ಕಡೆಗಣ್ಣ ತೆರೆಗಳ ಕವಿಸಿದನಮ್ಮ । ಕವಿಸಿ ಕೈಗಿಡಿಸಿದನಮ್ಮ ||
ಕುಡುವುರ್ಬುಗಳ ಮೀಗೆ ಕುಣಿಸಿದನಮ್ಮ । ಕುಣಿಸಿ ಕಗ್ಗೊಲೆಗೊಂಡನಮ್ಮ || ೨

ಕೊಳಲ ನುಡಿಸಿ ಮೋಸಗೊಳಿಸಿದನಮ್ಮ । ಗೋಪಾಲನೆಲ್ಲಿದನಮ್ಮ ||
ಒಳುವಗೆಯೊಳಗೆನ್ನನೊಳಗುಗೆಯ್ದನಮ್ಮ । ಒಳಗುಗೆಯ್ದೋವಿದನಮ್ಮ || ೩ ||

—೧—

ಏವೆನಮ್ಮ । ಏನೆನಮ್ಮ । ಏವೇನೀಮಾಯಕಿನ್ನೇಗೆಯ್ವೆನಮ್ಮ || ಪ ||

ಚ || ಎರೆಹೊರೆಯಿಲ್ಲದವೋಲಿರುವನಮ್ಮ । ಒಡನಿರುವನಮ್ಮ ।
ಒಱೆದೆ ಬೆಱೆವುದೆ ಸರಿಯಾಗುಬೇಗೆ ಬೇಱೆಯಮ್ಮ ||
ಪರಿಪರಿದು ಪಡದ ಪಾಡುವಡಿಪನಮ್ಮ ।
ಕಡೆಗೆ ಪರಿಕಿಸೆ ತಾನಲ್ಲವೆಂದು ಪರಿವನಮ್ಮ || ೧ ||

ಪುಟ್ಟುಗೆಯ್ಮೆ ನಾಡಂತಲ್ಲ ಪೊಸತಮ್ಮ । ಪೊಚ್ಚ ಪೊಸತಮ್ಮ ।
ಅವನಿಟ್ಟ ಗಂಟ ಬಿಡುವರು ಬೇಱಿಲ್ಲವಮ್ಮ ||
ಪಟ್ಟಪಗಲನಿರುಳೆನಿಪ ದಿಟ್ಟನಮ್ಮ । ಬಲು ।
ಬೆಟ್ಟವ ಪೊಟ್ಟುಗಳೆವ ಬೀರನಮ್ಮ || ೨ ||

ಮಂಗಳಾಂಗವನು ತೋಱಿ ಮಱೆವನಮ್ಮ ।
ಜಗದ ಕಂಗಳೊಡನೆ ಮನಸ ಕಳುವನಮ್ಮ ||
ಹೆಂಗೊಲೆಗಿನಿನಾಡರು ಹೇಸನಮ್ಮ । ( ಇನಿಸುಹೇಸನಮ್ಮ ) ।
ಆ ಅಂಗಜನ ಹವಣಲ್ಲ ಅವಸ್ಥೆಯನಮ್ಮ || ೩ ||

—೨—

|| ರಾಗ — ಯದುಕುಲಕಾಂಬೋಧಿ ||

ಕಾಣಿರೆ ನೀವೆನ್ನಿನಿಯನನೆಲ್ಲರ ಕಣ್ಣ ಪುಣ್ಯದ ಬೆಳಸ । (ನಮ್ಮೆಲ್ಲರ ಕಣ್ಣ ಪುಣ್ಯದ ಬೆಳಸ) । ತಾಣತಾಣದೊಳು ತಡೆದು ತಡೆದು ನವಿಗಾಣಿಸಿ ಹರಣವ ಕೇಣಿಗೊಂಬವನ || ಪಲ್ಲವಿ ||

ಚರಣ|| ನೋಟದ ಸುಳುಹಿನೊಳೇ ಮುನ್ನಿನ ಮಾಟವ ಮಱೆಯಿಪನ ಪುರ್ಬಿ। ನಾಟದೊಳೆಲ್ಲರನಳವುಗಿಡಿಸಿ ಮಿಗೆ ಕೋಟಲೆಗೊಳಿಸುವ ಕೊಳಲುಗೋವಳನ || ೧

ಸಿರಿಮೊಗದೊಲಪಿನೊಳೇ ನೋಳ್ಪರ ಕರಣವ ಕಲಕುವನ ಮೆ । ಯ್ಸಿರಿಯೊ
ಳಾನಂದದ ಸೆರೆಯುನಲುಗಿ ಮಿಗೆ ಹರವಸಗೊಳಿಸುವ ಹರಿಯುನೀಂಪಿಡೆಯು ॥ ೨ ॥

ಪೊಂಗೊಳಲುಲುಹಿನೊಳೇ ಲೋಕಕೆ ಮಂಗಳವೆಸಗುವನ, ತನ್ನಿಂಗಿ ।
ತಂಗಳೊಳಗೆಳವೆಣ್ಗಳನುೞೆ ಗುಂಗುದಿಗೊಳಿಸುವ ಕೊನಬುಗೋವಳನ ॥ ೩

— ೩ —

॥ ರಾಗ — ಕಾಂಬೋಧಿ ॥

ಕಂಡಿರೇನೆ । ಕಂಡಿರೇನೆ । ಕಂಡಿರೆಯೆನ್ನಿನಿಯನ ಕಂಡಿರೇನೆ ।
ಕಂಡವರು ಮಾಜದಿರಿ ಕಾಲಿಗೆಱಗುವೆನೆನ್ನ ಪುಂಡರೀಕಾಕ್ಷನು ಪೋದ
ಪೊಲಬ ತೋಱಿರೆ ॥ ಪಲ್ಲವಿ ॥

ಚ ॥ ಎಡಬಲಗಡೆಗೆ ಸಿಡಿಪೆಳವೆಣ್ಣುವಕ್ಕಿಯು ಪಿಡಿವ ।
ಬಡಿಪಲೆಯು ಪೋಲ್ವ ಪೊಸಬಗೆಯು ನೋಟದ ॥
ನುಡಿವ ಪೊಂಗೊಳಲ ಗತಿವಿಡಿದೆನ್ನೆರ್ದೆಯುಂತಾಡುವ ।
ಕಡುಪ್ಪುರ್ವಿನ ಕೊಂಕುಗುರುಳ ಕೊನಬುಗಾಱನ ॥ ೧ ॥ — ೪ —

॥ ರಾಗ — ಕಾಂಬೋಧಿ ॥

ಪಿಸೆಯುಮ್ಮ ಪಿಸೆಯುಮ್ಮ । ಇದೇನಿಂತು ತಪಿಸ್ನೀತಕಮ್ಮ ॥ ಪ ॥

ಚ ॥ ಮುದ್ದುನಗೆಯು ಬಲೆಗೆ ಸಿಕ್ಕುಬಿದ್ದೆನಮ್ಮ । ಕೊಳಲ ।
ಸದ್ದುಗೇಳಿದಂದೆ ಬೆಲೆಗೆ ಸಂದೆನಮ್ಮ ॥
ಅದ್ದೆನು ವಿರಹಾಂಬುಧಿಯೊಳದ್ದೆನಮ್ಮ । ಅವನ ।
ಪೊದ್ದುಗೆಗೊಳಿಸಿ ಗೆಲವ ಪೊಣ್ಮಿಸಮ್ಮ ॥ ೧

ಬಣ್ಣವಗೆಯು ಬಲೆಣಿಯೊಳು ಬಂದೆನಮ್ಮ । ಯೆನ್ನ ।
ಪೆಣ್ಣುಬುದ್ಧಿಯಿಂದ ನೊಂದು ಬೆಂದೆನಮ್ಮ ॥
ತಣ್ಣಡಿನೆಟಲಿಗಾಸೆದಳೆದೆನಮ್ಮ । ಕಾರು ।
ವಣ್ಣನೊಙ್ಗದ ಸಿರಿಯುನೊದವಿಸಮ್ಮ ॥ ೨

ವೇಣುವಿಡಿದ ಬಿಂಕಕೆ ಬೆಱತೆನಮ್ಮ । ಅವನ ।
ತಾಣಕದಂಡದೊಳುೞೆ ತಣಿದೆನಮ್ಮ ॥
ಕಾಣೆನಿನ್ನು ಬೇಱೆಗತಿಯು ಕಾಣೆನಮ್ಮ । ನೀನೆ ।
ಕಾಣಿಕೆಗೆಯ್ವುವನಿಗೆನ್ನ ಕರುಣಿಸಮ್ಮ ॥ ೩ — ೫ —

॥ ರಾಗ — ಮುಖಾರಿ ॥

ನಲ್ಲನೆಂದು ನಂಬಿದೆನಮ್ಮ । ಇಂತು ।
ಕಲ್ಲೆರ್ದೆಯುಮನೆಂಬುದ । ಕಂಡು ಕಾಣದಾದೆನಮ್ಮ ॥ ಪ ॥

ಚ ॥ ಬಲುವಾವ ಪುಲ್ಸರವೆನಿಸುವನು ।
ಪಟ್ಟೆಪಗಲೆ ನೇಸಱನು ಮಱಸುವನು ।
ಬೀಸುವೆಲರ ಪಿಡಿದು ಕೆಡಪಿ ತ್ರೋಱಸುವನು । ಜನರ ।
ತಲೆಯೊಳು ಬರೆದ ಬಿದಿಯು ತಬ್ಬಿಬ್ಬುಗೊಳಿಸುವನು ॥ ೧ ॥
ಏನೆನಿವನ ಮಹಿಮೆಗಳನೇಕ ।
ಜಗದೊಳಿಲ್ಲನಿವನಿಗೆ ಸರಿ ತೂಕ ।
ಇನ್ನೇನೇಱುವೆನಿವನದೊಂದು ದಾಕ ಯುವನ ।
ಮೂವಣ್ಣದ ಮಾಯೆಯೊಳು ಮುಳುಗಿಹುದೀಲೋಕ ॥ ೨
ಜಗದ ಜಾಲಗಾಱನೊಳಿವನೇ ಮೇಲು ।
ಇನಿಸು ಸಡಿಲದಿವನಿಟ್ಟ ಕಾಲ ಕೀಲು ।
ಈಜಗವೆಲ್ಲಾಯಿವನೆಸಳೊಂದು ಪಾಲು ।ಮೇಗೆ ।
ಬಗೆಬಗೆಯೊಳಿಹುದಿವನ ಸೊಗಸು ಮೂಱುಪಾಲು ॥ ೩ ॥ —೬—

॥ ರಾಗ—ಘಂಟಾರವ ॥

ಗೋಪಾಲನ ತೋಱೆ ಗೋಪಾಲನ ತೋಱೆ । ಗೋಪಾಲನ ತೋಱೆ
ಗೋಪಾಲನ ತೋಱೆ । ಈಸಬಗನ ಸೇವೆಯಿಲ್ಲದಿರಲಾಱೆ ॥ ಪಲ್ಲವಿ ॥
ಚ ॥ ಮುದ್ದುಮುದ್ದುಮೊಗದೊಳೆಸ್ಕ ಮೊಗವಿಟ್ಟು ಮುದ್ದಿಸು ।
ತಿದ್ದಲ್ಲದೀಬಾಯೊಡಲನಿಸ್ನು ಪೊಱಲಾಱೆ ॥ ೧
ಪೊಗರೊಗುವ ಪಕ್ಕೆ ಮಣಿಯು ಪೋಲ್ವ ಸಿರಿಮೆಯ್ಯ ।
ಬಿಗಿಬಿಗಿದಪ್ಪದೀಯೊಡಲ ಬಿಟ್ಟೇಗೆಯ್ಯಗಾಱೆ ॥ ೨
ಚಿಕ್ಕದೇವೇಂದ್ರಗೊಲಿದ ಸಿರಿಗೋವಳನಡಿಗೆ ।
ಪಕ್ಕದೀಯೊಡಲ ಸೆಱೆಯು ಸಿಕ್ಕದೊಡಕಿಗಾಱೆ ॥ ೩ —೭—

ಐದನೆ ಸಪ್ತಪದಿ ಸಂಪೂರ್ಣಂ.

— ಸಪ್ತಪದಿ — IV

ಥಿಳ್ಳಿಯುಬಾಗಿಲೊಳ್ ಪರಿವ ಕೊಳ್ಳಮಕೊಂಡಱೆ ಗೋಲಕೊಂಡೆಯುಂ ।
ಜಳ್ಳಿಸಿಯೆಕ್ಕಲಿಕ್ಕಿ ವಿಜಯಾಪುರಮಂ ಬಱಿಗೆಯ್ದು ಸೊರ್ಕಿನಿಂ ॥
ವಳ್ಳಿರಿವಾಶಿವಾಜಿಸುತ ಶಂಭುಜಿಯೆಱ್ಗೆಯುಮುಬ್ಬುಗೊಬ್ಬುಮಂ ।
ತೆಳ್ಳನೆಗೆಯ್ದು ಸಪ್ತಪರಾಕ್ರಮದಿಂ ಚಿಕದೇವಭೂವರಂ ॥ ೩೨

ಮಯನೋ ಶಂಬರನೋ ದಶಾಸ್ಯಸುತನೋ ಮಾರೀಚನೋ ಎಂಬಿನಂ ।
ಭಯದಿಂದಾಗಲೆ ಥಿಳ್ಳಿ ಭಾಗವಗರಪ್ರಾಂತಂಗಳೊಳ್ ಸಾಧುಗಳ್ ॥
ಜಯಜೀಯೆಂದಿದಿರಿಟ್ಟು ಕಪ್ಪದೊಡವಿಂ ಪೊಕ್ಕೀಯು ಬಂದಾತಿವಾ ।
ಜಿಯ ಸೊರ್ಕಂ ಮುರಿದಿಕ್ಕಿಯಪ್ರತಿಮವೀರಾಭಿಖ್ಯೆಯಂ ತಾಳ್ದಿದಂ ॥ ೨೨

ವಚನ ॥ ಈ ನಾಲ್ಕನೆಯ ಸಪ್ತಪದಿಯೊಳ್ ವಿರಹಿಣಿಯರ ವಿರಹೋದ್ರೇಕಮಂ ಶ್ರೀಕೃಷ್ಣನೊಳ್ ಬಿನ್ನವಿಸ ದೂತಿಯರ ವಚನವ್ಯಾಜದಿಂ ಶ್ರೀಕೃಷ್ಣನ ಗುಣಾತಿಶಯಮುಮಂ ಪ್ರಕಟಿಸುವರ್.

॥ ರಾಗ—ಯರಕಲಕಾಂಬೋಧಿ ॥

ಕಂದ॥ ಕಡುಗೂರ್ತನ ಕಣ್ಮಸಂ ಸೊಂ ।
ಶೊತ್ತಡಗೂಡುವ ಸ್ವೈಪನದೆಯೊಳಾಳೋಚಿಸುತುಂ ॥
ಕಡೆಗಾಣದಲಸುವಿಸಿಯಳ್ ।
ಮಿಡುಕಂ ಗೋವಿಂದನೊಡನೆ ದೂದಿ ಪೇಳ್ದಳ್ ॥ ೨೩

॥ ತಾಳ – ಝಂಪೆ ॥

ದೇವರೊಲವನು ಮನದಿ ಲಾವಣಿಗೆಗೊಂಬಳು ।
ಈವಿಧದಿ ನೀನವಳನೆಣಿಸದಿರುವರೆ ಕೃಷ್ಣ ॥ ಪಲ್ಲವಿ ॥
ಚ ॥ ಪಿಡಿದ ಬೆಳ್ಳಿಲೆಪಡಿಪು ಪಿಡಿದಂತೆ ಕಂದುತಿದೆ ।
ಅಡಸಿದೊಳ್ಳಡಕೆಯುಗ್ಗಳಿಸದಿರಲು ॥
ಕುಡಿಪುರ್ವ ಪಲತೆಱು ಕೊಂಕುಗೊಳಿಸುತ್ತಿಪೆ ।
ಲ್ಲೊಡಲ ಜಡಮುರಿದು ನಿಟ್ಟುಸಿರುವಿಡುತಲಸುವಳು ॥ ೧
ಬಳಸಿ ಮುಡಿವರ ಮಾತು ಬಾಯಿಲೊಳಗೆ ತಿರುಗುತಿಪೆ ।
ಸುಖವುಗಾಣದೆ ದಿಟ್ಟಿ ಸೊಜಗುತಿಪೆ ।
ತೊಳಪ ಗಲ್ಲದೊಳು ಕೈದಳವನಮರಿಸಿ ತುಂಬಿ ।
ತುಳುಕಿ ಸುರಿವಾಲಿನೀರ್ದೊಱೆಯು ಕರೆಗಣ್ಮಿಪಳು ॥ ೨
ಮಲಗಲೆಳಸುವಳೊಡನೆ ಮಲಗಸೊದೆದೇಳುವಳು ।
ನಿಲಲೆಳಸಿ ಕುಳ್ಳಿರುವಳಲೆಪಡುವಳು ॥
ಅಲುಗದವೆಯು ವಿಚಿತ್ರದಂದವನು ಸಜ್ಜೆಗೊಂಡು ।
ತಲೆದೂಗಿ ತನ್ನೊಳಗೆ ತಾನೆ ಕಳವಳಿಸುವಳು ॥ ೩ —೧—

॥ ರಾಗ—ಕಾಂಬೋಧಿ ॥

ಕಂದ॥ ನಲ್ಲಳ ಸೋಲಮನಾಲಿಸಿ ।
ಚೆಲ್ಲಾಡುವ ಪರಿಯ ಮನದ ಹಮ್ಮಿಱಿದು ಕರಂ ॥

ತಲ್ಲಳಮುಣ್ಮುವ ತೆಱದಿಂ ।
ಸೊಲ್ಲಿಸಿದಳ್ ದೂತಿ ವಿರಹತಾಪೋನ್ನತಿಯಂ ॥ ೩೫

ಚಿನ್ನ ನಿನಗೆನ್ನ ಹವಣಲ್ಲ । ಅ। ಚೆನ್ನಿಗನೊಳು ಗೋಪಾಲ ಚೆಲ್ಲಾಟ ಸಲ್ಲ ॥ಪ।

ಚ॥ ಒಲುಮೆಗಾತಿಯರು ನಾಡೊಳು ಪಲರುಮಿರೆಯುಮವಳೊಲುಮೆ ನಾಡಾಡಿಯಲ್ಲ । ಪಲವಗೆಯೊಳೇನದನು ಬಣ್ಣಿಪುದು ಕೇಳವಳು ಪಡುವ ಪಾಡುಗಳ ಬಗೆ ಬೇಡು । ಅ। ನೆಲೆಯು ನಿರವಿಸಿ ತಿಳುಹಲಾಗದು । ತಡೆದು । ನಿಲಲಾಱಳವಳು ಇನ್ನರೆಗಳಿಗೆ ವಿರಹದಿ ॥ ೧

ಎಸಳುಗಂಗಳ ನೀರ್ಗಳೆಡೆವಿಡದೆ ಪೊನಲಿಡುವ್ರವೇವೆ ಪರಿಕಾಲ್ಗಳಂತು। ಬಿಸುಸುಯ್ವ ಬಿಱುಬಿನೊಳು ಜೀವಸಂಬಡೆವ್ರದನು ಚಿತ್ತರಿಸಿ ಬಗೆಗೊಳಿಪುದೆಂತು । ಅವಳ ನಿಸುವ ಕಾವನ ಪಂತ ಸಂತು। ಗಿಸಾ । ಪೊಸವೇಟದೊಳು ಇವಳಿಗೇನೇನು ಬಂತು ॥೨

ಪೇಱುವಡೆ ನಾಲಗೆಗೆ ಬಿಸುಪೇಱುವ್ರದು ಕೇಳೆ ಬೇಗೆಗೊಂಬುವ್ರ ಕಿವಿಗಳು। ತಾಳುವಳದೆಂತೊ ಆತರುಣಿಯುಕಟಕಟ ಪರಿತಾಪದೇೞಗೆಯುನೇನೆಂಬೆ । ಅಬಾಲೆ ಕಡುಗಾವಿಡಿದ ಬೊಂಬೆ । ನೋ । ಪೇಱುನೆನು ಬೇಸಗೆಯು ಬಿಸಿಲ ಪೂದೊಂಬೆ ॥ ೩

॥ ರಾಗ—ಕನ್ನಡಗೌಳ ॥ †

ಕಂದ। ಕಾವಲೆಯುಗಳ್ಕೆ ಗಾಜಿನ
ದನಾದಂ ಮೊಯ್ಮಱಿದು ನೆನೆವ ಸುತಿಯೊಡಲಿಸುವ್ರವ್ರ ॥
ಸ್ಮರವಿಕಾರಂಗಳನಾ
ದೂಸವಿ ಗೋವಳನ ಕಿವಿಗೆ ಸವಿನೋಱುಸಿದಳ್ ॥ ೩೬

ನಿನ್ನವಳ ಪೆಟ್ಲೆರ್ದೆ*ಯು ನೆಱೆಯು ನೀನೆ ಬಲ್ಲೆ।
ಚೆನ್ನಗೋವಳರಾಯ ಚಿಂತೆಗಳವಡದೆಮಗೆ ॥ ಪಲ್ಲವಿ ॥

ಚ ॥ ಮರುಳುಗೊಂಡಂತಿಹಳು ಮಱಿವಟ್ಟು ಮೊಯ್ಮಱೆದು ।
ಕರಕರೆಯೊಳೊಂದುವಳು ಕಾತರಿಪಳು ।
ಪರಿಪರಿಯ ನೆನಹುಗಳ ಪಸರಗೊಂಬಳು ಸುಯ್ದು ।
ಬಸವಱಿದು ಬಾಯ್ಬಿಟ್ಟು ಪಲವ ಪಂಬಲಿಸುವಳು ॥ ೧

ಎಡೆವಿಡದೆ ಜಾನಿಸುವಳಿದೆ ಬಂದನೆರೆಯನೆಂ।
ದೊಡನೆದ್ದು ಮುಂಬರಿವಳೋಸರಿಪಳು ॥
ಮಡಮುರಿದು ನೋಡಿ ಮೆಯ್ಮಱಿಸದಿರು ಮನದನ್ನ ।
ತಡೆ ನಿಲ್ಲು ನಿಲ್ಲೆಂದು ತವಕದಿಂದೊದಗುವಳು ॥ ೨

---

† ನೀಲಾಂಬರಿ ಎಂದು ಬಂದು ಪ್ರತಿಯಲ್ಲಿದೆ.

ಬಯಲ ತಕ್ಕೈಸುವಳು ಬಾಯ್ಗೂಟಕೆಳಸುವಳು।
ದಯೆಗೆಯ್ದು ಸಲಹೆಂದು ತಲ್ಲಣಿಪಳು।
ನಯಸರವ ತೋಱುವಳು ನಲವೇಱಿಯಾನಂದ।
ಮಯವೆನಿಸುವಳು ನಿನ್ನ ಮಾಯೆಯೆಂತುಟೊ ಕೃಷ್ಣ॥ ೩ —೩—

॥ ರಾಗ—ಕಾಂಬೋಧಿ ॥

ಕಂದ॥ ಬಂದೊಂದುಂ ದಿವ್ಯಾಂಗವ।
ಸೌಂದರ್ಯಂ ಬಗೆಗೆ ಬಂದು ಪರಿವಿಡಿಯಿಂದಂ॥
ನಿಂದಿರೆ ತೊೞಲ್ವ ಕಾಮಿನಿ।
ಯಂದಮನಿಂತಚ್ಯುತಂಗೆ ಸಖಿ ಸೊಲ್ಲಿಸಿದಳ್॥ ೩೭
ಕಳವಳಿಪಳಿಂತೆಮ್ಮ ಕಣ್ಗೆಡಿಪಳು।
ಕೊಳಲ ಗೋವಳ ನಿನ್ನ ಗುಣಗಳನೆ ಗುಣಿಸುವಳು॥ ಪಲ್ಲವಿ॥

ಚ॥ ಒಲೆವ ಸಿರಿಮೊಗದೋಜೆಯುಚಿತಮೆಂದೊದರುವಳು।
ಸಲಿನಲಿವ ಪುರ್ವೆಂದು ಸೈಗರೆವಳು।
ಅಲೆವಡುವ ನೋಟದೊಂದಂದವೆಂದಱಲುವಳು।
ಉಲಿವ ಪೊಂಗೊಳಲ ಮೆಲ್ಲುಲಿಯೆಂದು ಗಳಪುವಳು॥ ೧
ಪಲಕೆಱದಿ ತೊಸೆವ ಕಿವಿವಜ್ಜವೆಂದೊರಲುವಳು।
ಕಳೆವೆತ್ತ ಕದಪೆಂದು ಕನವರಿಪಳು॥
ಸಲವೀವ ಚಕ್ರದುನ್ನತಿಯೆಂದು ನಮಿಸುವಳು।
ಒಲಮುರಿಯ ಸಂಕೆಂದು ಬಸವಳಿದು ಪಲುಬುವಳು॥ ೨
ಮುರಿವಡೆದ ಭುಜದ ಕಡುಮುದ್ದೆಂದು ಮೊಳಗುವಳು।
ತಿರುಹಿದೊಳ್ನಡುವೆಂದು ದೆಸೆಗೆಡುವಳು।
ಬೆರಲೂಱಿ ನಿಂದಡಿಯ ಬೆಡಗೆಂದು ಬೆಚ್ಚುವಳು।
ಸರಿಸದೊಳ್ನಡೆಯೆಂದು ಸಂತಸದೊಳೆಱಗುವಳು॥ ೩ —೪—

॥ ರಾಗ—ಘಂಟಾರವ ॥

ಕಂದ॥ ಓರಂತುಱೆ ಮಸಗುವ ವಿರ।
ಹಾರಭಟಿಗೆ ಮಮಗಿ ಮರಣಮಂ ನೆಱೆಗೆ॥
ಯ್ವಾರಮಣಿ ನುಡಿದ ನುಡಿಗಳ।
ದಾರಿಯನಿಂತೆಂದು ಹರಿಗೆ ಸಖಿ ಸೊಲ್ಲಿಸಿದಳ್॥ ೩೮
ಚೆನ್ನೆಯಾಡುವಳಿದನು ಚಿತ್ತವಿಪುದು।
ಇನ್ನವಳ ಮನದಿರವನೆಂತು ಬಿತ್ತರಿಸುವೆನು॥ ಪಲ್ಲವಿ॥

ಚ ॥ ಗಿಳಿವಱಿಗೆ ನೀನೆ ಪಾಲ್ಗೆನೆಯೂಡಿ ಬಳಯಿಸೆಂ ।
ದೆಳೆಯಂಚೆ ನಿನ್ನ ಕೆಯ್ಯೆಡೆಯಿದೆಂದು ।
ಕಳವಳಿಸಿ ಕಾತರಿಸಿ ಗಾಱುಗೆಡಲೇಕಿನ್ನು ।
ಕೆಳದಿಯೆಚ್ಚಱದೊಳಿರು ಕೆಲಕೆ ತೊಲಗದಿರೆಂದು ॥ ೧
ಭಾವಚಿತ್ರದ ಪಟವ ಭಕ್ತಿಯೊಳೆ ಪೂಜಿಸೆಂ ।
ದೀವಕುಳಸರವಿನಿಯಗೀವ್ರುದೆಂದು ॥
ಈವಿಧದಿ ಮರುಳೆ ನೀನೇಕೆ ಮಱುಗುವೆ ನಾಕು ।
ಈವೇಳೆಗೇನು ಹಿತವೆಂದು ತಿಳಿದೆಸಗೆಂದು ॥ ೨
ಆವನ ಪೆಸರಕ್ಕರವನನುಗೊಳಿಸು ಕಿವಿಯೊಳೆಂ ।
ದವನ ಪಾವುಗೆಯ ಮುಡಿಗಮುರಿಸೆಂದು ॥
ಅವಿವೇಕಿ ಒಱಿವೆ ನೀನಟಲೇಕೆ ನಾಕಿನ್ನು ।
ಎವೆಯಲುಗದಂತೆ ಕೂರ್ತನ್ನ ನೋಡುತಿರೆಂದು ॥ ೩ —೫—

॥ ರಾಗ—ಘಂಟಾರವ ॥

ಕಂದ॥ ಅಱುಸಱ ತುಸಿರ್ಕೆಯನಾಳಿಂ ।
ಬಱತೊಱಗಿದ ಬಾಳೆಯಿರವನಾರಯ್ದು ಕರಂ ॥
ಮಱುಗುವ ಕೆಳದಿಯರೆಸಕಮ ।
ನಱುಪಿವಳಾಪೂತಿ ತನಕಟಿಂ ಗೋವಳನೊಳ್ ॥ ೨೯

ನಿನಿದೆತ್ತಣ ಜಿನಪವೇಱು ನಡೆನಡೆ ಬೇಗ ।
ಮಾನಿನಿಯ ನಿಲೆಗೆನ್ನ ಮನಸು ಚಂಚಲಿಸುತಿದೆ ॥ ಪಲ್ಲವಿ ॥

ಚ ॥ ಬಾವನ್ನದಗ್ಗೆಲ್ಲಿ ಪನ್ನೀರ್ಗಳೆಲ್ಲಿ ಪೊಸ ।
ದಾವರೆಗಳೆಲ್ಲೆಂದು ತವಕದಿಂದ ।
ಗಾವಳಿಸಿ ಕೆಳದಿಯರು ಕಳವಳಿಸುತಿರೆ ಕಂಡು ।
ದೇವರಡಿಯೆಡೆಗೆ ಕಡುದೀವರದೊಳೆಯ್ದಿದೆನು ॥ ೧
ಅಸಿಯೊಡಲ ಬಿಸುಪ ತಿಳಿನೊಸರ್ವ ಕಣ್ಣೀರ ನೋ ।
ಡುಸಿರನಾರಯ್ಯೆನುತ್ತೋಜೆಗುಂದಿ ।
ಒಸವಱಿದು ಕೆಳದಿಯರು ಪಂಬಲಿಸುತಿರೆ ಕಂಡು ।
ಉಸಿರಲೆಂದೀಯೆಡೆಗೆಯುಱುಬಿನಿಂದೆಯ್ದಿದೆನು ॥ ೨
ಪಂತ ಸಂದುದೆ ಮದನ ಪಾಡು ತಿರುಗಿತೆ ಚಂದ್ರ ।
ಸಂತಸವೆ ಇಂದಿಗೆ ವಸಂತನೆಂದು ॥
ತಿಂತಿಣಿಸಿ ಕೆಳದಿಯರು ದಿಗಿಲುವಡುತಿರೆ ಕಂಡು ।
ಸಂತಾಪದಿಂ ನಿನ್ನ ಸನ್ನಿಧಿಯನೆಯ್ದಿದೆನು ॥ ೩ —೬—

|| ರಾಗ—ಮೋಹನ ||

ಕಂದ|| ದಾದಿಯರುಂ ಕೆಳದಿಯರುಂ |
ದೂವವಿಯರುಮಿನಿಯರುಮುಹಿನೊಳ್ ಕೆಯ್ದುಗೆವಂ ||
ತಾಮುಮ ನೀನಿನ್ನೊರ್ವನ |
ಕಾಮುಟಿಪ್ರುಪ್ರೆಂದು ಕೇವಿ ಪೌರಿಯೊಳುಸಿರ್ದರ್ಗಳ್ || ೩೦

ನಲ್ಲಳಿಗೆ ನಲವಿಂದಿಗೆ । ಅ । ಲ್ಲಲ್ಲಿ ವಿರಹಾಯಾಸ ಹರೆವಡೆಯುಲಿಂತು || ಪ ||

ಚ || ಬಳಸಿರುವ ಬಾಂಧವರ ಬಳಗದೊಳು ಬಸವಳಿಕೆ ।
ತಳಿರುವಾಸಿನೊಳು ಪರಿತಾಪದೊಂದೆಸಕ ।
ಬಳುಗೆಳದಿಯರೊಳು ಬಿಡದೊಗುವ ಕಣ್ಣೀರ್ವೊರಸಲು ।
ತಿಳಿದು ನಿರವಿಸುವರೊಳು ದಿಗಿಲು ನೆಲೆವಡೆಯು || ೧

ನೆರೆದು ನಿಟ್ಟಿಸುವರೊಳು ನಿಟ್ಟುಸಿರ ಕಾಲಾಟ ।
ನೆರೆಹೊರೆಯ ಪೆಣ್ಗಳೊಳು ನಿಟ್ಟಲಿರ್ದಗಿಟ್ಟು ।
ಪೊರೆವ ದಾದಿಯರೊಳುಜು ಪೊಣ್ಮ ಬಹು ಮೊಸ್ಮುಜುವು ||
ಪರಿಜನದ ನೆರವಿನೊಳು ಬವಣೆ ಜೀರ್ವರಿಯು || ೨

ಎನ್ನವಂದಿಗರೆಡೆಯೊಳೀವಗೆಯು ಪಂಬಲಿಕೆ ।
ಮುನ್ನಣೆಯ ಸಖಿಯರೊಳು ಮರುಕದೊಂದುಬ್ಬು ||
ಚೆನ್ನ ಚಿಕದೇವರಾಜೇಂದ್ರವಲ್ಲಭ ಕೃಷ್ಣ ।
ನಿನ್ನ ಕೆಯ್ಯೊಳು ಹರಣ ನೆಲೆವಡೆಯುಲಿಂತು || ೩ — ೭ —

ವಿರಹೋತ್ಪ್ರೇಕ್ಷ ಸಪ್ತಪದಿ ಸಂಪೂರ್ಣಂ.

— ಸಪ್ತಪದಿ — V

|| ರಾಗ – ಕಾಂಭೋಧಿ ||

ಕಡೆಗಣ್ಣೊಳ್ ಸಿರಿ ಸಿಕ್ಕಿ ತೊಳರ್ಕೆಗಿಡೆಯಂತಂಗೆಯ್ವಳಾಕಕ್ರಮುಂ| ಕಡುಸೊಂಪಿಂ ಚಿಕದೇವ ಕಂಬುಕೊರಲೊಳ್ ಬಿಲ್ ಪುರ್ಬಿನೊಳ್ ತೋರ್ಕೆಯಿಂ || ಪಡೆಗಾಕಾರಮುಮಕ್ಕೆ ಮಾಮುಷಮುಮಿನ್ನಂತೆಂತು ನೀಂ ಮಾಂಜೆಯುಂ | ನುಡಿಗುಂ ಸತ್ಯಪರಾಕ್ರಮತ್ವದೆ ಪೊದಳ್ದು ವಿಷ್ಣುವೆಂದೇ ಜಗಂ || ೪೧

ಆಡುವ ಪಾಂಸುಕೇಳಿಯೊಳೆ ಸಲ್ವ ತೊವಲ್ನುಡಿಯುಂ ತೊದಳ್ದ ಪಾ |
ತಾಡುವ ಪಾಂಗಿನಂತೆಸೆವ ಬೀರವುವೊಂದುಮಿನೊಂದು ನಾಡೆಯುಂ ||
ರೂಢಿಸಿ ಸದ್ಗುಣಂಗಳನಿತುಳ್ಳೊಡವಿಪ್ರಾಜಿಕದೇವರಾಯನೊಳ್ |
ನಾಡುಗರಾಡುವಂದು ಬಿರುದಾಮುವು ಸತ್ಯಪರಾಕ್ರಮಪ್ರಾಪ್ಯಯುಂ || ೪೦

ವಚನ || ಈಪವನೆಯು ಸಸ್ತ್ರಪದಿಯೊಳ್ ಅನ್ಯಾಸಕ್ತನಾಗಿರ್ದು ಬಂದ ಶ್ರೀಕೃಷ್ಣನಂ ಕಂಡು ಪ್ರಣಯಕೋಪದಿಂ ಮುನಿದ ಗೋಪಸ್ತ್ರೀಯರ ವಚನವ ನೆನೆದಿಂವವನ ಗುಣಂಗಳಂ ಪೊಗಳ್ದರ್.

ರಾಗ || ಕೇತಾರಗೌಳ ||

ಶ್ರೀಲಾಸ್ಯವಿಲಾಸಸುಗಂಧಸುಕಲಾಪಾರಂ ವಿಕೋಪತ್ರಿಯಮಾ |
ಲೋಲಂ ಗೋಪಜನಸ್ತ್ರೀಯೊಡನೆ ಸಮಂದಾನಂದಮಂದೋವಿ ತ ||
ತ್ಕಾಲೋತ್ಕೃತ್ಯಕಾಪ್ರಾಗ್ದರನಸ್ಮ್ಯದಾವಿಪಂ ತಾಳ್ದ ಗೋ |
ಪಾಲಂ ಕಾತೊರ್ನಲವಿಂ ಕಳಾಪತಿಯು ಪಿಂಪಾ ರದನಂ ಪೊರ್ದಿದಂ || ೪೧

|| ಅಷ್ಟತಾಳ ||

ಕಂದ || ಗೋಪಾಲನ ಪ್ರಾಣಗುಣಾ |
ರೂಪದೊಳಾವ್ರಾಣಪರಾಧದೊಳ್ಜಿಗರಂ ಕಂ ||
ತೋರ್ಪ ಕೋಪಂ ಕೊನರಿತೆ
ಯಿರಾಪರಾಧಿಂ ಕೊಂಕುಸುಮಗಳಂ ಕೊನರಿಸಿದಳ್ || ೪೨

ಕೊನೆಸಾಗದಿಲ್ಲಿಗೀವರಾಯ | ಗೋಪಾಲರಾಯ || ಪಲ್ಲವಿ ||
ಚ || ಅನುವ ಪೇಳುವವ್ರೋಳಿನ್ನನುಬಲಿಸದಿರು ನಿನ್ನ |
ಮನಗಳಗಿಸಿ ಮಿಗೆ ಮುಟ್ಟಿಪಳಿಪೆಗೆ ನವೆ || ೧
ಹನಸವಾತಿಗೆ ನಾನು ಹರವನಗೊಂಡಿಳ್ಲ |
ಬನ್ನಣೆಗೆಯ್ದು ಬಿಡುವೆ ಬಣ್ಣಿಗೆವಡಿಸದಿರು || ೨
ಮುಚ್ಚುಮರೆಯ ನಾನಿನ್ನ ಮೊಗಕೆ ನೆರೆಂತವಳಲ್ಲ |
ಇಚ್ಛಕವಾಡದಿರಡಿಗೆರಗುವೆ ಚಿತ್ತವಿಸು || ೩ || —೧—

|| ರಾಗ—ಮುಖಾರಿ ||

ಕಂದ || ನಗೆಮೊಗ ಸವಿನುಡಿ ಸಿರಿಸಿಂ |
ಯೊಗ್ಗಿಗಸುಗಳಿಂ ಮೋಸಗೊಳಿಪ ಗೋಪಾಲನ ಪ್ರ ||

ಯ್ಯಾಗೆಯುಂ ಬಯಲಿಸಿಸುತಿ ಪಡಿ ।
ಮೊಗದೊಳ್ ಮೂವಲೆಯ ಮುಂಮುಗಯ್ದುಳ್ ಮತ್ತಂ ॥ ೨೫

ನೀತವೆ । ಇದು ನೀತವೆ । ನಿನ್ನ ನಡೆ ಬೇಱೆ ನುಡಿ ಬೇಱೆ ನೆನಹು ಬೇಱೆಲೆ ಕೃಷ್ಣ ॥ ಪಲ್ಲವಿ ॥

ಚ ॥ ಮೊಗಸಿರಿಯು ನಿಟ್ಟಿಸೆ ಮುದ್ದುಮುದ್ದಾಗಿದೆ ।
ಬಗೆಯು ಭಾವಿಸಲಿಂತು ಪಾಸಱೆಗಳ್ಪಿನಿಸಿದೆ ॥ ೧ ॥

ಸವಿಮಾತುಗಳ ಕೇಳೆ ಸ್ನೇಹನಿಸುತಲಿದೆ ।
ಕವಕೋಡುಗಳ ನೋಡೆ ಕತ್ತಲೆ ಕವಿಯುತಿದೆ ॥ ೨ ॥

ರೂಪುರೇಖೆಗಳ ನೋಡೆ ರೋಮಾಂಚಮಾಗುತಲಿದೆ ।
ಗೋಪಾಲ ನಿನ್ನೊಲವೆನ್ನ ಕೋಟಲೆಗೊಳಿಸುತಿದೆ ॥ ೩ ॥ —೨—

ರಾಗ ॥ ಕಾಂಬೋಧಿ ॥

ಕಂದ ॥ ನೆನಪುಂ ನುಡಿಯುಂ ನಡತೆಯು
ಮಸಿತಸಿತುಂ ಬೇಱೆಬೇಱೆ ಪಲ್ಲಟಿಸಲಾಗಿ ।
ಪಿಸುನಸಮಾಗೋವಳ ಬೇಱೆಯುನ ।
ಮೊನೆಮಾತಿನೊಳಿಂತು ಜಪಿಸು ನುಡಿವಳ್ ಮತ್ತಂ ॥ ೨೬

ನುಡಿವ ನೂತನ ಬೇಱೆ ನಡೆವ ನಟನೆ ಬೇಱೆ ।
ಒಡದೆ ಮನದೊಳಿಹ ಬಿನ್ನಣ ಬೇಱೆ ।
ನಡೆ ನಡೆ ನಡೆ ನಿನ್ನ ನಾಲಗೆಗಾನುತ್ತರ ।
ಗುಡಲಾಱೆನು ದಮ್ಮಯ್ಯ ಗೋಪಾಲರಾಯ ॥ ೧ ॥

ಬೇಟಮೊರ್ವಳಲ್ಲಿ ಪುರ್ಬಿನಾಟಮೊರ್ವಳಲ್ಲಿ । ಸನ್ನೆ ।
ನೋಟಮೊರ್ವಳಲ್ಲಿ ಒಱಬೂಟಕವಿಲ್ಲಿ ।
ತಾಟೊಟುತಗರುಬೊಗರುಟಕ್ಕುಟೌಳಿಯೊಸಗುವ ।
ಕೋಟಲೆ ಸಾಕು ದಮ್ಮಯ್ಯ ಗೋಪಾಲರಾಯ ॥ ೨ ॥

ಅಪರಿಮಿತಮಹಿಮ ಅಖಿಲಾಂತರಾತ್ಮ ನಿನ್ನ ।
ಕಪಟನಾಟಕದೊಳು ಕಡೆಗಾಣ್ಬರಾರು ।
ಅಪಚಾರ ಬರ್ಪುದಿನ್ನು ಅಂತಿಂದೆಂದು ನುಡಿದೊಡೆ ।
ಗುಪಿತದಿಂದಿರು ದಮ್ಮಯ್ಯ ಗೋಪಾಲರಾಯ ॥ ೩ ॥ —೩—

ರಾಗ ॥ ಬಾಜಿ ॥

ಕಂದ ॥ ಕೈತವದೊಳ್ ಕಡುದೈನ್ಯದ ।
ಮಾತುಗಳಿಂದಾಜಿನಜನೆಂದುಸಿರ್ದ ಮುರಾ ॥
ರಾತಿಯ ನೀತಿಯ ರೀತಿಯ ।
ನೀತೆಜವೊಳ್ ಬಿಡಿ ಬಿನ್ನವಿಸಿದಳ್ ಮತ್ತಂ ॥ ೪೩

ಬಡವನೆ ನೀನು ಏನೇನೇನು ಬಡವನೆ ನೀನು ।
ಈವುಸಿಗೊಡಬಡುವೆನೆ ನಾನು ॥ ಪಲ್ಲವಿ ॥

ಚ ॥ ಬಡವನೆನಿಸಿ ತೋರು ಬಲ್ಲಿದನಾಗಿ ನಿಂ ।
ದಡಿಯಲ್ಲಿ ಲೋಕವೆಲ್ಲವನಾಕ್ರಮಿಸುವೆ ॥ ೧ ॥

ಮುಗುದನೆ ನೀನು ಏನೇನೇನು ಮುಗುದನೆ ನೀನು ।
ಸಾಜವೆಂದು ಒಗವೆನೆ ನಾನು ॥ ಪಲ್ಲವಿ ॥

ಚ ॥ ಮುಗುದನೆನಿಸಿ ತೋರು ಮೋಸಗೊಳಿಸಿ ಮೂ ।
ಜಗವನಡಸಿ ನುಂಗಿ ಚೆಲ್ಲಾಟವಾಡುವೆ ॥ ೨ ॥

ಸುಲಭನೆ ನೀನು ಏನೇನೇನು ಸುಲಭನೆ ನೀನು ।
ಇದಕೆ ಮನವೊಲಿವೆನೆ ನಾನು ॥ ಪಲ್ಲವಿ ॥

ಚ ॥ ಸುಲಭನೆನಿಸಿ ತೋರು ಸೊಬಗುಗೋವಳನಾಗಿ ।
ಹಲವುನಾರಿಗಳನು ಹರಿಸಿ ಮೆಯ್ಮರಿಸುವೆ ॥ ೩ ॥ —೪—

॥ ರಾಗ—ಕಾಂಬೋಧಿ ॥

ಕಂದ ॥ ಬತನೊಡನುಪಚಾರಂಗಳ್ ।
ನೊಡರಿಸುತೊಳ್ಪಾತನಾತುತೊಡಬಡಿಸುವ ಮೊ ॥
ಲ್ಲಡಿಗೆಜಗುವ ಗೋವಳನಂ ।
ನುಡಿದಳ್ ಮೆಲ್ಪಿಡಿದ ಕೊಂಕುನುಡಿಯೊಳ್ ಮತ್ತಂ ॥ ೪೮

ಗುಟ್ಟನೊಡನಿರು ಗೋಪಾಲ । ಸಾಕುಸಾಕಿನ್ನು ( ಗುಟ್ಟನೊಡನಿರು ಗೋಪಾಲ ) ॥ ಪಲ್ಲವಿ ॥

ಚ ॥ ಒಂದು ಕಜ್ಜದಿಂದಲೆ ನೀನೊಂದೆಡೆಯೊಳಿರ್ದಿಯದ ।
ಬಂದ ಒಂದ ತಪ್ಪಾವುದೀಸಂದೇಹವೇಕೆ ಒಡಿದೆ ॥ ೧ ॥

ಆನು ನೀನೆಂಬ ಭೇದವನರಿಯದಿರುವೆನ್ನೊಳು ।
ನೀನುಪಚರಿಪುದಿದು ನೀತನೆನಿಸಿ ತೋರಿದು ॥ ೨ ॥

ಏನೆನಿದೆತ್ತಣ ಪಾಪವೇತಕಡಿಗೆಱಗುವೆ ।
ಗೋವಳರರಸ ನಿನ್ನ ಕೂಡೆ ಪೋಱಲಱಿಯೆನು ॥ ೩ ॥ —೫—

ರಾಗ ॥ ಮುಖಾರಿ ॥

ಕಂದ ॥ ಮಿಱುಗುವ ಮೊಸ್ಸರಿಗಮುದಾ* ।
ಕುಱಿಪುಗಳಂ ಸಾಜಿನಾಜಿ ಸಾಮಿಗಳಿಂದಂ ॥
ಮಱಿಮಱಿಯಿಸ ಗೋಪಾಲಕ ।
ರೇಱಿಯನೊಳಂಗಸ್ಸನಾತನಸಿರ್ದಳ್ ಮತ್ತಂ ॥ ೪೯

ನಿನ್ನ ಪೊಱುದವಳೇ ನಾನು । ಗೋಪಾಲ ಕೇಳು ॥ ಪಲ್ಲವಿ ॥

ಚ ॥ ಮಾಜಲೇಕೆ । ಯೆನಗೆ ಮಱೆಮಾಜಲೇಕೆ ।
ಬಾಜಿಸೆ ಕೊಳಲು ತಾಕಿತೆ ಒಣ್ಣದುಟಿಯು ॥
ಓಜಿಯುಚಿತವಾಗಿದೆ । ಯೆನ್ನಾಣೆ ಕೇಳೋಜಿಯುಚಿತವಾಗಿದೆ ।
ಸೋಜಿಗಗೊಂಡು । ಸೊಕ್ಕದೆ ಸೊರಗದೆ ಸೊಲ್ಲಿಸೆನ್ನೊಡನೆ ॥ ೧ ॥

ಆಡಲೇಕೆ । ಯಿನಿತು ಪುಸಿಯಾಡಲೇಕೆ ।
ಬಾಡಿದೆ ಮೊಸ್ಸರಿ ಪಸುಗಳಟ್ಟುಳಿಯು ॥
ತಡುಜೋಡಿಲ್ಲದಕೆ । ಯೆನ್ನಾಣೆ ಕೇಳ್ತಡುಜೋಡಿಲ್ಲದಕೆ ।
ಬೇಡನೀಮಾಯು । ಬೆಚ್ಚದೆ ಬೆದಱದೆ ಪೇಱುನೆನ್ನೊಡನೆ ॥ ೨ ॥

ಮಾಯುವೇಕೆ । ಯೆನ್ನೊಳು ಕಾಯುಮಾಯುವೇಕೆ ।
ಕಾಯುವೊಳೇನು ಕಾನನದ ಮಟ್ಟಿನೆಯು ॥
ಈಯುರವಿಂಪಾಗಿದೆ । ಯೆನ್ನಾಣೆ ಕೇಳೀಯುರವಿಂಪಾಗಿದೆ ।
ಆಯುತಾಯುತಂಜದೆಯುಳುಕದೆಯುಱುಕುಯೆನ್ನೊಡನೆ ॥ ೩ ॥ —೬—

ರಾಗ ॥ (ಇಂದು) ಘಂಟಾರವ ॥

ಕಂ ॥ ಮನವಿನಿಮನನುನಯೊಂಕ್ತಿಯಿಂ ।
ಳಿಸಿಸಿಸಿಸುಂ ಮುಸಿಸು ತಣ್ಣುಗೊಂಡಿಱಿತರೆ ಮಾ ॥
ಸಿಸಿ ಬಗೆಗಱಗುತೆ ಗೋಪಾ ।
ಲನ ಪಲವುಂ ಜಾಣ್ಮೆಪಳಗೆ ಸಿಲ್ಕಿದಳೊಲವಿಂ ॥ ೫೦

ಎನ್ನನೊಡಂಬಡಿಸಲೇಕೆ ನಿನ್ನವಳು ನಾ ॥ ಪಲ್ಲವಿ ॥

ಚ ॥ ಎನ್ನ ಮುನ್ನ ಭಾಗ್ಯಫಲವೆನ್ನ ಬೆನ್ನಬಿಡದಿರೆ ।
ನಿನ್ನೊಳು ತಪ್ಪೆಣಿಪುದು ನೀತವೆನಿಸಿರದು ॥ ೧ ॥

ಅಂದಿನ ಕಾಲದೊಳು ನಾವಂತು ಸಂತಸದೊಳಿರ್ದೆ ।
ವಿಂದಿನ ಕಾಲದ ಗುಣವಿಂತು ಬಂದುದೆಮಗೆ ॥ ೨ ॥

ಚಿಕ್ಕದೇವೇಂದ್ರವರದ ಚೆನ್ನಿಗ ಗೋಪಾಲರಾಯ ।
ಮಿಕ್ಕ ಮಾತೇನು ನಿನ್ನ ಮಿಱಿಯವಳಲ್ಲವೆಂದಿಗು ॥ ೩ ॥ —೭—

ಪ್ರಣಯಕಲಹ ಸಪ್ತಪದಿ ಸಂಪೂರ್ಣಂ.

— ಸಪ್ತಪದಿ — VI

ಪಟ್ಟುಡಿಗೊಳ್ಪಿಸಂ ಪಗೆವರೊಕ್ಕಲಸಂ ಮಿಗೆ ಕೊಂಡು ಕಂಪುಕಂ ।
ಗುಟ್ಟಿನ ಮುನ್ನೆ ಬಿಲ್ಲುಗೆಗಳಂ ತಳೆಗುಟ್ಟಿ ಸಮಂತು ಪಟ್ಟಯಂ ॥
ಕಟ್ಟಿದ ಮುನ್ನಮೇ ಪರಿದು ಕಟ್ಟಿ ಪ್ರೊಪಟ್ಟಿದಮಾರ್ಗವರ್ಗಮಂ ।
ನೆಟ್ಟನೆ ಚಿಕ್ಕದೇವನೆಸೆದಂ ಸಲೆ ಸತ್ಯಪರಾಕ್ರಮಾಂಕದಿಂ । ೫೧

ಗಂಡರಗಂಡನುದಾರವರಮಕ್ಕಳ ಗಂಡನಿದಿರ್ಚಿ ಕೈಮುಕ್ಕೆ ।
ಕೊಂಡರ ಗಂಡನಾಚಿಸುವಿಪಸ್ಸು ನ ಡಾಯರ ಗಂಡನಾದನ್ರೊ ॥
ದ್ವಂಡರ ಗಂಡನೆಂಬ ಪಲವುಂ ಬಿರುದಂ ಚಿಕದೇವರಾಯನೊಳ್ ।
ಮಂಡಿತಮಾತ್ರೆ ಪೊತ್ತಮೊದಲೊಂದಿದ ಸತ್ಯಪರಾಕ್ರಮಾಂಕದಿಂ ॥ ೫೨

ವಚನ ॥ ಈ ತೆಱನೆಯ ಸಪ್ತಪದಿಯೊಳ್ ಶ್ರೀಕೃಷ್ಣನೊಳ್ ಬೆರಸಿ ಬಿಳ್ವೆಣ್ಗಳ್ ತಂತಮ್ಮ ವೃತ್ತಾಂತಮಂ ಕೇಳಿಯುರೊಳ್ ಪೇಳ್ವ ನುಡಿಗಳ ನೆವದಿಂದವನ ಗುಣಂಗಳಂ ನಿರೂಪಿಸುವರ್.

ರಾಗ ॥ ಮುಖಾರಿ ॥

ಏಗೆಯ್ವೆನಮ್ಮ । ಏನಿದೆತ್ತಣ ಮಾಯವೆಂದಱಿಯೆನೆ ।
ಏಗೆಯ್ವೆನಮ್ಮ । ನಾನೆಣಿಸಿ ಗುಱುತುಗೆಯ್ವುದೆಲ್ಲಾ ನೀರೊಳು ಒರೆದಂತಾದುದಮ್ಮ ॥ ಪಲ್ಲವಿ ॥

ಚ॥ ಇಂದು ನಲ್ಲನಿಲ್ಲಿಗೆಯ್ದಿದೊಡೆನ್ನ ಕಣ್ಗಳೆಳಸಿದಂತೆ ।
ಅಂದಚೆಂದಗಳನಾರಯ್ವು ನೋಡುವೆನೆಂದಿರ್ದೆನಮ್ಮ ॥
ಬಂದೊಳುಮೊಗವ ತೋಱದ ಮುನ್ನಮೆ ಮುಂಚೆ ನೆನೆದ ನೆನಹಿನೊಳ ।
ಗೊಂದಾದರು ತೋಱದಾದುದು ಕೇಳಿನ್ನಱಿದುದನೇನೆಂದುಸಿರುವೆನಮ್ಮ ॥೧॥

ಇಂದು ಸಲ್ಲನಾಡುವ ನುಡಿಯೊಳೊಂದನುಱಿಯದಾಲಿಸಿಯಱಿವ್ರ ।
ಗುಂದದದಕೆ ಬದಲುನುಡಿವೆನೆಂದಿರ್ದೆನಮ್ಮ ॥
ಬಂದೊಳುದನಿಯು ತೋಱದ ಮುನ್ನವೆ ಪಲವು ನೆನಹನೆಲ್ಲ ಮಱೆತು ।
ಬೆಂದ ನಾಲಗೆ ಮುದುಡುಗೊಂಡ ಬಗೆಯುನಾನೆಂತು ಪೇಱುವೆನಮ್ಮ ॥ ೨ ॥

ಇಂದು ಚೆಲುವಗೋಪಾಲರಾಯನೆನ್ನೊಳೊಲಿದು ಲಾಲಿಸುವೆಸಕ ।
ಕೊಂದಕೊಂದ ಬದಲುಗೆಯ್ವೆನೆಂದಿರ್ದೆನಮ್ಮ ॥
ಬಂದು ಕೆಯ್ಯ ಪಿಡಿಯದ ಮುನ್ನವೆ ಬಲಿತ ಮನದ ಬಿಗುಹು ಸಡಿಲಿ ।
ಮುಂದುದೋಱದೆ ಮೋಸಗೊಳಿಪ ಮೋಹಕಿನ್ನಾರಿಗೆ ಮೊರೆಗೆಯ್ವೆನಮ್ಮ ॥

—೧—

॥ ರಾಗ— ಕಾಂಬೋಧಿ ॥

ಮೋಹವೀಪರಿಯೊಳೆನ್ನ ಮುಂದುಗೆಡಿಸುತ್ತಿದೆ ।
ಊಹದನಱಿಯೆನಾನೆಲ್ಲರಂತಿರ್ದೆನಮ್ಮ ॥ ಪಲ್ಲವಿ ॥

ಚ ॥ ಬರವ ಕೇಳಿದೊಡನೆಯೆಂದಿನಿಂಪಿನೊಳಿರಲೀಸದು ।
ಭರದೊಳಿದಿರುಗೊಂಡು ಪಾದಪದ್ಮಕೆಱಗಲೀಸದು ॥
ಗರುವರೆಱೆಯನೊತ್ತಿಗೆ ಸಾಜಗತಿಯೊಳೆಯ್ದಲೀಸದು ।
ಬಱಿದೆಯವನ ಬೞಿಯ ನಿಂದು ಪದುಳವಡೆಯಲೀಸದು ॥ ೧ ॥

ಏಱಕಗೊಂಬುದಲ್ಲದೆ ಮುಂದಣೆಸಕವೆಣಿಸಲೀಸದು ।
ಅಱಕೆಗೂಡಿಯೊಂದು ನುಡಿಯನವನೊಳಾಡಲೀಸದು ॥
ಅಱಿವುಮಱೆಯಲ್ಲದೆಣಿಸದಂತೆ ನಡೆಯಲೀಸದು ।
ಕಱೆತು ಮುದ್ದುಮೊಗವ ನೋಡಿ ಕಱುವುಗೊಳಿಸಲೀಸದು ॥ ೨ ॥

ಸುಗುಣನೆಸಗುವೆಸಕವಱಿತು ಸೊಗಸುವಡಿಸಲೀಸದು ।
ಬಗೆಯೊಳಿರ್ದಂತೆ ಕೊನಬುವಗೆಯ ಬಳಸಲೀಸದು ॥
ಬಿಗಿದ ತಕ್ಕೆ ಸಡಿಲಿ ಪೆಱತು ಬಿನದಗೆಯ್ಯಲೀಸದು ।
ಮೊಗದೊಳಿಟ್ಟ ಮೊಗವ ನೆಗಹಿ ಮುದ್ದುಮಾಡಲೀಸದು ॥ ೩ ॥ —೨—

॥ ರಾಗ—ಭೈರವಿ ॥

ಮನಸಿನ ದಾಱಿ ಬೇಱೆ । ಏಗೆಯ್ವೆನಮ್ಮ । ತನುವಿನ ದಾಱಿ ಬೇಱೆ ॥ ಪಲ್ಲವಿ ॥

ಚ ॥ ಅವನ ಬೞಿಗೆ ಸುಱಿಯಲಮ್ಮದಳವ್ರಗುಂದಿಯಳುಕಿ ಬಳುಕಿ ।
ಬವಣಿಗೊಂಬ ಮೆಯ್ಯ ಸಜ್ಜುಬಡಿಸಿದೆನಮ್ಮ ॥
ಅವನ ಪಡಿಮೊಗದಿ ನಿಲ್ಲಲಮರಿತೆಂಬುದಲ್ಲದೆ ।
ಲವಲವಿಕೆಗೂಡಿಯುರ್ಬಿ ಲಳಿಮಸಗದೆಂತುಗೆಯ್ವೆ ॥ ೧ ॥

ಮತ್ತೆಮತ್ತೆ ಬೆರಲ್ಗಳಿಂದ ಮಿಡಿಸಿ ತುಟಿಯ ಮುರುಕಗೊಳು ।
ತತ್ತಲಿತ್ತ ಜೋಲ್ವ ಮೊಗವನಿದಿರುಗೆಯ್ವೆನಮ್ಮ ॥
ಮುತ್ತನಿಡುವಲ್ಲಿ ಕಣ್ಣ ಮುಚ್ಚಿ ಮೋಹಗೊಂಬುದಲ್ಲದೆ ।
ಯೊತ್ತಿ ಮೊಗದೊಳಿಟ್ಟ ಮೊಗವನೊಂದುಪೆರಸದೆಂತುಗೆಯ್ವೆ ॥ ೨ ॥

ಬಿಡಿಮು ಬಿಚ್ಚಿ ಬಿಮುರುವಡೆದು ಹದುಗಿ ಹಮ್ಮೈಸುವ ಮೆಯ್ಯ ।
ಪದುಳಗೊಳಿಸಿಯೊಡಂಬಡಿಸಿದೆನಮ್ಮ ॥
ಸುದತಿ ಗೋಪಾಲನ ಮೆಯ್ಸೋಂಕಿತೆಂಬುದಲ್ಲದೆ ।
ಮದನಕದನಪೆಸಕದಲ್ಲಿ ಮಚ್ಚುನೀಡಿದೆಂತು ಗಯ್ವೆ ॥ ೩ ॥ —೩—

॥ ರಾಗ—ಕಲ್ಯಾಣಿ ॥ ✓

ಎಳಸಿದುದೆಲ್ಲನನೆಸಗುವ ಯುವತಿಯರೇಂ ಪುಣ್ಯವತಿಯರೊ । ಎಳಸಿದಂತೊಂದನು ಎಸಗಲೀಸದು ಯೆನ್ನ । ನೀಯೊಡಲಿಗೆನ್ನೊಳೇಂ ಕೇಣವಮ್ಮ ॥ ಪಲ್ಲವಿ ॥

ಚ ॥ ಪಾಸಿನೊಳಿರಲನುವಾದುದಲ್ಲದೆ ಮೆಯ್ಮೆರೆ ।
ಪತ್ತಿಕುಳ್ಳಿರಲುಡು ಪದುಗುವುದಮ್ಮ ॥
ಕೈಸೋಂಕಿಗಮುರಿದುದಲ್ಲದೊಯ್ಯುಗುರ್ಗೊನೆ ।
ಗೆಯ್ಮೆಗಳುಕಿ ನಡನಡುಗುವುದಮ್ಮ ॥ ೧ ॥

ಸುಗಿಯೆ ಮೇಲುದನೊಪ್ಪುಗೊಂಡಿರ್ಪುದಲ್ಲದೆ ।
ಜಗಿದು ಪಿಡಿಯೆ ನೀಗೆ ಬಿಚ್ಚುವುದಮ್ಮ ॥
ಮೊಗದೊಳು ಮೊಗವಿಡೆ ಸೈರಿಪುದಲ್ಲದೆ ।
ಮೊನೆವಲ್ಲ ಗಾಸಿಗೆ ಮುರಿಗೊಂಬುದಮ್ಮ ॥ ೨ ॥

ಉಡೆನೂಲ ಸಡಿಲಿಸೆ ತಾಳ್ದುದಲ್ಲದೆ ನಿರು ।
ಪಿಡಿದೀಚು ಹರಣ ಹಮ್ಮೈಸುವುದಮ್ಮ ॥
ಒದಲು ಮುಸುತು ಮರವಟ್ಟುದಲ್ಲದೆ ಮೇಲೆ ।
ನಡೆದ ನಡತೆಯೊಂದನರಿಕುದಿಲ್ಲಮ್ಮ ॥ ೩ ॥ —೪—

॥ ರಾಗ—ಕುರಂಜಿ ॥

ಇನಿಯನ ಬಗೆಗಳನೆಣಿಸದ ಮುನ್ನ । ತನುಮನವೊಂದಾಗಿ ತಲ್ಲಣಿಸುತಿದೆ । ಮುನಿವುದೆತ್ತಣದಿನ್ನು ನೋಡಿಯೆತ್ತಣದು । ಮನವ ಬೈತಿಟ್ಟು ಮಾರ್ಮಲೆವುದೆತ್ತಣದು । ಮೊನೆದೋರ್ಪುದೆತ್ತಣದು । ಮೂದಲೆಯೆತ್ತಣದು । ತೊನೆವುದೆತ್ತಣದಿನ್ನು ದೂರ್ಪುದೆತ್ತಣದು । ಅನುಮಾನವೆತ್ತಣದು । ಅಳವೆತ್ತಣದು । ಅನುವನಾರಯ್ವನೆಂಬಾಸೆಯೆತ್ತಣದು ॥ ಪಲ್ಲವಿ ॥

ಚ॥ ಇದೆ ಬಂದನರಸನೆಂಬೀನುಡಿಗೇಳಿ। ಬಿಡಿಬೇಟದೊಳು ಪೆಯ್ ಪೆಂಪುಗೊಂಡುರ್ಬಿ। ಸೊದೆಯುಂಡವೊಲು ಗಾಳಿ ಸೋಂಕಿದವೊಲು। ಬಿದಿರುವಡೆದವೊಲು ಬೆರ್ಚಿದವೊಲು। ಮದವೇಱಿದವೊಲು ಮರುಳಾದವೊಲು। ಹದವಿಱಿದವೊಲು ಹರವಸಗೊಂಡವೊಲು। ಮದನಮಂತ್ರಾವೇಶ ಮಡಲಿಟ್ಟವೊಲು ಮುದದ। ಮುನ್ನೀರೊಳು ಮುೞುಗಿ ತೇಲುತಿಪೆ ॥ ೧ ॥

ಒಱಸುಡಿಯುಲೆನ್ನ ಪ್ರಾಣವಲ್ಲಭನ। ಕಱುತು ನೋಡದ ಮುನ್ನ ಕೋಱಿಗಿತ್ತೆನ್ನೊಡಲು। ಮಱತೊಱಗಿದವೊಲು ಮರವಟ್ಟವೊಲು। ಬೆಱಗುವಡೆದವೊಲು ಬೆಗಡುಗೊಂಡವೊಲು। ಅಱಿವುಗುಂದಿದವೊಲು ಅಳವೞಿದವೊಲು ತಱನಱಿಯದವೊಲು ಪೆಸೆಗೆಟ್ಟವೊಲು। ಪರಿವಡಸಿದವೊಲು ಪಾಡೞಿದವೊಲು। ತೊಱೆದನ್ಯಚಿಂತೆಯ ಸೊಕ್ಕೇಱುತಿದೆ ॥ ೨ ॥

ಎಱೆಯ ಚಿಕ್ಕದೇವೇಂದ್ರನೆನ್ನ ಲಾಲಿಸಿದ ನೆರೆನೊಗಸುಗೆನ್ನೆರ್ದೆವನೆಯೊಳು। ನೆಱೆಸಿಕ್ಕಿದವೊಲು ಚಿತ್ರಿಸಿದವೊಲು। ಕರುವಿಟ್ಟೆಱೆದವೊಲು ಕಾಸಿ ಬೆಸ್ಜವೊಲು। ನಱಿಗೊಂಡವೊಲು ಸರಗೊಳಿಸಿದವೊಲು। ಕೊಱೆದು ಕೋದವೊಲೊಂದುಗೂಡಿದವೊಲು। ನಿಱಿಗೆವಡೆದವೊಲು ನೆಲಸಿತೆಂಬವೊಲು। ತಱಿಸಂದಾನಂದದ ತನ್ಮಯವಾಗುತಿದೆ ॥ ೩ ॥ —೫೧—

॥ ರಾಗ—ಶಂಕರಾಭರಣ ॥

ಇದಿ ನಾ ಸೋಮುಘಲಮುಯಿಂತಿ। ಯಿಗನೇಮುಂದುನೆ ಪದಿವೇಲ್ಯೆ ನಾನೇನೆಂಚಿನ ಪಂತಮಿೂಡೇರದಮ್ಮ ॥ ಪಲ್ಲವಿ ॥

ಚ॥ ಅದನರೊವಾನಿ ಪೋಮು ಜೂಚಿನಂತಟನೆ।
ಯುದಲೊ ನೆಲಕೊಂನ ದಿಟವೆಂದೊಪ್ರೋಯನೆ ॥
ಚದರಕಮದಿಗಟ್ಟಿಜೇಶಿಟಂತಲೋನೆ।
ಮುದಮುನಕನುಗಾವ ಮುಂದುಗ ಪೋಸಬುಜ್ಜ ॥ ೧ ॥

ವೆಲದಿ ವಾನಿ ಪಲುಕುವಿನೇಟಂತಲೋನೆ।
ಅಲುಕವೇಡಿಚೆಲ್ಲನಾರಿಪೋಯನೆ ॥
ಚಲಮುವಿಡವಕ ಸಾದಿಂಚೆಟಂತಲೋನೆ।
ವೊಲಕನಪ್ಪುಲುಮುಂಸುಗಾ ಪೋಸಬುಜ್ಜ ॥ ೨ ॥

ಚಕ್ಕನಿಗೋಪಾಲುನಿಚೆಂತಜೇರೇಟಂತಲೋನೆ।
ಪೆಕ್ಕನಮ್ಮೆನವಿಗುವೆಂದೊಪ್ಪೋಯನೆ ॥
ಅಕ್ಕರದಾಚುಕಅರಮರಶೇಯುಗ।
ಅಕ್ಕರೋನೀವಿವದಲಿಯುಪ್ಪುಡೆ ಪೋಸಬುಜ್ಜ ॥ ೩ ॥ —೬—

॥ ರಾಗ—ಮೋಹನ ॥

ಕೆಳದಿಯಿದೇನು ಮಾಯು । ಕೇಳಿನ್ನೇನುಪಾಯು । ಸಖಿಯುಲೊಡನೆ ಗೋಪಾಲರಾಯು ಸೊಕ್ಕುಗೊಳಿಪುದೆನ್ನ ಕಾಯು ॥ ಪಲ್ಲವಿ ॥

ಚ ॥ ಮುರಿದೇಳ್ವುದು ನವಿರು । ಪೊಳೆವುದೊಡನೆ ಬೆವರು ।
ತರಹರಿಪುದೊಯ್ಯನುಸಿರು । ತಳೆವುದೆಳ್ಚ್ಚಿಂಬ ಪೆಸರು ॥ ೧
ಕದುಬುಗೊಂಬುದು ಕರಣ । ಕವಿವುದಂತಃಕರಣ ।
ಗದಗದಿಪುದು ಕರಚರಣ । ಕರಗಿ ಕಾತರಿಪುದು ಹರಣ ॥ ೨
ಬಳೆವುದೆರ್ದೆಯು ಗೆಲವು । ಬಲಿವುದೊಡನೆ ನಲವು ।
ಮುಳುಗಿ ತೇಲುತಿರ್ಪುದೊಲವು । ಮುಂದಣೆಸಕದೆಣಿಕೆ ಪಲವು ॥ ೩ —೭—

ರೂಪಕತಾಳ ಸಪ್ತಪದಿ ಸಂಪೂರ್ಣಂ.

— ಸಪ್ತಪದಿ — VII.

ಜಾಱಿಸಿ ಜಾಡ್ಯಮಂ ಜಡಕಮುರ್ಗಮನೆಬ್ಬಿಸೆ ಬಲ್ಸುರಂಗದಿಂ ।
ಪಾಱಿದ ಕೋಂಟೆಯೊಳ್ಪರಿವೀರಭಟರ್ಮರಿದಬ್ಜಜಾಂಡಮಂ ॥
ವಿಾಱಿಮ...ರಲೆಂಪು ದಿನದಿಂದೊಡವಾಯ್ತು ವಿಮಾನವಾಪಕರ್ ।
ದೂಱಿದರಂದು ನಿಂದ ಜನಲೋಕದೊಳಪ್ಪ್ರತಿಮಪ್ರತಾಪಮಂ ॥ ೫೩

ಕೆ*ದರ್ದ ಕದರ್ದದಿಂ ತಿಸುಳಿ ಮುಕ್ಕೊಳಲೆಂದು ಕನಲ್ದು ಪಾಯ್ದಿಸಂ ॥
ಕದಡಿದ ಕಣ್ಗಳಿಂ ಕಮುಗಿ ನಿಟ್ಟಿಸಿ ಬೆಟ್ಟುಗಳೆಂದು ವಾಸವಂ ॥
ಸದೆವಿನಮೆಲ್ಬುವಾಜಡಕಮುರ್ಗದ ಪಾಸಱಿಗಳ್ ಸುರಂಗದಿಂ ।
ಮುದದೊಡನಾಡುವಪ್ರತಿಮನೊಳ್ಜಸದಾತಿರಿಕಲ್ಗಳೆಂಬಿನಂ ॥ ೫೪

ವಚನ ॥ ಇಂತಾಱುಂ ಸಪ್ತಪದಿಗಳೊಳ್ ಶ್ರೀಕೃಷ್ಣನ ಬಾಲ್ಯಕೌಮಾರಲೀಲೆಗಳುಮಂ ಯೌವನಾರಂಭಲೀಲೆಗಳುಮಂ ಭಾವಿಸಿ, ಈಪೇೞನೆಯ ಸಪ್ತಪದಿಯೊಳ್ ಶ್ರೀಕೃಷ್ಣನ ಕಲ್ಯಾಣಗುಣಂಗಳನನುಭವಿಸಿ ರುಕ್ಮಿಣೀಸತ್ಯಭಾಮೆಯುರ್ಗಂ ದಿವ್ಯಸೂರಿಗಳ್ಗಮಾಳ್ವಾರುಗಳ್ಗಮಾಚಾರ್ಯರ್ಗಂ ಮಂಗಳಾಶಾಸನಂಗೆಯ್ವರ್.

॥ ರಾಗ— ಇಂದು ಘಂಟಾರವ ॥ ತಾಳ—ಝಂಪೆ॥

ಸೊಗಸುಗೋಪಾಲನಿಗೆ ಶುಭಮಂಗಳಂ ।
ಜಗದೇಕಪೋಷನಗೆ ಜಯಮಂಗಳಂ ॥ ಪ ॥

ಚ ॥ ಸಿರಿವೆತ್ತ ಪೆಲ್ಲಡಿಯ ಚೆಲ್ವಿಕೆಗೆ ಮಂಗಳಂ ।
ತೆರೆಮಸಗುವ ಪ್ರಗುರ ಕಾಂತಿಗೆ ಮಂಗಳಂ ।
ಕರಮೆಸೆವ ಕಿಱುದೊಡೆಯ ಗಾಡಿಗಱೆ ಮಂಗಳಂ ।
ಸಿರಿಮಲಗುದೊಡೆವೊಗರ ಸೇರುವೆಗೆ ಮಂಗಳಂ ॥ ೧

ಪೊಸದೇಸೆಯಿಂದುಟ್ಟ ಪೊನ್ನುಡುಗೆ ಮಂಗಳಂ ।
ಬಿಸಜದಿಂದೆಸೆವ ನಾಭಿಗೆ ಮಂಗಳಂ ।
ಮಿಸುಪ ಕೆಂಬರಲಿಂದೆ ಮೆಱೆವೆರ್ದೆಗೆ ಮಂಗಳಂ ।
ಒಸೆದು ಧರಿಸಿದ ತುಳಸಿಯೊಳುಸರಕೆ ಮಂಗಳಂ ॥ ೨

ಚೆಲುವ ಪಱುಂಬಳೆಯ ಸಿಂಗರಕೆ ಮಂಗಳಂ ।
ಬಲಮುರಿಯ ಸಂಕದೊಪ್ಪಕೆ ಮಂಗಳಂ ।
ಉಲಿವ ಪೊಂಗೊಳಲ ಮೆಲ್ಲುಲಿಗಳಿಗೆ ಮಂಗಳಂ ।
ನಲಿನಲಿವ ಮಕರಕುಂಡಲಗಳಿಗೆ ಮಂಗಳಂ ॥ ೩

ಮುಗುಳುನಗೆ ಬನೆಗೊಳುವ ಪೊಗಸಸಿಗೆ ಮಂಗಳಂ ।
ಪೊಗರುಗುವ ಕದಪಿನೋಜೆಗೆ ಮಂಗಳಂ ।
ಮಗಮಗಿಪಯುಸಿರ ಪರಿಮಳಕೆ ಮಿಗೆ ಮಂಗಳಂ ।
ಬಗಸೆಗಣ್ಗಳ ತಣ್ಪುವಗೆಗಳಿಗೆ ಮಂಗಳಂ ॥ ೪

ಸಕಲಲೋಕವ ಪೊರೆವ ಸ್ಥೈರಣೆಗೆ ಮಂಗಳಂ ।
ಅಕಳಂಕಗುಣಸಮೂಹಕೆ ಮಂಗಳಂ ।
ಚಿಕದೇವರಾಯನಿಗೆ ಚಿಂತಿತಾರ್ಥವನೀವ ।
ಸುಕರಗೋಪಾಲನಿಗೆ ಶೋಭನಂ ಮಂಗಳಂ ॥ ೫ —೧—

॥ ರಾಗ—ಶ್ರೀರಾಗ ॥ ತಾಳ—ಝಂಪೆ ॥

ಸುಗುಣೆ ರುಕ್ಮಿಣಿಗೆ ಮಿಗೆ ಶುಭಮಂಗಳಂ ।
ಜಗದೀಶನೆಱೆಯಳಿಗೆ ಜಯಮಂಗಳಂ ॥ ಪಲ್ಲವಿ ॥

ಚ ॥ ಅಡಿಗೆಱಗಿದರೊಳು ಬಳೆವಱ್ಕಱಿಗೆ ಮಂಗಳಂ ।
ಬಡವರಿಗೆ ಕುಡುವ ಭಾವಕೆ ಮಂಗಳಂ ॥
ಎಡೆವಿಡದೆ ಜಗದೊಳಿರ್ಪೈಶ್ವರ್ಯಕ್ಕೆ ಮಂಗಳಂ ।
ತಡೆಯುದೆಲ್ಲೆಡೆಯೊಳಿಹ ತಳಹರಕೆ ಮಂಗಳಂ ॥ ೧

ಶರನಿಧಿಯೊಳುದಿಸಿದತಿಶಯಕೆ ಮಿಗೆ ಮಂಗಳಂ ।
ಸಿರಿವೆಸರುವಡೆದ ದೇಸೆಗೆ ಮಂಗಳಂ ।
ಸರಸಿಜೋದರದೊಳಿಹ ಸಂಗತಿಗೆ ಮಂಗಳಂ ।
ಹರಿಯೆರ್ದೆಯ ನೆಲೆಗೊಂಡ ಹದಿಸಕ್ಕೆ ಮಂಗಳಂ ॥ ೨

ತಕ್ಕರನು ಪೆರ್ಚಿಸುವ ದಾಯಕ್ಕೆ ಮಂಗಳಂ ।
ಮಿಕ್ಕುಮಿಗುವರಿವ ವೈಮೆಗೆ ಮಂಗಳಂ ।
ಚಿಕ್ಕದೇವೇಂದ್ರನಿಗೆ ಸಿರಿಯನೇಳಿಗೆಗೊಳಿಪ ।
ಪೆಕ್ಕಳದೊಳೆಸೆವ ಪೊಸಪೆಸ್ಸಣಕೆ ಮಂಗಳಂ ॥ ೩ —೨—

॥ ರಾಗ—ಕಾಂಬೋಧಿ ॥ ತಾಳ — ಝಂಪೆ ॥

ಸತ್ಯಭಾಮೆಗೆ ಸಕಲಜಯಮಂಗಳಂ ।
ಪ್ರತ್ಯಂತಲೋಚನೆಗೆ ಶುಭಮಂಗಳಂ ॥ ಪಲ್ಲವಿ ॥

ಚ॥ ಇನಿಯನನುಸರಿದೆಸಗುವಿಸ್ತ್ರಕಕೆ ಮಂಗಳಂ ।
ಮನಮುಜ್ಜುಗೊಳಿಸ ಸೇವಕೆ ಮಂಗಳಂ ।
ಇನಿದುಗುವ ಕೆಂಜವಿ ನುಡಿಸೆಟ್ಟುಸಿಗೆ ಮಂಗಳಂ।
ಅನುಸರಿಸಿ ನಡೆವ ಒಗೆಗಾವಗಂ ಮಂಗಳಂ ॥ ೧

ಮುನಿದಿನಿಸು ಮೊಗದಿಪಿವ ಮುಜುಕಕ್ಕೆ ಮಂಗಳಂ।
ಕಿನಿಸುನೋಟಗಳ ಕೊಂಕಿಗೆ ಮಂಗಳಂ ।
ಜಿನದದೊಳು ಮೂದಲಿಪ ಜಿಸ್ಣಕೆ ಮಂಗಳಂ ।
ಅನಿತರೊಳು ಬಗೆಗರಗುವಬ್ಕಿಗೆ ಮಂಗಳಂ ॥ ೨

ಒಡವೆರೆದು ಹರಿಯನೊಲಿಪೊಯ್ಯರಕೆ ಮಂಗಳಂ ।
ಎಡದೆಸೆಯ ನೇರಿದಿರವಿಗೆ ಮಂಗಳಂ ।
ಎಡೆವಿಡದೆ ಚಿಕ್ಕದೇವೇಂದ್ರನಿಗೆ ಜಯವೀವ ।
ಪೊಡವಿವಡದಿಯ ದಯೆಯ ಪೊಸಪಗೆಗೆ ಮಂಗಳಂ ॥ ೩ —೩—

॥ ರಾಗ—ಕಲ್ಯಾಣಂ ॥ ಆದಿತಾಳ ॥

ಸೇನಾನಾಥನಿಗೆ ಶ್ರೀಮಂಗಳಂ ।
ಶ್ರೀನಾಥನಂಕರಂಗಸೇವಕನಿಗೆ ಮಂಗಳಂ ॥ ಪಲ್ಲವಿ ॥

ಚ॥ ಪರವಾಸುದೇವನಲ್ಲಿ ಪರಮಹರ್ಷದೊಳಿರೆ ।
ಪರಿಪರಿ ಸೇವಗೆಯ್ವ ಪದುಳಕೆ ಮಂಗಳಂ ॥ ೧
ನಳಿನಾಕ್ಷನಾರೊಗಿಸಿ ನಲವಿನಿಂದಯಿಹಿದ ।
ತಳಿಗೆ ಪ್ರಸಾದಗೊಂಬ ಧನ್ಯತೆಗೆ ಮಂಗಳಂ ॥ ೨

ತಡೆಯಿಲ್ಲದೆ ಮುಕ್ತಿಗೆ ದಾಱಿದೋಱಿಸಲೆಂದು ।
ಶಠಕೋಪನಿಗೊಲಿದ ಸಂಪದಕೆ ಮಂಗಳಂ ॥ ೩ —೪—

॥ ರಾಗ—ಪಂತುವರಾಳಿ ॥ ತ್ರಿಪುಡೆ ತಾಳ ॥

ಮಂಗಳಂ ಮಿಗೆ ಮಂಗಳಂ ॥ ಗರುಡನಿಗೆ ॥ ಪಲ್ಲವಿ ॥

ನಳಿನಾಕ್ಷನ ಪಱಗೆಳೆಯನೂಱಿಗದವ ।
ಪಱಯಿಗೆ ಬಿಜ್ಜಣ ಪಟ್ಟವಣೆ ।
ಒಳುದೇರೆನಿಸಿಯುನ್ನತಿವಡೆದೊಪ್ಪುವ ।
ಪಱನುಡಿಯೊಡಲಿನ ಪಕ್ಕಿಗೆ ॥ ೧

ಮಂಗಳಂ ಮಿಗೆ ಮಂಗಳಂ ॥ ಮಹಾಶೇಷನಿಗೆ ॥ ಪ ॥

ಚ ॥ ವಾಸುದೇವಗೆ ನಲ್ವಣೆ ಪಾವುಗೆ ಪೆ ।
ಲ್ವಾಸಿಗೆ ಸತ್ತಿಗೆ ಬಣ್ಣದುಡೆ ।
ಈಸಕಲಾಕೃತಿಯಿಂದೊಳ್ಗೆಯ್ವುದ ।
ವಾಸನೆಯಿಱಿಯುದ ಪಾವಿಗೆ ॥ ೨

ಮಂಗಳಂ ಮಿಗೆ ಮಂಗಳಂ ॥ ಪರಕಾಲನಿಗೆ ॥ ಪ ॥

ಚ ॥ ನುಡಿಸುಡಿಯೊಳು ಜೇನುಗುವೊಲು ಮಾಧವ ।
ನಡಿಗಳ ಪ್ರೈಮೆಯುಸಱುಹಿದಗೆ ।
ತಡೆದು ನಿಲಿಸಿ ಬಾಳ್ಗಡಿತದ ಬಲ್ಮೆಯೊ ।
ಳೊಡನೆ ಮಂತ್ರವ ಕೊಂಡುತ್ತಮಗೆ ॥ ೩ —೫—

॥ ರಾಗ—ಭೈರವಿ ॥ ಅಟ್ಟತಾಳ ॥

ಶಠಕೋಪಯೋಗಿಗೆ ಮಂಗಳಂ । ಹರಿ ।
ಯಡಿಯ ಪಾವುಗೆಗೆ ಮಂಗಳಂ ॥ ಪಲ್ಲವಿ ॥

ಚ ॥ ವಕುಳಾಭರಣಗೆ ಮಂಗಳಂ । ವೈಷ್ಣವರೆಱೆಯುಗೆ ಮಂಗಳಂ ॥
ಅಕಳಂಕಚರಿತಗೆ ಮಂಗಳಂ । ಆದಿದೇಶಿಕನಿಗೆ ಮಂಗಳಂ ॥ ೧
ಸೇನೇಶದಾಸಗೆ ಮಂಗಳಂ । ಸೇವಕಪಾಲಗೆ ಮಂಗಳಂ ।
ಮಾನಿತಚರಿತಗೆ ಮಂಗಳಂ । ಮಧುರಕವೀಂದ್ರಗೆ ಮಂಗಳಂ ॥ ೨
ಕುರುಕಾಪುರೀಶಗೆ ಮಂಗಳಂ । ಗುಣಗಣನಿಳಯಗೆ ಮಂಗಳಂ ।
ಕರುಣಾನಿವಾಸಗೆ ಮಂಗಳಂ । ಕಾರಿಕುಮಾರಗೆ ಮಂಗಳಂ ॥ ೩ —೬—

॥ ರಾಗ—ಮಧುಮಾಧವಿ ॥ ಅಟ್ಟತಾಳ ॥

ಮಂಗಳಂ ಶುಭಮಂಗಳಂ ।
ಮಂಗಳವೆಂಬೆರುಮಾನಾರಿಗೆ । ಜಯ ॥ ಪಲ್ಲವಿ ॥

ಚ॥ ಅಹಿರಾಜನಂಶನೆಂದನಿಬರುಮಱಿವಂತೆ ।
ಮಹಿಯೊಳುದಿಸಿದಗೆ ಮಂಗಳಂ ।
ಸಹಜಗುಣಗಳಿಂದೆ ಜಗದೊಳೇೞ್ಗೆವೆತ್ತ ।
ಮಹನೀಯಚರಿತಗೆ ಮಂಗಳಂ ॥ ೧
ಶ್ರುತಿವಿಪರೀತವ ಸೊಲ್ಲಿಪ ವಿವಿಧಕು ।
ಮತಿಗಳ ಗೆಲಿದಗೆ ಮಂಗಳಂ ।
ಸ್ತುತಿಸೆ ವೈದಿಕದಿವ್ಯಸೂರಿನಿವಹಸ ।
ನ್ಮತವ ಬಳಸಿದಗೆ ಮಂಗಳಂ ॥ ೨
ಆನತರಿಗೆ ವೇದಾಂತವಱುಹಿ ಪರ ।
ಮಾನಂದವಡೆದಗೆ ಮಂಗಳಂ ।
ಶ್ರೀನಾಥನೊಲುಮೆಯ ಸೇವಕನೆನಿಪ ರಾ ।
ಮಾನುಜಾಚಾರ್ಯಗೆ ಮಂಗಳಂ ॥ ೩ —೭—

ಮಂಗಳ ಸಪ್ತಪದಿ ಸಂಪೂರ್ಣಂ.

ಗಡಿ ಮೂಡಲ್ ತೊರೆಯೂರನಂತಗಿರಿಗಳ್ ಧಾರಾಪುರಂ ತೆಂಕಲಾ ।
ಪಡುವಲ್ ಬಲ್ವಗೆಬುಂದಿಗಾಱ ವಸುಧಾರಾಭಿಖ್ಯೆಯೂರ್ಮತ್ತಮಾ ॥
ಬಡಗಲ್ತಾಂ ಪುಳಿಯೇಱುಗುಂಡುಮಲೆಗಳ್ ನೀನಾಳ್ವ ದೇಶಕ್ಕೆ ಮೇರ್ ।
ಗಡಿ ನಾಲ್ಕುಂ ಕಡಲೊಳ್ಜಸಕ್ಕೆ ಸರಿಯೇ ನಿನ್ನೇೞ್ಗೆಗಿನ್ನೆಲ್ಲಿಯುಂ ॥ ೫೫
ಕ್ಷ್ವೇಳಾರಾವದೆ ಸೀರೆಯುಂ ಪಟುಪಥಕ್ಕಾರಂಗಳಂ ಬೆಂಗಳೂರ್ ।
ಧೂಳೀಪುಂಜವೆ ಚೆಂಜೆವಂಡೆನಲೊಡಂ ಪಾಂಡ್ಯಾವನೀಮಂಡಲಂ ॥
ಚೋಳೋರ್ವೀತಲಮೆಯ್ದೆ ಬಾಳ ಪೊಳಪಿಂಗಾಳಾಮವಂದಂವೆ ತಾಂ ।
ಕೇೞಿಂ ಕಾಳೆಗದೊಳ್ಪದಕ್ಕೆ ಚಿಕದೇವಾ ಬಲ್ಲರೊಳ್ ಬಲ್ಲಹಾ ॥ ೫೬

॥ ಲಯಗ್ರಾಹಿವೃತ್ತ ॥

ಅಂದಿವನಿನಳ್ಕಿ ಭಯದಿಂದೆ ಮಣಿದಿರ್ದ ನೃಪ
ಬೃಂದಮನಿತುಂ ಭರದೊಳೊಂದುವೆರೆದೊಳ್ಪಿಂ ।
ಸಂದಿಸಿ ಶಿವಾಜಿಗನುವಿಂದೊರೆದು ಮರ್ಮಮನ ।
ವಂದಿರೊಡಗೂಡಿಯುವನಂದು ಕವಡಿಂದಂ ॥
ಸಂದಣಿಯ ಕಾಳೆಗದೊಳೊಂದಿನಿಸು ಮುಂಬರಿಯೆ
ಬಂದೆಱಗಿ ಪಾವುಗಳ ಗೊಂದಣದೆ ವಿಷ್ಣು ।

ಸ್ಯಂದನದ ಮಾಟ್ಕಿಯೊಳ್ ಕೊಂಡು ಕೊಲೆಯಾಡಿವಳ
ವಿಂದೆ ಚಿಕದೇವನೃಪನಿಂದು ಸೊಗವಾಳ್ಗಂ || ೫೭

|| ಗದ್ಯ ||

ಇದು ಸಕಲಜಗದುದಯವಿಭವಾದಿಲೀಲನುಂ, ಲಕ್ಷ್ಮೀಲೋಲನುಂ, ಅಖಿಲಹೇಯಪ್ರತ್ಯನೀಕನುಂ, ಅಪ್ರಾಕೃತಪ್ರತೀಕನುಂ, ಅವಾಪ್ತಸಮಸ್ತಕಾಮನುಂ, ಅನಂತಕಲ್ಯಾಣಗುಣಗಣಾರಾಮನುಂ, ಸಾರಸಭವಪೂಜಿತನುಂ, ಸನಕಮುನಿಸಭಾಜಿತನುಂ, ಯದುಶಿಖರಿಶಿಖರಾಲಂಕಾರನುಂ, ಯತಿರಾಜಸಂಪತ್ಕುಮಾರನುಂ, ಆಶ್ರಿತರಕ್ಷಾಪರಾಯಣನುಮಪ್ಪ ಯಾದವಗಿರಿನಾರಾಯಣನಡಿದಾವರೆಯುಜಿಂಗವೊಳ್ ಬಳ್ದೇಟ್ಗೆ ದಳೆವ ಯಾದವಕುಲೋದ್ಧಾರಕನುಂ, ಶುಭಗುಣೋದ್ಧಾರಕನುಮಾದ ದೇವರಾಜನೃಪಾಲಪೌತ್ರನುಂ, ಅತ್ರಿಗೋತ್ರಪವಿತ್ರನುಂ, ದೊಡ್ಡದೇವರಾಜ ಗರ್ಭಾಂಬುಧಿಕಲಾಧರನುಂ, ಸಕಲಕಲಾಧರನುಂ, ಅಶ್ವಾರೋಹಣಕಲಾರೇವಂತನುಂ, ಗಜಾರೋಹಣಮಘವಂತನುಂ, ಅಸ್ತ್ರವಿದ್ಯಾಭೃಗುರಾಮನುಂ, ಅಪ್ರತಿಮಧಾಮನುಂ, ಕರ್ಣಾಟಭೂಮಂಡಲಾಧೀಶನುಂ, ದೇವಸಂಕಾಶನುಂ. ಪಶ್ಚಿಮರಂಗಪುರಸಿಂಹಾಸನಾಧಿಷ್ಠಿತನುಂ, ಸುಪ್ರತಿಷ್ಠಿತನುಂ, ದೇವಬ್ರಾಹ್ಮಣ ಪರಿಪಾಲನೈಕಾನ್ತನುಂ, ಸಕಲಪ್ರಜಾಕಾನ್ತನುಂ, ಅಸಕೃದಾವರ್ತಿತಷೋಡಶಮಹಾದಾನನುಂ, ಆಶ್ರಿತಸರ್ವಶ್ರೇಯೋನಿಧಾನನುಂ, ರಸಿಕಜನಕರ್ಣಾರಸಾಯನೀಕೃತಸಂಗೀತವಿಸ್ತರನುಂ, ಸಾಹಿತ್ಯವಿದ್ಯಾನಿಕಷಪ್ರಸ್ತರನುಂ, ಪೂರ್ವದಿಗ್ವಿಜಯಯಾತ್ರಾವಿತ್ರಾಸಿತ ಚೇದಿಮಂಗಲೋಪಾನ್ತ ಕಾನ್ತಾರೋಪಗೂಢವ್ಯೂಢಸೇನಾಭಿಗುಪ್ತಪಾಂಡ್ಯಸೇನಾಧಿಪ ಸಂಗರಕಿರೀಟ ವೆಂಕಟಕೃಷ್ಣ ಶಿಬಿರಸರ್ವಸ್ವಹರಣಸಮಸಮಯಸಮಾಕ್ರಾನ್ತ ಮಳಲಿ ಪರಮತ್ತಿ ಶಾಲೆಯ ಚೇದಿಮಂಗಲ ಕೊಂಗು ಧಾರಾಪುರಾದಿ ಪಾಂಡ್ಯನೃಪದುರ್ಗಮದುರ್ಗಸ್ತೋಮನುಂ, ಸಂಗರಭೀಮನುಂ, ಉದ್ವೃತ್ತಸುರತ್ರಾಣಚಮೂವಿಕ್ಷೋಭಣವಿಚಕ್ಷಣವಿಕಟಮರಾಟ ಶಿವಾಜಿವಾಜಿಸೇನಾಧಿಪ ಜಯತಜಿಕಾಟಕರ ದಾದಜಿಕಾಕಡ ಪ್ರಮುಖಕಂಠನಾಳೋಚ್ಛಲದ್ರಕ್ತಧಾರಾಸಿಕ್ತಕೃಪಾಣಸಂದರ್ಶನವಿಲೀನಹರಜಿ ಸಂತಜಿ ಮುಖ್ಯಮಹಾರಾಷ್ಟ್ರನೃಪಪ್ರವೇಕನುಂ, ಅಪ್ರತ್ಯನೀಕನುಂ, ಗಂಭೀರೋದ್ಧತಪರಿಘಾವರಣಭೀಷಣಶತಘ್ನೀ

ಶತಸಂಕುಲಮತ್ತ ಮಾವಳಿಸೇನಾವಳೀವರ್ಮಿತಧರ್ಮಪುರೀಪ್ರಸಭಾಕ್ರಮಣ ಶ್ರವಣನಿರ್ಜನೀಕೃತ ಕೆಂಗೇರಿ ಮಾಮಲೂರು ಜೇವುಪಳ್ಳಿ ಜೈರನೆತ್ತ ಕುನ್ನತ್ತೂರ್ ಮುಖ್ಯದುರ್ಗವರ್ಗನಿರಾಯಾಸಾಕ್ರಮಣನಿವೃತ್ತನಿಜಸೈನಿಕಸಮೂಹನುಂ, ಅಪಹತಕಲಾಶ್ವೇತವಾಹನನುಂ, ದಕ್ಷಿಣದಿಗ್ವಿಜಯಯಾತ್ರಾವಿತ್ರಾಸಿತ ಪಲಾಯಿತ ಪಾಂಡ್ಯಬಲಾನುಧಾವನಶ್ರಾನ್ತ ನಿಜಬಲವಿಶ್ರಾನ್ತಿ ಸ್ಥಾನೀಕೃತಜಲಧಿವೇಲಾತಮಾಲಾರಣ್ಯನುಂ, ಆನತಜನಶರಣ್ಯನುಂ, ಪಶ್ಚಿಮದಿಗ್ವಿಜಯ ಪ್ರಸ್ಥಾನಭೇರೀರವಾಕರ್ಣನಸಂಭ್ರಾನ್ತದುರ್ದಾನ್ತ ಹುಶಾಸಖಾನಸನಾಥ ಕೆಳದಿನೃಪ ಸಮರ್ಪಿತ ಸರ್ವಸ್ವನಿರ್ವಾಪಿತಕೋಪನುಂ, ಅಮಿತಪ್ರತಾಪನುಂ, ಉತ್ತರದಿಗ್ವಿಜಯಸಮಯಾಭಿಯಾತ ಕುತುಪಶಾಹ ವಾಹಿನೀವಿಮರ್ದನಕ್ಷಣಾಕ್ರಾಂತ ಕಂಡಿಕೆರೆ ಚಿಕ್ಕನಾಯಕನಹಳ್ಳಿ ಹೊನ್ನವಳ್ಳಿ ಸಾರತವಳ್ಳಿ ತುಱುಗೆರೆ ಪ್ರಮುಖಮಗ್ರಹಪ್ರಾಕಾರವಾರನುಂ, ಅಸಹಾಯಶೂರನುಂ, ಜಡಕನದುರ್ಗಹಠಾದ್ಗ್ರಹಣವೇಳಾನಿಖಾತಸುರಂಗಮುಖಾನಲೋತ್ಕ್ಷಿಪ್ತಗಂಡೋಪಲಪಾತನಿರ್ಧೂತ ಬಿಜ್ಜವರ ಮದ್ದಗಿರಿ ಚೆನ್ನರಾಯದುರ್ಗ ವೀರಣದುರ್ಗಾದ್ಯಸಂಖ್ಯದುರ್ಗವರ್ಗಾಕ್ರಮಣಾವಸರಾವನತಸಾಮನ್ತನೃಪಾಲಮೌಳಿಮಣಿಶ್ರೇಣೀನೀರಾಜಿತಪದರಾಜೀವನುಂ, ಮಹಾನುಭಾವನುಂ, ಸಾಹಜಿನಿಖಿಲಮಹಾಟವಿಪರಾಜಧಾನೀಕೃತಾಭಂಗುರಬೆಂಗಳೂರ್ ಹರಣನಿಷ್ಪ್ರಾಣಿತ ಶಂಭುಜಿ ಸಾಹಜಿ ಸಂತಜಿ ಹರಜಿ ಪ್ರಮುಖ ಮಹಾರಾಷ್ಟ್ರನೃಪಾಲಜಾಲನುಂ, ರಿಪುಕುಲಕಾಲನುಂ, ಸಂಗ್ರಾಮರಾಮನುಂ, ಸಾಹಸೋದ್ದಾಮನುಂ, ಪ್ರೌಢಪ್ರತಾಪನುಂ, ಪ್ರಕಟಿತಾಟೋಪನುಂ, ಅಮಿತಪರಾಕ್ರಮನುಂ, ಅಭೇದ್ಯವಿಕ್ರಮನುಂ, ಕರ್ಣಾಟಚಕ್ರವರ್ತಿಯುಂ, ಕಲ್ಯಾಣಕೀರ್ತಿಯುಂ, ಲೋಕೈಕವೀರನುಂ, ವೀರರೊಳ್ಗಂಡನುಂ, ಗಂಡರೊಳ್ಗಂಡನುಂ, ಅಂತೆಂಬರ ಗಂಡನುಮೆನಿಸಿ ನೆಗೞ್ದ ಶ್ರೀಮದಪ್ರತಿಮವೀರನರಪತಿ

ಶ್ರೀ ಚಿಕದೇವಮಹಾರಾಜ ವಿರಚಿತಮಪ್ಪ ದಿವ್ಯಪ್ರಬಂಧಂಗಳೊಳ್

ಶ್ರೀ ಗೀತಗೋಪಾಲ ಮಹಾಪ್ರಬಂಧದೊಳ್

ಪೂರ್ವಭಾಗಂ ಸಂಪೂರ್ಣಂ.

॥ ಶುಭಮಸ್ತು ॥

# ಶ್ರೀ ಗೀತಗೋಪಾಲೋತ್ತರಭಾಗಂ.

ಕಂದ ‖ ಶ್ರೀರಮಣನಖಿಲಸದ್ಗುಣ |
ವಾರಿಧಿಯಾನಂದಮಯನನೂನೋಪಮನಿ ‖
ಸ್ಫಾರಿತರೂಪಂ ಮಮಗಿರಿ |
ನಾರಾಯಣನಾರ್ದಸಕ್ಕೆ ನರಪತಿಗನಿಶಂ ‖

ಅನಂತೈಕರಸಂ ಸಮಸ್ತಜಗದಾನಂದಂಗೆ ಚಕ್ರಾಯುಧಂ |
ಸೇನಾಚಕ್ರವಿಮರ್ದಿತಾಹಿತಸಮೂಹಚಕ್ರಂಗೆ ವೈಕುಂಠನ ‖
ನ್ಯಾಸೋಪಾಯವಿಕುಂಠಿತಾರಿಧರಣೀಭೃದ್ದುರ್ಗವರ್ಗಂಗೆ ಲ |
ಕ್ಷ್ಮೀನಾರಾಯಣನೀವನಕ್ಕೆ ಚಿಕದೇವೇಂದ್ರಂಗೆ ಸಾಮ್ರಾಜ್ಯಮಂ ‖ ೧

ಜಡಕನ ಮಗಂದಿಂ ನೆಗೆದ ಪಾಳೆಯಂಗಳ್ ತಡೆಗಟ್ಟಿ ಬಟ್ಟೆಯಂ |
ಕೊಡನ ಕುಮಾರನಾಣತಿಯಿನೆಂದಿನವೊಲ್ ಬರೆದತ್ತ ಬಿಜಯಂ ‖
ದೆಡಬಲದತ್ತ ಸುತ್ತುವಿನಮಾಜಿಯೊಳಿರ್ದ ವೈರಿವೀರರಂ |
ನುಡಿಸೆ ಪೊದಳ್ದ ಯುದ್ಧಗರುಡಧ್ವಜನುದ್ಧತಿಗೆತ್ತನಂದಿನಂ ‖ ೨

ಬಡಲೊಡನೊರ್ವನಂ ದಿವಮನೇರಿಸಿದಾಕುಶಿಕಾತ್ಮಜಂಗವೇಂ |
ಬಿಡಯಮೆ ಸಾಕು ನಿಲ್ಕೆ ಚಿಕದೇವನೃಪಾಲವರಂ ಸುರಂಗದಿಂ ‖
ಜಡಕನ ಮರ್ಗದೊರ್ಮೊಗದ ಕೋಂಟೆಯನೇರಿದ ವೀರರೊಳ್ಗನೇ |
ಅಡರಿಸಿದಂ ದಿವಕ್ಕಮಮ ಸೈ ಮದ್ಭುತಮಾ ಭಳಿ ಪೂತು ಭಾಪುರೇ ‖ ೩

ವಚನ ‖ ಇಂತು ಶ್ರೀ ಗೀತಗೋಪಾಲಮಹಾಪ್ರಬಂಧದೊಳ್ ಪೂರ್ವಭಾಗದೇಳುಂ ಸಪ್ತಪದಿಗಳೊಳ್ ಗೋಪಿಕಾವೃತ್ತಾಂತನಿರೂಪಣವ್ಯಾಜದಿಂ ಭಗವದ್ಗುಣಂಗಳನನುಭವಿಸಿ, ಈಯುತ್ತರಭಾಗದೇಳುಂ ಸಪ್ತಪದಿಗಳೊಳೀ ಗುಣಾನುಭವಂ ಎಡೆವಿಡದೆ ದೊರೆಕೊಂಬ ಮೋಕ್ಷಮಂ ಸಾಧಿಸುವಕ್ಕೆ ಉಪಾಯಮಾದ ಪ್ರಪತ್ತಿಸ್ವರೂಪಮಂ ನಿರೂಪಿಸುವಂ. ಇದರೊಳೆ

ವೆರ್ಡ್‌ದಲ ಸಪ್ತಪದಿಯೊಳ್ ತಾಂ ಪ್ರಪತ್ತಿಗೆಯ್ವು ದೇವತೆಯುಂ ಗುರುಪರಂ ಪರೆಯೊಡನೆ ನುತಿಗೆಯ್ವರ್. ಇದಱಿನೊಳ್ಗೊವೆರ್ಡ್‌ದಲ ಪಂಚಪದಿಯೊಳ್ ತಮ್ಮ ಯದುಕುಲದೇವತೆಯುಪ್ಪ ಯಾದವಗಿರಿನಾರಾಯಣನ ಕಲ್ಯಾಣಗುಣಂ ಗಳನನುಭವಿಸಿಯುವರ್ಕೆ ಮಂಗಲಾಶಾಸನಂಗೆಯ್ವರ್.

॥ ರಾಗ—ಯರಕಲಕಾಂಬೋಧಿ ॥ ಆದಿತಾಳ ॥

ಮಂಗಳಂ ತಿರುನಾರಾಯಣನಿಗೆ । ಮಿಗೆ ಮಂಗಳ ಯದುಗಿರಿನಿಲಯನಿಗೆ ॥ ಪಲ್ಲ॥

ಚ ॥ ತಾನೊಲಿದರ್ಚಾವತಾರವಡೆದು ಚತು
ರಾನನಲೋಕದೊಳವತರಿಸಿ ।
ಆನಂದಮಯವೆನಿಪತಿಶಯವೆಸರ ವಿ
ಮಾನಮಧ್ಯದಿ ನಿಂದ ಮಹನೀಯಗೆ ॥ ೧

ವನಜಸಂಭವನ ಭವನದೊಳು ಬಹುಕಾಲ
ವನುಪಮದಿವ್ಯಾರ್ಚನೆವಡೆದು ।
ಸನತುಕುಮಾರನ ಸಂಗಡ ಬದರಿಯ
ಬನದೆಡೆಗೆಯ್ತಂದ ಭವ್ಯನಿಗೆ ॥ ೨

ಪಲವಗೆ ಪೂಜಿಪ ಬದರಿನಾರಾಯಣ
ನೊಲಿದು ಮುನಿಗಳು ತನ್ನೊಡನೆ ಬರೆ ।
ಕಲಿಕಲುಷವನೆಲ್ಲ ಕಳೆವ ಯಾದವಗಿರಿ
ನಿಲಯದಿ ನೆಲಸಿದ ನಿರುಪಮಗೆ ॥ ೩

ಆದಿವಿಡಿದು ದತ್ತಾತ್ರೇಯ ರಾಘವ
ಯಾದವ ರಾಮಕೃಷ್ಣಾದಿಗಳು ।
ಪಾದವಂದನೆಗೆಯ್ದು ಭಜಿಸೆಯುವರ ಪೊರೆ
ವಾದಿದೇವನಿಗಂಬುಜಾಕ್ಷನಿಗೆ ॥ ೪

ರಾಮಾನುಜಮುನಿರಾಜ ಭೂಮಿಪರೊಳು
ಪ್ರೇಮವ ಮಿತಿಮೀಱಿ ಬಳಸಿದಗೆ ।
ಶ್ರೀಮಂತನಿಗೆ ಮಿಗೆ ಚಿಕದೇವರಾಯಗೆ
ಕಾಮಿತಾರ್ಥವನೀವ ಗರುವನಿಗೆ ॥ ೫ —೧—

ವಚನ ॥ ಈಯೆರಡನೆಯ ಪಂಚಪದಿಯೊಳ್ ಮುಂ ತಮ್ಮ ಕೂಟಸ್ಥರ್ ದ್ವಾರಕಾನಗರದಿಂ ಕರ್ಣಾಟಕಕ್ಕೆ ಬಂದು ಮೊತ್ತಮೊದಲ್ ತಾವುಗೊಂಡು ದಱಿಂ ತಾಯ್ಮನೆಯೆನಿಪ ಮಹೀಶೂರನಗರಕ್ಕೆ ಅಧಿದೇವತೆಯುಪ್ಪ ಲಕ್ಷ್ಮೀ ನಾರಾಯಣಂಗೆ ಮಂಗಳಾಶಾಸನಂಗೆಯ್ವರ್.

॥ ರಾಗ—ಮಧುಮಾಧವಿ ॥ ಅಟ್ಟತಾಳ ॥

ಮಂಗಳಂ ಲಕ್ಷ್ಮೀರಮಣಗೆ | ಮಿಗೆ ಮಂಗಳ ಮಹಿಶೂರಪುರವಾಸಗೆ ॥ ಪ ॥
ಚ ॥ ಸಿರಿರಾಣಿಯೊಡಗೂಡಿ ಶೇಷಪೀಠದೊಳು ಕ
ಟ್ಟರಸುತನದೊಳೆಸೆವನಘನಿಗೆ ।
ಪರವಾಸುದೇವಗೆ ಭಕ್ತರಸಾನಂದ
ಪರವಶಗೊಳಿಸುವ ಭವ್ಯನಿಗೆ ॥ ೧
ಅಮಿತಗುಣಾಢ್ಯನಿಗಂಬುನಿಧಿಯೊಳು
ವಮರಿರೆ ನಿದ್ದೆಗೆಯ್ವಚ್ಯುತಗೆ ।
ಅಮರರ ಮೊಱೆಗೇಳಿ ಅಸುರರೇಳಿಗೆಯನು
ಶಮನಗೊಳಿಸಿ ತೋರ್ಪ ಚದುರನಿಗೆ ॥ ೨
ಸುಗುಣರ ಮನ್ನಿಸಿ ವಿಗಡರ ಮಗ್ಗಿಸಿ ।
ಬಗೆಗೊಳೆ ಧರ್ಮವ ಬಲಿಸಿದಗೆ ।
ಯುಗಯುಗದೊಳು ಪುಟ್ಟಯುಚಿತಚರಿತ್ರದಿ ।
ಜಗವ ಪಾವನಗೆಯ್ವ ಜಾಣನಿಗೆ ॥ ೩
ಬಲ್ಲರು ತನ್ನನೆಂದೋಕರಿಸದೆ ಮಿಗೆ ।
ಪೊಲ್ಲದರೆಂದೊಮ್ಮೆ ಪೊಱತಟ್ಟದೆ ।
ಎಲ್ಲರ ಹೃದಯದೊಳಿರ್ದವರಿಗೆ ಬಲ್ಮೆ ।
ಬಲ್ಲವಿಕೆಗಳನು ಬಲಿಸುವಗೆ ॥ ೪
ನರಪತಿ ಚಿಕದೇವನಾಥಸಂರಕ್ಷಣ ।
ಪರನಿಗೆ ಮಹೀಶೂರಪುರವಾಸಗೆ ।
ಪರವ್ಯೂಹವಿಭವಾಂತರ್ಯಾಮಿಯರ್ಚಾವ ।
ತರಣದಿ ಲೋಗರ ಪೊರೆವನಿಗೆ ॥ ೫ —೨—

ವಚನ ॥ ಈ ಮೂಱನೆಯ ತ್ರಿಪದಿಯೊಳ್ ತಮ್ಮ ರಾಜಧಾನಿಯಪ್ಪ ಶ್ರೀರಂಗಪಟ್ಟಣವ ಪಶ್ಚಿಮರಂಗರಾಯನ ಗುಣಂಗಳಂ ಪೊಗಳ್ವರ್.

॥ ರಾಗ—ಕುರಂಜಿ ॥ ಅಟ್ಟತಾಳ ॥

ಪಾವನಗುಣನಿಸ್ಸೀಮನ ।
ಭಾವುಕಹೃದಯಾಭಿರಾಮನ । ನಾ ।
ಭಾವಿಪೆ ಪರಿಪೂರ್ಣಕಾಮನ ।
ಪಶ್ಚಿಮಶ್ರೀರಂಗಧಾಮನ ॥ ಪಲ್ಲವಿ ॥
ಚ ॥ ಮಂಗಳಫಣಿಪತಿತಲ್ಪನ ।
ಮಹನೀಯಸತ್ಯಸಂಕಲ್ಪನ ।

ಅಂತ । ರಂಗದೊಳಿಡುವೆಯೆನ್ನಪ್ಪನ ।
ಶ್ರೀ । ರಂಗಪಟ್ಟಣದ ರಂಗಪ್ಪನ ॥ ೧

ನೀಲನೀರದ ಸಂಕಾಶನ ।
ನಿರವಧಿನಿತ್ಯಪ್ರಕಾಶನ ।
ಭಕ್ತ । ಪಾಲನ ಕಲಿತಾವೇಶನ ।
ನಾ । ಭಜಿಸುವೆ ಶ್ರೀರಂಗೇಶನ ॥ ೨

ಸರಸಿಜಭವ ಭವಧ್ಯೇಯನ ।
ಮುನಿ । ವರಗೌತಮಭಾಗಧೇಯನ ।
ನಿರುಪಮಭಕ್ತಿ ವಿಧೇಯನ ।
ನಾ । ನೆನೆವೆ ಪಶ್ಚಿಮರಂಗರಾಯನ ॥ ೩ —೩—

ವಚನ ॥ ಈ ನಾಲ್ಕನೆಯ ತ್ರಿಪದಿಯೊಳ್ ಪ್ರಸನ್ನವಿಷಯದೊಳೊರ್ವರ್ ದೋಷವೆಣಿಸ ಜಗದೀಶನ ದೋಷಮಂ ಕಳೆದು ಕೃಪೆಯಂ ಜನಿಯಿಪ ಶ್ರೀರಂಗನಾಯಕಿಯಂ ಪೊಗಳ್ವರ್.

॥ ರಾಗ—ಮುಖಾರಿ ॥ ಅಟ್ಟತಾಳ ॥

ನಿನ್ನ ಪೊಗಳಲೆನ್ನಳವೆ ।
ರಂಗನಿಲಯನ ಭಾಗ್ಯದ ಫಲವೆ ।
ನಿನ್ನೊ । ಳೆನ್ನ ನುಡಿಯ ಬಿತ್ತಿ ಬೆಳೆವೆ ।
ಯೆನ್ನಿಷ್ಟಾರ್ಥವ ಕೈಕೊಳುವೆ ॥ ಪಲ್ಲವಿ ॥

ಚ ॥ ಕಡಲೊಳೊಗೆದ ಕನ್ನೆ ರನ್ನೆ ।
(ನಿತ್ಯ)ಕಲ್ಯಾಣಗುಣಸಂಪನ್ನೆ ।
ಕಡುವಣ್ಣವಿಡಿದ ಚೆಂಬೊನ್ನೆ ।
ರಂಗಾಧೀಶನ ಮನದನ್ನೆ ॥ ೧

ಆರಯ್ಯೆ ನಿನ್ನ ಮಗ ಬೊಮ್ಮ ।
ಅಲ್ಲಾ ಚಂದ್ರಶೇಖರ ಮೊಮ್ಮ ।
ನಿನ್ನ ಸೇರಿರೆ ಹರಿಪರಬೊಮ್ಮ ।
ಅಮ್ಮ ಶ್ರೀರಂಗನಾಚ್ಚಾರಮ್ಮ ॥ ೨

ಶ್ರೀರಮಣಿ ಶ್ರುತಿಗೇಯೆ ।
ಸಿದ್ಧೋಪಾಯಸಹಾಯೆ ।
ಈರೇಳು ಲೋಕದ ತಾಯೆ ।
ರಂಗೇಶಪದಾಂಬುಜಚ್ಛಾಯೆ ॥ ೩ —೪—

ವಚನ || ಈ ಐದನೆಯ ತ್ರಿಪದಿಯೊಳ್ ಲಕ್ಷ್ಮಿಯತ್ತಣಿಂದಧಿಕರಿಸಿದ ಮೋಕ್ಷವಿದ್ಯೆಯಂ ಪರಮಪದದಿಂದಿಳೆಗಿಳಿಪಿದ ವಿಷ್ವಕ್ಸೇನರಂ ಶರಣ್ಬುಗುವರ್.

|| ರಾಗ—ಕಾಂಬೋಧಿ || ಆದಿತಾಳ ||

ಸೇನಾನಾಥ ಸೇರಿದೆ ನಿನ್ನ ।
ಆನತವತ್ಸಲ ವಿಷ್ವಕ್ಸೇನ ವಿಜಿತಾರಿಸೇನ || ಪಲ್ಲವಿ ||

ಚ || ಪರಮಕೃಪಾಲಯ ಪಾಲಿಸು ಮತಿಯ ।
ದೊರೆಕೊಳಿಸೆನಗೆ ಸತ್ಪುರುಷಸಂಗತಿಯ ||
ಕರುಣಿಸು ನಿನ್ನಡಿಗೆಱಗುವ ಮತಿಯ ।
ಭರದಿ ಕೈಸೇರಿಸು ಭಾಗ್ಯೋನ್ನತಿಯ || ೧

ಶ್ರೀಕರಸೂತ್ರವತಿಯ ಮನದನ್ನ ।
ಲೋಕನಿಯಮನಾಲೋಕಸಂಪನ್ನ ।
ಆಕುರುಕೇಶನನಾಳಿದ ಗನ್ನ ।
ಸಾಕು ಅನಾಥನ ಸಲಹೊ ನೀಯೆನ್ನ || ೨

ನಳಿನಾಕ್ಷಗೆ ಮಿಗೆ ನಚ್ಚಿನ ಕೆಳೆಯ ।
ತಳಿಗೆ ಪ್ರಸಾದವ ಸವಿವಗ್ಗಳೆಯ ।
ಕಳೆದು ಭವಾಂತರಕಲುಷಾವಳಿಯ ।
ತಳುವದೆ ಕೈವಿಡಿ ಸದ್ಗುಣನಿಳಯ || ೩

—೫—

ವಚನ || ಈ ಆಱನೆಯ ತ್ರಿ[illegible]ಳ್ ಪ್ರಪನ್ನಜನಕೂಟಸ್ಥರಪ್ಪ ನಮ್ಮಾಳ್ವಾರಂ ನೆಮ್ಮುವರ್.

|| ರಾಗ— [illegible]ವ || ರೂಪಕತಾಳ ||

ನಮ್ಮಾಳ್ವಾರೆ ನ[illegible] ।
ಗಮ್ಮನೆ ಸಲಹೆ [illegible]ಕಾಸಂಪನ್ನ || ಪಲ್ಲವಿ ||

ಚ || ಕಡುಗಿ ವಿಭಾಗಿಸಿ ಕರಣಾಟಪಡೆಯ ।
ಶಠಗೋಪವೆಸರನು ಪಡೆದಗ್ಗಡೆಯ ।
ಪಿಡಿದಿರುವೆನು ಬಿಗಿಬಿಗಿದು ನಿನ್ನಡಿಯ ।
ಸಡಿಲ ಬಿಡದೆ ಯೆನ್ನ ಸಲಹುಯೆಸ್ನೊಡೆಯ || ೧

ಅಂಡು ಮಧುರಕವಿಹರುಷವ ತಾಳ್ದಿ ।
ಅಂದದಿ ದ್ರವಿಡಾಮ್ನಾಯವ ಪೇಳ್ದಿ ।

ಕುಂದದೆ ಶ್ರೀಶನ ಗುಣಗಳ ಪೊಗಳ್ದ ।
ಸಂದ ಸಕಲದುರ್ಮತಗಳ ತಗುಳ್ದ ॥ ೨

ಒಡನೆ ರನ್ನದ ಪಾವುಗೆಯು ರೂಪಾಂತೆ ।
ಬಿಡದೆ ಶ್ರೀಧರನಡಿಯೆಡೆಯೊಳು ನಿಂತೆ ।
ತಡೆಯದೆ ಮುನಿಗಳ ಮುಡಿಯೊಳೊರಂತೆ ।
ಕಡುರಮ್ಯವಾದೆ ಶಿಖಾಮಣಿಯಂತೆ ॥ ೩ —೬—

ವಚನ || ಈ ಏೞನೆಯ ತ್ರಿಪದಿಯೊಳ್ ತಮ್ಮ ಯಾದವಗಿರಿಗೆ ಕುಲದೇವರೆನಿಸಿ ಯದುಗಿರಿಯೊಳ್ ನೆಲಸಿದ ರಾಮಪ್ರಿಯಂಗೆ ಪ್ರಿಯತಮರೆನಿಸಿದ ರಾಮಾನುಜರಂ ಸನ್ನುತಿಸುವರ್.

॥ ರಾಗ—ಯರಕಲಕಾಂಬೋಧಿ ॥ ಅಟ್ಟತಾಳ ||

ಶ್ರೀಭಾಷ್ಯಕಾರ । ಪಾಲಿಸೆನ್ನ ಶ್ರೀಭಾಷ್ಯಕಾರ । ಶ್ರೀಭಾಷ್ಯಕಾರಾದಿಶೇಷಾವತಾರ । ಶೋಭನ[1] ಗುಣಗಣ[1] ಸುಜನಮಂದಾರ || ಪಲ್ಲವಿ ||

ಚ|| ತಿರುಪತಿಯೊಳಗಂದು ತಿರುವೇಂಕಟೇಶಗೆ ।
ತಿರುಲಾಂಛನವಿತ್ತ ದೇಶಿಕೋತ್ತಮನೆ ।
ಪರಿಪರಿಯುಕ್ತಿಯಿಂ ಪರವಾದಿಗಳನೆಲ್ಲ ।
ಪರಿದು ವೇದಾಂತತಾತ್ಪರ್ಯವ ನುಡಿದೆ || ೧

ಕುಂದದೆ ತಿರುಕುರುಂ[illegible]ಯ ನಂಬಿಗೆ ನೀ ।
ನಂದು ಸಕಲವೇದಾಂತ[illegible]ಳ ।
ಚೆಂದವ ತಿಳುಪಿದಾ[illegible] ನೀ ।
ಸಾಂದೀಪನಿಯಂತೆ ಸನ್ನುತಿ[illegible]

ಡಿಳ್ಳಿಯೊಳೊಂದುಗೂಡಿರೆ ದೇ[illegible] ।
ಪಿಳ್ಳೆ ಬಾರೆನೆ ನಿನ್ನ ಬೆಂಬಳಿಯು ಬರ[illegible]
ಉಲ್ಲಾಸದಿಂ ಯಾದವಾದ್ರಿಗೈದಿಸಿ ಚೆಲ್ವ
ಪಿಳ್ಳೆರಾಯಗೆ ನೀ ಪಿತನೆಂದೆನಿಸಿದೆ || ೩ —೭—

ಗುರುಪರಂಪರಾಸಪ್ತಪದಿ ಸಂಪೂರ್ಣಂ.

---

ಪಾ—1. ಗುಣಾಸಾರ.

## — ಸಪ್ತಪದಿ — II.

ಬಾಸುದ್ದಂ ಬಳೆದಿರ್ಪ ಮದ್ದಗಿರಿಯಂ ದಾಟಿಟ್ಟವಂ ಬಂದನಿ |
ನ್ನೇನಾನುಂ ಗಿರಿದುರ್ಗದೊಳ್ ಮಲೆಪೆವೆಂಬೀಯಾಸೆ ಬಲ್ಮೀಸಮೆಂ ||
ತಾನುಂ ನಿಲ್ವೊಡೆ ಸೊನ್ನೆವೆಟ್ಟನಡರಲ್ವೇೞ್ಕುಂ ರಿಪುಕ್ಷ್ಮಾಧವ |
ಗ್ರಾಸಾಕಂಬರವೇೞಲಾಱದೊಡೆ ಪುತ್ತ್ರೊಂದುಂಟು ಮತ್ತಲ್ಲಿ ದಲ್ || ೫

ಅಱುವತ್ತುಂಸಾಸಿರಂವಾರುವದೊಡನಱುನೂಱಾನೆಮೂಲಕ್ಕವಾಳುಂ
ತುಱುಗಿರ್ಪಾಸೈನ್ಯದಿಂ ಮದ್ದಗಿರಿಗೆ ಮೊದಲೊಳ್ ಮುತ್ತಿದಾಚೋಳನಂ ಕೈ||
ಸೆಱೆಗೊಂಡಾಸೊರ್ಕಿಸಿಂಧುಕರ್ಣವರಸವರ ದುರ್ಗಂಗಳಂ ಪೆಣ್ಗಳಂ ನೀಂ |
ಸೆಱೆಗೊಂಡೇಂ ಗಂಡರೊಳ್ಗಂಡನೆನಿಪ ಬಿರುದಂ ಬೀರರೊಳ್ಗಂಡ ಕೊಂಡೈ||

ವಚನ || ಲೋಕದೊಳ್ ಕೆಲರ್ ತಾಮೆಳಸಿದ ಫಲಮಂ ಸಾಧಿಸುವುವರ್ಕೆ ತಾಮೆಸಗುವ ಕರ್ಮಂ ಮೊದಲಾವುದೇ ಸಾಧನಮೆಂದು ನೆಱೆನಂಬಿಯವರ್ಕೆ ಸಹಾಯಮಾಗಿ ಜಗದೀಶ್ವರನಂ ಕೊಂಡಿರ್ಪರ್. ಈ ಚಿಕದೇವರಾಯರ್ ತಾಮೆಸಗುವ ಕರ್ಮಜ್ಞಾನಭಕ್ತ್ಯಾದಿಗಳಾಳ್ದನಪ್ಪ ಶ್ರೀಮನ್ನಾರಾಯಣಂಗೆ ಮುದೋಲ್ಲಾಸಮನಾಗಿಸುವೆಸಕಂಗಳೆಂದುಂ ಫಲಪ್ರಾಪ್ತಿಗವನೇ ಸಾಧನಮೆಂದುಂ ನಂಬಿರ್ಪರ್. ಈಯರ್ಥಮನೀಯರಡನೆಯ ಸಪ್ತಪದಿಯೊಳ್ ನಿರವಿಸುವರ್. ಅದಱೊಳಿವು ಮೊದಲಾದ ಪಂಚಪದಿಯೊಳೀ ನೆಲೆಯುಂ ತಮ್ಮನಾಳ್ಗೊಂಡ ಪಶ್ಚಿಮರಂಗರಾಯಂಗೆ ಬಿನ್ನವಿಸುವರ್

ರಾಗ—ಕಾಂಬೋಧಿ ॥ ಅಟ್ಟತಾಳ ॥

ನಿನ್ನ ನಂಬಿದೆ । ನಿನ್ನ ನಂಬಿದೆ । ನಿನ್ನ ನಂಬಿದೆ ನಂಬಿದೆ ॥
ನೀ । ನೆನ್ನ ಸಲಹು ಬಿಡು ನಿನ್ನ ಚಿತ್ತವಿನ್ನು ॥ ಪಲ್ಲವಿ ॥

ಚ॥ ನೀನಱಿಯದುದೆ ಪೇೞು ।
ನಿನ್ನವನೆಂಬೀಟ್ಗೆಯೊಂದೆನಗೆ ।
ನೀನಲ್ಲದನ್ಯವ ನೆನೆವನಲ್ಲ ಕರ್ಮ ।
ಜ್ಞಾನಭಕತಿವೈರಾಗ್ಯವ ನಂಬಿದವನಲ್ಲ ॥ ೧

ಎಳಮೆಯೊಳ್ ಪರಿದಾಟ ।
ಯೌವನದೊಳು ಯೆಳವೆಣ್ಗಳೊಡನಾಟ ।
ಬೞಿಕ ವಾರ್ಧಿಕದೊಳು ಪಲವೆಡರಿನ ಕಾಟ ।
ತಿಳಿಯೆ ಕರ್ಮಯೋಗ ತೀರದೆಂದಿಗು ರಂಗ ॥ ೨

ವೇದಾಂತಗಳು ಪಲವು ।
ಅವಱೊಳು ವಿವಾದಂಗಳವು ಕೆಲವು ।
ಭೇದಿಸಿ ನೋಡಲು ವೇದ್ಯವಾಗದು ತಲವು ।
ಓದುಗಳಿಂ ಜ್ಞಾನಯೋಗ ಸಾಗದೆಂದಿಗು ॥ ೩

ತನುವ ದಂಡಿಪುದರಿದು ।
ಕರಣಂಗಳ ತಡೆವುದು ಮಿಗೆಯರಿದು ।
ಮನವ ಬಲ್ವಿಡಿವುದು ಮತ್ತಮರಿದರಿದು ।
ನೆನಹಿನೊಳ್ ವೈರಾಗ್ಯ ನೆಲೆಗೊಳ್ಳದೆಂದಿಗು ॥ ೪

ಸಿರಿಯಾಸೆ ಕಡುನಿಡಿದು ।
ಸಗ್ಗದ ನಾಡ ಸೆಱೆಯಾಸೆಯೊಡೆಗೂಡದು ।
ಮರಳಿ ಕೈವಲ್ಯದ ಮರುಳು ಬೆನ್ನಬಿಡದು ।
ಪರಮಭಕತಿಯೋಗ ಬಲಿಯದೆಂದಿಗು ರಂಗ ॥ ೫

— ೧ —

ವಚನ ॥ ಈ ಯೆರಡನೆಯ ಪಂಚಪದಿಯೊಳ್ ಅಧಿಕಾರದೊಳರ್ಪತಾಂ ಬಿಡತಕ್ಕುವಂ ತಮ್ಮ ಮನಮುಂ ಸೆಱೆಗೊಂಡ ರಾಯಗೋವಳಂಗೆ ಬಿನ್ನವಿಸುವರ್.

॥ ರಾಗ—ಕಾಂಬೋಧಿ ॥ ಅಟ್ಟತಾಳ ॥

ನಿನ್ನ(ನ)ಲ್ಲದೆ ನಾನೊಲ್ಲೆನು । ಆ । ನಿನ್ನಮಹಿಮೆಗಳ ಬಲ್ಲೆನು । ನೀ ।
ನಿನ್ನ ಕೈಬಿಟ್ಟೊಡೆ ಸಲ್ಲೆನು । ಸ್ವಾಮಿ । ಚೆನ್ನಿಗ ಚಿಕದೇವೇಂದ್ರವಲ್ಲಭ ಕೃಷ್ಣ ॥
ಪಲ್ಲವಿ ॥

ಚ ॥ ಬಱಿಯಾಸೆಗೆ ಬಸವಳಿಯೆನು ।
ಕೆಲಬಲದ ಕೆಸಱುಗಳ ತುಳಿಯೆನು ।
ಕಿಱಿದನೆಸಗಿ ಕೀಳಿಗಿಳಿಯೆನು ।
ನಿನ್ನನಱಿಯದರೊಡನಾಡಿಯಳಿಯೆನು ಕೃಷ್ಣ ॥ ೧

ಮಿತಿಮೀಱಿಯಾನುರವಣಿಸೆನು ।
ಸಲ್ವ ಮೇರೆಗಳನು ಕಡೆಗಣಿಸೆನು ।
ಇತರದೇವತೆಗಳ ಗಣಿಸೆನು ।
ಅವರೀವ ಫಲಂಗಳನೆಣಿಸೆನು ಕೃಷ್ಣ ॥ ೨

ಮುದ್ರೆಯನೊಮ್ಮೆಯು ಮೀಱೆನು ।
ಮೀಱಿ ಮುಗ್ಗಿ ಪಲವು ಕೊಂಬಿಗೇಱೆನು ।
ಕ್ಷುದ್ರಫಲಂಗಳ ಕೋರೆನು ।
ಕುತರ್ಕ ಕುಲಕೆ ಕೊಡಲಿಯಾಗಲಾಱೆನು ಕೃಷ್ಣ ॥ ೩

ಮರುಳರೊಡನೆ ಮಾತನಾಡೆನು ।
ಮಿಕ್ಕ ಮಾಯಾವಿಗಳೊಡಗೂಡೆನು ।
ತರವನರಿಯದಾಸೆಮಾಡೆನು ।
ತಪ್ಪುದಾರಿವಿಡಿದು ನಿನ್ನ ಕಾಡೆನು ಕೃಷ್ಣ ॥ ೪ ॥
ಪಲವು ಬಟ್ಟೆಗಳನು ಮೆಟ್ಟೆನು ।
ಅಲ್ಲಿ ಪರಿದಾಟಕೆ ಕಾಸೆಗಟ್ಟೆನು ।
ಉಳಿದು ವಿಷಯಗಳ ಮುಟ್ಟೆನು ।
ಇನ್ನೊಮ್ಮೆಯುದಿಸುದಲ್ಲಿ ಪುಟ್ಟೆನು ಕೃಷ್ಣ ॥ ೫ ॥ — ೨ —

ವಚನ ॥ ಈ ಮೂಱನೆಯ ಪಂಚಪದಿಯೊಳಿಂತು ಬಿಡತಕ್ಕುವಂ ಬಿಟ್ಟವರ್ ತಾಂ ನಡೆಯತಕ್ಕುವಂ ನಿರವಿಸಿ ಕಾಸಲೆ ದೊರೆಕೊಂಡುವಕೇ ತನ್ನ ಸಂತಸದೊಳುಕ್ಕಿ ಯಾನಾಗೋಪಾಲರಾಯಂಗೆ ಬಿನ್ನವಿಸುವರ್.

॥ ರಾಗ—ಮುಖಾರಿ ॥ ಆದಿತಾಳ ॥

ಧನ್ಯನಾದೆನು ನಾನಿಂದು ಧನ್ಯನಾದೆನು ।
ಅನ್ಯವನುಳಿದು (ನಾ) ನಿನ್ನಾಳುತನದಿ ನಿಂದೆನು ॥ ಪಲ್ಲವಿ ॥

ಚ ॥ ನಿನ್ನಡಿಗೆ ಪೊಡೆಮಟ್ಟು । ನಿನ್ನ ದಿವ್ಯನಾಮವಿಟ್ಟು ।
ನಿನ್ನ ಮುದ್ರೆಗಳನಿಟ್ಟು । ನಿನ್ನ ಬಿರುದೆಯುಟ್ಟು ॥ ೧ ॥
ನಿನ್ನಡಿಯೊಲವ ಕಂಡು । ನಿನ್ನೊಳಾಗವ ಕೈಕೊಂಡು ।
ನಿನ್ನ ಪ್ರಸಾದವನುಂಡು । ನಿನ್ನೊಳ್ತ್ಯಾಗವ ಕೊಂಡು ॥ ೨ ॥
ನಿನ್ನ ಮೂರುತಿಯ ನೋಡಿ । ನಿನ್ನ ಮುಂದೆ ನಲಿದಾಡಿ ।
ನಿನ್ನ ದಾಸರೊಡಗೂಡಿ । ನಿನ್ನಗುಣಂಗಳ ಪಾಡಿ ॥ ೩ ॥
ನಿನ್ನ ಕೂರ್ಮೆಗೆಡೆಯಾಗಿ । ನಿನ್ನವರಡಿಗೆ ಬಾಗಿ ।
ನಿನ್ನೊಲವಿದ್ದಂತೆ ಪೋಗಿ । ನಿನ್ನಾಳಿನಾಳಿನಾಳಾಗಿ ॥ ೪ ॥
ಚೆನ್ನಿಗ ಗೋಪಾಲರಾಯ । ಚಿಕ್ಕದೇವೇಂದ್ರವಿಧೇಯ ।
ಸನ್ನುತಮಂಗಳಕಾಯ । ಸಲಹಿದೆಯೆನ್ನನು ಜೀಯ ॥ ೫ ॥ — ೩ —

ವಚನ ॥ ಇಂತು ತಾಂ ಪರಮಪುರುಷನ ಪಾದಾರವಿಂದಂಗಳಂ ನೆಱೆ ನಂಬಿ ಸಲ್ಲಮನುಳಿದು ಸಲ್ಲುವನೆನಿಸಿ ಅವನೊಲವಂ ಪಡೆದು ಆನಂದದೊಳೋಲಾಡುತ್ತೆ ತನ್ನಂತೆ ಸಕಲಜನರುಂ ಸಂತಸಂಬಡೆಗೆಂದು ಮೇಲೆ ಮೂಱುಂ ಪದಂಗಳಂ ಪರೋಪದೇಶಂಗೆಯ್ದರ್. ಅದಱೊಳೀನಾಲ್ಕನೆಯ ತ್ರಿಪದಿಯೊಳೀಯಧಿಕಾರಿಯ ನಡತೆಗಳಂ ತಿಳಿಪಿ ಇಂತು ನಡೆವವರ್ಗೆ ಸಿರಿ

ಯರಸನೊಲವಪ್ಪುದು ತಪ್ಪದೆಂಬುವರ್ಕೆ ತನ್ನೊಲ್ಮೆಗಂ ಒಡನಾಟಕ್ಕಂ ಕೆಳೆಗಂ ಕೇಳಿಗಂ ನೆರವಿಗಂ ನೇಹಕ್ಕಂ ನಲ್ಮೆಗಂ ನಂಬುಗೆಗಂ ನೆಲೆವೀಡೆನಿಸಿ ನೆಗಳ್ತೆವೆತ್ತ ತಿರುಮಲಾರ್ಯರಂ ದೃಷ್ಟಾಂತಂಗೆಯ್ದು ದೃಢೀಕರಿಸಿ ತಮ್ಮ ಯದುಕುಲದೇಳ್ತರವನಾಳ್ಗೊಂಡ ಯಾದವಗಿರಿನಾರಾಯಣನಡಿದಾವರೆಗಳಂ ನಂಬಿ ಬಾಳ್ವೆಂದು ಪೆರ್ಗುಪದೇಶಂಗೆಯ್ವರ್.

॥ ರಾಗ—ಕಾಂಬೋಧಿ ॥ ಅಟ್ಟತಾಳ ॥

ಪಾದವ ನೆರೆನಂಬಿ ಬದುಕಿರೊ । ನಮ್ಮ ಯಾದವನಾರಾಯಣನ ದಿವ್ಯಶ್ರೀ ॥ಪಲ್ಲವಿ॥

ಚ॥ ಹಿಂದಣ ನಡತೆಗೆ ಹೇಸಿರೊ ।
ಮುಂದೆ ನಿಂದೆ ಬಾರದವೊಲು ನೀಸಿರೊ ।
ನೀವಿಂದು ಮೊದಲು ಕುಲಕೇಡಾಗೆಯಪ್ಪಂತೆ ।
ಒಂದೆ ದಿಟವ ಪಿಡಿದುತ್ತಮರೆನಿಸಿರೊ ॥ ೧ ॥
ನಿಮ್ಮ ನೆಲೆಯ ನೀವೆ ತಿಳಿಯಿರೊ ।
ತಿಳಿದೊಮ್ಮೆದ ನಡತೆಯನುಳಿಯಿರೊ ।
ಒಲುಹುಮ್ಮಹೆಮ್ಮೆಗಳನು ಪಡೆಯಿರೊ ।
ಸಜ್ಜನ ಸಮ್ಮತವಪ್ಪಂತೆ ಸನ್ಮಾರ್ಗಪಿಡಿಯಿರೊ ॥ ೨ ॥
ಕರ್ಮದ ಬಲುಗಂಟ ಕಳೆಯಿರೊ ನಿಮ್ಮ ।
ದುರ್ಮತಿಧೂಳಿಯ ತೊಳೆಯಿರೊ ಮಿಗೆ ।
ನಿರ್ಮಲಚಿತ್ತದಿ ನೇಮವಿಡಿದು ನಮ್ಮ ।
ತಿರ್ಮಲಾರ್ಯರಂತೆ ಸ್ಥಿರವಾಗಿ ಬಾಳಿರೊ ॥ ೩ ॥ — ೪ —

ವಚನ॥ ಈ ಜನನಿಯು ಪಿಕಪದಿಯೊಳ್ ಯುವತಿಕಾಳಿಗಳ್ಗೆ ನಗುವೆನಕಂಗಳೊಳಾವಶ್ಯಕಂಗಳಾದುವಂ ನಿರೂಪಿಸುವರ್.

॥ ರಾಗ—ಕಾಂಬೋಧಿ ॥ ಆದಿತಾಳ ॥

ಪಾದಂಗಳನೆ ನಂಬಿರೊ ದಿಟವಿಡಿದು। ಪಾದಂಗಳನೆ ನಂಬಿರೊ॥ (ಪಾದಂಗಳನೆ ನಂಬಿರೊ ಪಾದಂಗಳನೆ ನಂಬಿರೊ) ॥ ಹಲವ ಹಂಬಲಿಸದಿರಿರೊ । ಶ್ರೀದೇವಿಯರಸ ನಮ್ಮ ಯಾದವನಾರಾಯಣನ ॥ ಪಲ್ಲವಿ ॥

ಚ॥ ನಮ್ಮ ನಡತೆಗಳಿಂದ ನಾವು ಕಡೆವಾಯ್ವೆವೆಂಬ ।
ಹಮ್ಮ ಹಬ್ಬಿದು ಬಿಸುಡಿರೊ । ಬಲುಗೆಮ್ಮೆಗಳ ।
ನೆಮ್ಮಿನೆಲೆಗೆಡದಿರಿರೊ ಭಾರವಿಬ್ಬುಹ ।
ಸುಮ್ಮನಿರ್ದು ಸೊಗವಡಿಯಿರೊ ಲೋಗರಿರಾ ॥ ೧ ॥ — ೫ —

ವಚನ || ಈ ತೆರನೆಯ ಪಂಚಪದಿಯೊಳಧಿಕಾರಿಗಳ್ಗೆ ಪರಮ ಪುರುಷನನುಗೊಳಿಸುವ ಸಕಲಶ್ರೇಯಸ್ಸುಗಳಂ ನಿರವಿಸುವರ್.

|| ರಾಗ—ಟೋಡಿ || ತಾಳ ರೂಪಕ ||

ನಂಬು ನಂಬು ನಂಬು ನೆರೆ ನಂಬು । ನಂಬು ಶ್ರೀಕೃಷ್ಣಪದಾಂಬುಜಂಗಳ
ಹಂಬಲಿಸದಿರು ಹಲವನು || ಪಲ್ಲವಿ ||

ಚ|| ಕರಣದೋಷಂಗಳ ಕಳೆವನು । ಕಲ್ಮಷವನೆಲ್ಲ ತೊಳೆವನು ।
ಹಿರಿಯರ ಸಂಗತಿಗೆಳೆವನು । ಪೆತ್ತೆನೆಂದೆಂಬುಗೆದಳೆವನು || ೧ ||

ಚಿಂತಣ ತಪ್ಪ ಮಡಿವನು । ಜೋಡಿದುದನೆಲ್ಲ ಕಡಿವನು ।
ಅಂತರಂಗದೊಳು ಮಿಡಿವನು । ಆನಂದರಸವನೆರೆವನು || ೨ ||

ಕರ್ಮದ ಬೇರ ಕಡಿವನು । ಕಾಲನ ಬಾಯ ಬಡಿವನು ।
ನಿರ್ಮಲಮತಿಯ ಕೊಡುವನು । ನೆನವಿಲ್ಲದಕ್ಕರುವಡುವನು || ೩ ||

ಪುರುಳುಗೊಳಿಸಿ ಪೊರೆವನು । ಪೊಸಪೊಸಬೇಟದಿ ಬೆರೆವನು ।
ಎರೆಹೊರೆಯಿಲ್ಲದಿರುವನು । ಎಚ್ಚೆದ ದಾರಿಗೆ ಬರುವನು || ೪ ||

ಚಿಕದೇವರಾಯನ ದೇವನು । ಸೇವಕಜನರ ಜೀವನು ।
ಸಕಲವಿಧದೊಳು ಕಾವನು । ಸರ್ವಾಭೀಷ್ಟವನೀವನು || ೫ || — ೬ —

ವಚನ || ಈ ಯೋಜನೆಯ ತ್ರಿಪದಿಯೊಳ್ ತಮಗಂ ತಮ್ಮ ಕೇಳೆಯರ್ಗಂ ಸರ್ವಾಭೀಷ್ಟಮಂ ಸಾಧಿಸುವುವೆಂದು ನಿಶ್ಚಯಿಸಿ ಸಾಯುಜ್ಯವಾಗಿರ್ಪ ಶ್ರೀಕೃಷ್ಣನಡಿದಾವರೆಗಳಂ ಕೊಂಡಾಡುತ್ತ ಸ್ತುತಿಸುವರ್.

|| ರಾಗ—ಯದುಕುಲಕಾಂಬೋಧಿ || ಝಂಪೆತಾಳ ||

ಪಾದಪೆಟ್ಟಿಗೆಕೆ । ಪಾದಪೆಟ್ಟಿಗೆಕೆ ( ಪಾದಪೆಟ್ಟಿಗೆಕೆ )। ಶ್ರೀಪಾದಾವಧಾನ
ಗೋಪಾಲ ಚಿಕದೇವ ಚಿಕದೇವಭೂಪಾಲಪರಿಪಾಲ || ಪಲ್ಲವಿ ||

ಚ|| ಸಿರಿರಾಣಿಯೊಲವಿಂದ ಸೇರಿಯೊತ್ತುವ ಪಾದ ।
ಪುರುಳೆನಿಸಿ ವೇದದೊಳು ಪೊಳೆವ ಪಾದ ।
ಸರಸಿಜಧ್ವಜಶಂಖಚಕ್ರಲಾಂಛಿತಪಾದ ।
ಪರಮಯೋಗೀಶ್ವರರು ಭಾವಿಸುವ ಪಾದ || ೧ ||

ಅವನಿಯಾಕಾಶಗಳನಳೆದು ಮೆರೆದ ಪಾದ ।
ದಿವಿಜನದಿಯನು ಪಡೆದ ದಿವ್ಯಪಾದ ।
ಶಿವನ ಪಾವನಗೆಯ್ದು ಶಿವನೆನಿಸಿದಾಪಾದ ।
ಕಣ್ದಿದು ಕಲ್ಲಿಗೆ ಜೀವಕಳೆಯಿತ್ತ ಪಾದ || ೨ ||

ಪರಿದು ಕುರುದೂತ್ಯದೊಳು ಬಣ್ಣವೇರಿದ ಪಾದ ।
ಸರಿಪರಿಯ ಭಯವ ಪರಿಹರಿಪ ಪಾದ ।
ತಿರುಮಲಾರ್ಯರಿಗೆ ಕುಲದೇವರೆನಿಸಿದ ಪಾದ ।
ನರಪತಿಗೆ ತರತರದಿ ನಲವೀವ ಪಾದ ॥ ೭ ॥ — ೬ —

ನಂಬುಗೆಯ ಸಪ್ತಪದಿ ಸಂಪೂರ್ಣಂ.

— ಸಪ್ತಪದಿ — III —

ವನಜಾಕ್ಷಂ ಕಣೆಯಾದವಂ ತ್ರಿಪುರ ಬಿಲ್ಲಾಳಾದವಂ ಪಂಕಜಾ
ಸನನುಂ ಸಾರಥಿಯಾದವಂ ತ್ರಿಪುರಮಂ ದಾಟಿಟ್ಟರಾಮಾವರೊಂ
ಪೆಸಿಸಿವೀರ್ನಾಷೆಕನೇವನೊರ್ವನಪಟಂಪಂ ತೂಳ್ದಪಂ ಚೆನ್ನರಾ
ಯನ ಮಾರ್ಗಂ ಮಿತಿಗೇಳಿ ಮದ್ದುಗಿರಿಯೊಂಜೀಮುಕ್ತ್ರೋಜಲ್ಬಿಂಕಮಂ ॥
ಪರಿವಿಪನೊಲ್ದು ಮದ್ದುಗಿರಿದುರ್ಗದ ಕೋಂಟೆ ಸುರಂಗದಿಂದವನಾ ।
ಪುರವನರತ್ನ ಲಿತ್ತ ಬಡರುತ್ತಿರೆ ವಿನಾಳ್ ಸವಿನಾರಪತ್ರ್ಯದೊಳ್
ಧರೆಯನರಂದಿಸಿಂದವರನೀ ಗಗನೇಚರರಂಬರಕ್ಕೆ ಪೋಗ್ ।
ಪರಿಸರಿಸಂತುಟಿಸ್ಪ್ರತಿಸು ಕೇಳ್ ದಿನದಲ್ಲಿಯೊಂದುಂಕೆಯಿಲ್ಲನೇ

ವಚನ॥ ಪೂರ್ವಸಪ್ತಪದಿಯೊಳ್ ಶ್ರೀಮನ್ನಾರಾಯಣನ ಚರಣಂಗಳ ಸೌಂಕೆಸ್ಸೊಸಾಯಸೊಂಬುದಂ ಪ್ರಕಾಶನಾಗಿ ಪೇಳ್ದರ್. ಈ ಮೂರ ನೆಯ ಸಪ್ತಪದಿಯೊಳ್ ಯಥಾರ್ಥಮನಿಬರ್ಗಂ ಮನಂಗೊಳ್ವಂತೆ ಕಾಮುಕ ವ್ಯಾಪಾರಮಂ ನೆಪಂಗೆಯ್ದು ಅನ್ಯಾಪದೇಶದಿಂ ವ್ಯಕ್ತೀಕರಿಸುವರ್. ಅದೆಂತೊ ಳೊಡೆ ನಾಲ್ಕು ಪದಿಯೊಳ್ ಶ್ರೀಕೃಷ್ಣನ ರೂಪಾತಿಶಯಮುಕ್ತಂ ಕಲ್ಯಾಣ ಗುಣಂಗಳುಂ ಮನಂ ಸೋಲ್ವನಂ ಬಯಸಿದ ತನ್ಮ ಕಣ್ಗಳ ನೆಲೆಗಾಣ ರಂಗದೊಳ್ ಸಂತಸಂದಳೆದು ಬಹಿರಂಗದೊಳ್ ತಾಮದಕೊರ್ಡಂಬಡನಂತಿ ರ್ಪ ಅನಳ ಪ್ರೇಮಮುಂ ಸೆರ್ಚಿಸಿಯುಮನೊಲವಂ ಪಡೆದ ನಡತೆಗಳಂ ತಿಳಿ ಪುದ ವೃದ್ಧಗೋಪಿಯರ ನುಡಿಗಳಂ ನೆವಂಗೆಯ್ದು ಅನ್ಯಾಪದೇಶದಿಂದಿವರುಂ. ಶ್ರೀಮನ್ನಾರಾಯಣನ ಗುಣಾತಿಶಯಮುಮಂ ಕೇಳ್ದು ತಿಳಿದು ವೈಷ್ಣವರೆನಿಸಿ ಬಾಳಿಳಿಸಿದ ಲೋಗರ ನೆಲೆಗಾಣಂಬಡೆದಿವರ್ಗೆ ವೈಷ್ಣವಾಚಾರಮಂ ಪದೇಶಿಸೆನೆಂದು ಪೂರ್ಣ್ದು ಶ್ರೋತ್ರಗಳ್ಗೆ ಪುನ್ನಸ್ಥವೃತ್ತಿಯನನುಭವಿಸುತ್ತಿಂತು

ಸಜೆವವರ್ಗೆ ಸ್ವಾಮಿಯೊಲವಪ್ಪುದಾದೊಡಂ ಈ ನಡತೆಯುರಿದುವರ್ಗಂ ಪುಸ ಪುಂ ಬಳ್ಪಿಡಿದು ತನ್ನಡಿ ಸಜೆಯುವೇಜ್ಬುದೆಂದು ಪೇೞ್ದರ್.

॥ ರಾಗ—ಕಾಂಬೋಧಿ ॥ ಆದಿತಾಳ ॥

ಇಂದಿರೇಶನೊಡನಾಟನೆಮ್ಮ ಹವಣೆ। ಎನ್ನ ಕಂದ ಕೇಳವನನೇಸ್ತ (?) ಕಡು
ಗಧಾರೆಯು ನಟಣ ॥ ಪಲ್ಲವಿ ॥

ಚ ॥ ತನುವಿಗೆ ಹಿತವೆನಿಪ ತವಕಿಗರೊಡನಾಡದೆ ।
ಮನವಾರತೆಯೊಳು ನಿಗೆ ಮನವ ನಿಲ್ಲಿಸದೆ ।
ಜನನಿಜನಕಾದಿಯಾದ ಜನ್ಮಬಂಧುತೆಯು ತೊಜೆದು ।
ಅನಿತರಭಕ್ತಿಯೊಳಿರೆ ಅಂದಿಗೊಲಿವನು ಗಡ ॥ ೧ ॥

ಎನಗುವೆನೆಲ್ಲವನೆಂದು ಹೆಕ್ಕಳದೊಳೆನಗದೆ ।
ಎನಗಲಾಜನೆಂದು ನಿಗೆ ಹಿಂದೆ ಸಾರದೆ ।
ಎನಗುವ ಸೇವೆಯುನೆಸಗುವೆನಕಪಿದೆನ್ನದಲ್ಲೆಂದು ।
ಹನಗೆಡದಂತೆಪ್ಪೊಲಿರೆ ಅಂದಿಗೊಲಿವನು ಗಡ ॥ ೨ ॥

ಪರಿಪರಿ ಲೋಗರಪ್ಪೊಲು ಪಲಭೋಗವ ಬಯಸದೆ ।
ತರವಳಿಯು ತನ್ನ ಸ್ವಾತಂತ್ರ್ಯವನೆಣಿಸದೆ ।
ತಿರುಮಲೆಯಾರ್ಯಾದಿ ದಿವ್ಯದೇಶಿಕರಾಣತಿವಿಡಿದು ।
ಅರಮುಸಿದಿಲ್ಲದಂತಿರೆ ಅಂದಿಗೊಲಿವನು ಗಡ ॥ ೩ ॥ — ೧ —

ವಚನ . ಈ ಎರಡನೆಯ ತ್ರಿಸದಿಯೊಳ್ ಸಕಲಚೇತನರಂ ರಕ್ಷಿಪೆ ನೆಂದಿರ್ಪ ಶ್ರೀಮನ್ನಾರಾಯಣನಿವರ ನಡತೆಯೊಳ್ ಸುಕೃತನೆಂದು ಪೆಸರಿಪ ಲಕ್ಕನೆಂದು ಯಾವ್ಯಕ್ತಿ ಕಪ್ರಾಸಂಗಿಕವಾದ ನಡತೆಯುಂ ನೆವಂಗೆಯ್ದು ಇವರ್ಗೆ ತನ್ನೊಳ್ ಪೊಷಾಭಿಮುಖ್ಯಮುಂ ಬಳಯಿಸಿ ಮುಕ್ತಿಪರ್ಯಂತವಾಗಿ ನಯೆಗೆಯ್ವನೆಂಬರ್ಥಮುಂ ತನ್ನ ಪೆಣ್ಗಳಂ ಮರುಳ್ಗೊಳಿಸಿ ವಕ್ಕುಗೊಂಡ ಶ್ರೀಕೃಷ್ಣನಂ ಪೂಜಿಪ ವೃದ್ಧಗೋಪಿಯರ ವಚನವ್ಯಾಜದಿಂ ವಿವರಿಸುವರ್.

॥ ರಾಗ—ಭೈರವಿ ॥ ತಾಳ ಝಂಪೆ ॥

ಮಾಯಕಾಜಿಗೆ ಮಗಳು ಮಾಜುವೋದಳಕಟ ।
ಬಾಯಿ ಮಾತಿಗೆ ನುಡಿದುಬಂದಿಗೆಯ್ಯದೆ ಬಿಡನು ॥ ಪಲ್ಲವಿ ॥

ಚ ॥ ನೆನೆದೊಡನೆ ಮನದೊಳಗೆ ನೆಲಸಿ ಮುನ್ನಿನ ಕೆಲಪ್ರ ।
ನೆನಹುಗಳನೆಲ್ಲವನು ನೀಕರಿಸುತ ।
ದಿನದಿನಕೆ ತನ್ನಡಿಯು ಸೇವೆಯೊಳು ತವಕವನು ।
ಕೊನರುಗೊಳಿಸುತ ಕೊಂದುಕೂಗಿಸದೆ ಬಿಡನು ॥ ೧ ॥

ಪಱಿಯುರೊಡನಾಡಿಸುತ ಪಲವಗೆಯ ಬೋಧನೆಯ ।
ಬಳೆಯಿಸುತ ಪದವಱಿತು ಬಸಗೆಯ್ಯುತ ।
ಬಱಿಕ ವಿರಹಾಗ್ನಿಯನು ಪರ್ಬಿಸುತ ಮನದಳವ ।
ಪಿಱಿಪಿಱಿದು ವೇಗದೊಳು ಹಿಪ್ಪೆಗೆಯ್ಯದೆ ಬಿಡನು ॥ ೨ ॥

ಪರಿಪರಿಯ ಭವಸುಖವ ಬಯಲೆನಿಸಿ ಸ್ವಾತಂತ್ರ್ಯ ।
ದಿರವ ತೊಲಗಿಸಿ ತನ್ನೊಳೇಕವೆನಿಸಿ ।
ತಿರುಮಲಾರ್ಯಾದಿ ವರದೇಶಿಕರ ಮತದಿ ಪರಿ ।
ಚರಣದೊಳು ತಣ್ಣನೇ ತಣಿಯಿಸದೆ ಬಿಡನು ॥ ೩ ॥ — ೩ —

ವಚನ॥ ಈ ಮೂಱನೆಯ ದ್ವಿಪದಿಯೊಳ್ ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಂಗಳ್ ಮೊದಲಾದ ಮೋಕ್ಷೋಪಾಯಂಗಳನಾಚರಿಸುವರ್ ತಮ್ಮಂತೆ ತಿಳಿವುಂ ಸಶಕ್ತಿಯುಮಿಲ್ಲದೆ ಬಱದೆ ಪ್ರಪನ್ನರಪ್ಪವರ್ಗೆ ಸಕಲ ಸಾಂಸಾರಿಕದುಃಖನಿವೃತ್ತಿರೂಪವಾದ ಮೋಕ್ಷಾನಂದಂ ಬರ್ಪ ತೆಱನಾವುದೆಂದಾಕ್ಷೇಪಿಸಿ ಪ್ರಪನ್ನರ್ಗೆ ಮೋಕ್ಷೋಪಾಯವಾದ ಶ್ರೀಮನ್ನಾರಾಯಣನೇ ತನ್ನ ಜ್ಞಾನಶಕ್ತ್ಯಾದಿಗುಣಂಗಳಿಂದಾ ಪ್ರಪನ್ನರ್ಗೆ ಸಕಲಸಾಂಸಾರಿಕ ದುಃಖಂಗಳಂ ಕಳೆದು ಮೋಕ್ಷಾನಂದಮನನುಗೊಳಿಸುವನೆಂಬ ಪರಿಹಾರಮಂ ತಾತನ್ನ ಗುಣಂಗಳಿಂ ಜೊಱೆತು ಮಾಱಿ ನುಡಿವ ಸವತಿಯರಂ ಕುಱಿತು ಶ್ರೀಕೃಷ್ಣನಂ ನೆರೆನಂಬಿಯುವನೆಲನಂ ಪಡೆದ ಗೋಪಿಯೊರ್ವಳ್ ನುಡಿವ ನುಡಿಯಂ ನೆಪಂಗೆಯ್ದು ವ್ಯಕ್ತೀಕರಿಸುವರ್.

॥ ರಾಗ—ಕಾಂಬೋಧಿ ॥ ಅಷ್ಟತಾಳ ॥

ಎನ್ನ ದೋಷಂಗಳನೆಣಿಸಿ ನೋಯುದಿರಿ ನೀವೆನ್ನಾಳ್ದ ಚಿಕದೇವೇಂದ್ರ ಗೋಪಾಲಕನುನ್ನತಿಯುಸು ನೆನೆದೆನ್ನೇಳ್ಗೆಗೊಡಬಡಿ ॥ ಪಲ್ಲವಿ ॥

ಚ॥ ಗುಣವಿರೆ ಕೂರ್ಪರು ಕೂರ್ತೆಡೆಯೊಳು ಮಿಗೆ ಗುಣಗಣಗಳನನುಗೊಳಿಪರು ಮಿರರೆ । ಗುಣಕೆ ಕೂರ್ತನು ನಿಮ್ಮ ಕೂರ್ಮೆಯಿಂದೆನ್ನೊಳು ಗುಣವನೆಣಿಪ ನಿಲ್ಲಿ ಕೋಪವೇತಕೆ ನಿಮಗೆ ॥ ೧ ॥

ಗುಣ ಪಿರಿದಾಗೆ ದುರ್ಗುಣವ ಮೆಟ್ಟುವುದವಗುಣ ಪಿರಿದಾಗೆ ಸದ್ಗುಣವ ಮೆಟ್ಟುವುದು । ಗುಣಿಗಳರಸನ ಸದ್ಗುಣಂಗಳೆನ್ನಯ ದುರ್ಗುಣವ ಮೆಟ್ಟಿದು ನಿಲ್ಲಿ ಕೋಪವೇತಕೆ ನಿಮಗೆ ॥ ೨ ॥ — ೩ —

ವಚನ॥ ಈ ನಾಲ್ಕನೆಯ ತ್ರಿಪದಿಯೊಳ್ ಮೂಱನೆಯದ್ವಿಪದಿಯೊಳ್ ಪೇೞ್ದರ್ಥಮುಂ ಮೂಱುಂ ದೃಷ್ಟಾಂತಂಗೆಯ್ದು ತೋಱಿ ವ್ಯಕ್ತೀಕರಿಸುವರ್.

॥ ರಾಗ— ಖಾಪಿ ॥ ಅಟ್ಟತಾಳ ॥

ಅಱುತು ಅಱುಯರೆನ್ನ ಕೃತಂಗಿಯರು। (ಅಱುತು ಅಱುಯರೆನ್ನ ಕೃತಂಗಿಯರು)। ಎನ್ನೆಡೆಯ ಶ್ರೀ ಚಿಕದೇವೇಂದ್ರನೆನ್ನಲ್ಲಿ ಕುಱಿಪುಗೊಳುವೊಡೊಂದು ಗುಣಮಿಲ್ಲದಿರ್ದೊಡೆ। ಎಣಿಕದೊಳಿರೆ ನೋಡಿದಿನಾಪರಿ ಮಱುಗುವ ॥ಪಲ್ಲವಿ॥

(ವಚನ ॥ ಈ ಪಲ್ಲವಿಯೊಳ್ ಚಿಕದೇವೇಂದ್ರ ಎಂಬುದಱೊಳ್ ಚಿಕದೇವನೆಂದು ವಿನಯದಿಂ ತಮ್ಮಂ ಪೆಸಗೊಂಡು ಇಂದ್ರನೆಂಬುದಱಿಂ ತಮಗಾಳ್ವನಪ್ಪ ಶ್ರೀಕೃಷ್ಣನಂ ಪೇಳ್ವರ್.)

ಚ॥ ಸೊಬಗಿಂಪು ಸುಗುಣಂಪು ಸೊಗಸುಗಾತಿಯು ಪೇ। ಣಿವಳಿಗೇತಕೆ ಹೆಮ್ಮೆಯಿಂದಱಿಲುವರು। ಕುಬುಜೆಗೊಲಿದು ಮೆಯ್ಯ ಕೊಂಕುಗಳನು ತಿದ್ದಿ। ಸೊಬಗಿಯೆನಿಸಿಯಾಳ್ದ ಸುಗುಣಗೋವಳನಂತೆಂದು ॥೧॥

ಸರಸಿಯು ಚದುರೆಯು ಚೆಲ್ಲಗಾತಿಯು ಈ। ವರಿಯೋಲ್ಗಯೇಕೆಂದು ಒಣ್ಣಗುಂದುವರು। ಕರಡಿವೆಣ್ಣನು ಪಟ್ಟದರಸಿಯರೊಳು ಸರಿ। ವೆರಸಿಯಾಳಿದ ಸಿರಿಯರಸಗೋವಳನಂತೆಂದು ॥೨॥

ತಲೆನೆಲೆಯುಱು ತೊಡಗವನೆಸಗುವರಿವಳಾ। ಯುಲಸಿಂತೇತಕೆಂದಳಪ್ಪುಗುಂದುವರು। ಪೊಲಬುಗೆಟ್ಟ ಗೋಪಾಲನೆಯರಿಗೆ ಬಾಗ್ಯ। ಗಲಿಸಿಯಾಳಿದ ಪೆಂಪುಗಾಱ ಗೋವಳನಂತೆಂದು ॥೩॥ — ೩ —

ವಚನ ॥ ಉಪಾಯಾಂತರದಿಂ ಪ್ರತಿಸಿರ್ಪ ಪ್ರಸನ್ನರಂ ನಿಂದಿಸಿದೊಡಂ ಅವರ್ಗೆ ಕಮನಪಾಯಗುಣಂಗಳ್ ಉಂಟಾಗಿರ್ಪುದಱಿಂ ನಿಂದಕರೊಳ್ ಕೋಪಂ ಪುಟ್ಟದು : ಮತ್ತಂ "ಎಮ್ಮೊಳ್ ನಾನುಂ ದೋಷಮುಪುರ್ದಱಿಂ ಪೈಸೆ ನಿಂದಿಪರ್. ಅದಱಿಂದಾದೋಷಮಂ ಪರಿಹರಿಪುದು" ಎಂದು ಸ್ವಾಮಿಗೆ ಬಿನ್ನವಿಸುವರ್. ಈಯರ್ಥಮನಿವರುಂ ಈಪದನೆಯ ತ್ರಿಪದಿಯೊಳ್ ತಿಳಿಪುವರ್.

॥ ರಾಗ—ಮುಖಾರಿ ॥ ಅಟ್ಟತಾಳ ॥

ನಿಂದೆಗೆಯ್ವರು ಮಿಗೆ ನಿಂದಿಸುತಿರಲಿ ॥ ಪಲ್ಲವಿ ॥

ಚ॥ ನಿಂದೆಗೆಯ್ವರು ಮಿಗೆ ನಿಂದಿಸಲಿಮಗದ। ಱೆಂದ ಕೊಱತೆಯಾವುದದಕೆ ಬಿನ್ನವಿಸೆನು। ನಂದಕಾಯುಧ ನಿನ್ನ ಸಲ್ಲಡಿಗಮರಿಸಿ। ದಂದುಗಂಬೊಳು ಕಡೆಯೊಂದಿರೆ ಚಿತ್ತಕೆ। ಬಂದ ಪರಿಯೊಳದ ಬಣ್ಣಗೆಯ್ವುದು ಲೇಸು ॥೧॥

ಪೊಲ್ಲದ ನುಡಿಗಳ ಸೊಲ್ಲಿಸುತಿರಲಿ ॥ ಪಲ್ಲವಿ ॥

ಚ॥ ಪೊಲ್ಲದ ನುಡಿಗಳ ಸೊಲ್ಲಿಸುತಿರ್ದೊಡೆ। ಮಿಲ್ಲಿಸಮಗೆ ಹೀನವದಕೆ ಬಿನ್ನವಿ

ನೆಸು । ಒಲ್ಲರ ಬಲ್ಲಹ ಪಾವನವಹ ನಿನ್ನ । ಮೆಲ್ಲಡಿದಳದೊಳು ಮಿನುಗುವ ರೇಖೆ । ಗಳಲ್ಲಿ ಧೂಳಿರೆ ತೊಡೆದನುಗೊಳ್ವುದು ಲೇಸು ॥ ೨ ॥

ಬೈದೊಡೆ ಬೈದರ ಬಾಯಿ ನೊಂದಪುದು ॥ ಪಲ್ಲವಿ ॥

ಚ ॥ ಬೈದೊಡೆ ಬೈದರ ಬಾಯಿ ನೊಂದಪುದೆಮ । ಗಾದ ಕೊಱತೆಯಾವುದದಕೆ ಚಿನ್ನವಿನೆನು , ಯಾದವನಾರಾಯಣ ನಿನ್ನ ( ದಿವ್ಯ ) ಶ್ರೀ । ಪಾದ ಸೋಂಕಿದ ರನ್ನವಾವುಗೆ ಮಾಸಿರೆ । ಆದರದಿಂದದನನುಗೊಳ್ವುದು ಲೇಸು ॥ ೩ ॥

ವಚನ ॥ ಕೀರ್ತನೆಯ ತ್ರಿಪದಿಯೊಳ್ ಜ್ಞಾನಿಗಳ್ಗೆ ಭಯಂ ಪುಟ್ಟುವುದರ್ಕಂ ಪುಟ್ಟಿವ ಭಯಂ ಪರಿಹಾರಮಪ್ಪುವರ್ಕಂ ಕಾರಣಂಗಳಂ ಪಿರವಿಸುವರ್.

॥ ರಾಗ—ಕಾಂಬೋಧಿ ॥ ತಾಳ ತ್ರಿಪುಡೆ ॥

ತನ್ನ ನೆನೆವುದು ಜೀವ ತಲ್ಲಣಿಪುದು । ಕೂಡೆ ನಿನ್ನ ನೆನೆವುದೊಯ್ಯನೆ ನೆಲೆಗೆ ನಿಲ್ಲುವುದು ॥ ಪಲ್ಲವಿ ॥

ಚ ॥ ಪುದಿದ ಕೋಪಲು ಕಂಡ ಗುದುಕೆಲಸರಗಳಂ ।
ದೊದಪಿದೊಡಲ ನೆನೆದೊಱಲುವುದು ।
ಹೃದಯಮಧ್ಯದಿ ನಿಂತು ಹಿತವನೆಸಗುವ ನಿನ್ನ ।
ನೆರ್ದೆಗೊಳಿಸುತೊಯ್ಯನೆ ಹೆಕ್ಕಳಿಸುವುದು ॥ ೧ ॥

ಉಲಿಸೊಂಕುಸಿರೂರ್ಪೊಳುಗಂಪಗೆಱಗುವ ।
ಪಲವು ಕರಣಗಳಳಿಗಲಸುವುದು ।
ಸಲುವ ವಿಷಯ ನಿನ್ನ ಚರಣಕರ್ಪಿತವೆಂಬ ।
ನೆಲೆಯ ತಿಳಿದೊಡನೆ ನಲವೇಱುವುದು ॥ ೨ ॥

ಮರಳಿ ಮರಳಿ ತಾನು ಮಾಡುವ ಪಾಪಂಗಳ ।
ಬಱಬ ನೆನೆದು ಮಿಗೆ ಬಿದಱುವುದು ।
ನರಪತಿ ಯದುಕುಲನಾಥ ತೇರೇಱು ನೀ ।
ನೊಚಿದೊಂದು ನುಡಿಯಮಿತುರ್ಜಿ ಕೊಬರ್ವುದು ॥ ೩ ॥ — ೬ —

ವಚನ । ಇಂತು ಬಿನ್ನಪಮನೊರ್ಪರ್ ತಮ್ಮ ಮನೋರಥಂಗಳ್ ಸಿದ್ಧಿಯೋಜನೆಯ ತ್ರಿಪದಿಯೊಳ್ ಪಿರವಿಸುವರ್.

॥ ರಾಗ—ಕಾಂಬೋಧಿ ॥ ಅಟ್ಟತಾಳ ॥

ಜಿಸಿರಿಯೆನಗೆಂದಿಗಪ್ಪುದೊ । ನಿನ್ನ ದಾಸಾನುದಾಸರ ದಾಸನೆನಿಪುದೊಂದೈ ॥ ॥ ಪಲ್ಲವಿ ॥

ಚ॥ ನಿನ್ನ ಪ್ರೇಮೆಗೇಳುತ ನಿನ್ನನೇ ಪೊಗಳುತ ।
ನಿನ್ನನೆನ್ನೆದೆಯೊಳು ನೆಲೆಗೆಯ್ಯುತ ।
ನಿನ್ನ ಕಣ್ಗೊಳಿಸುತ ನಿನ್ನನೇ ಪೂಜುತ ।
ನಿನ್ನಡಿಗಳನೆನ್ನ ಮುಡಿಯೊಳಾನಪ್ಪೆ ॥ ೧

ಒಮ್ಮೆ ಪೀಳೆಯುವೀಯುತ್ತೊಮ್ಮೆ ಪನ್ನೀರ್ಗರೆದು ।
ತೊಮ್ಮೆ ನಲ್ಮಡಿಗವನೊದವಿಸುತ ।
ಒಮ್ಮೆ ಚಾಮರವೀಸುತ್ತೊಮ್ಮೆ ಪಾತ್ರೆಗೆಯ್ದು ।
ತೊಮ್ಮೆ ಬಿರುದುಗಳನುಗ್ಗಡಿಸುತ ನಡೆಪ್ಪೆ ॥ ೨

ಎನ್ನೊಳಕದ ಕೆಲಿಯೊಂದರಿಹೊರೆಯಿಲ್ಲ ।
ದೆನ್ನ ನಿನಗೆ ಕಾಣ್ಕೆಯಿತ್ತು ನೊರ್ದ ।
ಎನ್ನಾಳ್ದ ಚಕ್ರದೇವೇಂದ್ರವಲ್ಲಭ ಕೃಷ್ಣ ।
ಯೆನ್ನ ಭಾರವನೆಲ್ಲವಿರಿಸಿ ನೊಗದೊಳಿರುವೆ ॥ ೩ — ೭ —

ಅನ್ಯಾಪದೇಶಪ್ರಾಯ ಸಂಪೂರ್ಣಂ.

-- ಸಪ್ತದಿ -- [illegible].

ಮುನ್ನಾದೇವೇಂದ್ರನಿನ್ನಂದುಪದ ನಲವಿಂ ಪೆಟ್ಟಗಾ ಬಿಂಜಮೊಂದೇ ಗನ್ನಂ ಗೊಂಡಾಕ್ಷಿಪಿಸುತ್ತಿಹನೊರ ನುತಂಗಾಗ್ಯನಾಸ್ಪೃಶ್ಯದೊಳ್ ಗಾ ॥ ಥನ್ನೇಪಂಚತ್ತ್ವ ಬಿಟ್ಟುವಡರ್ ಬಿದಿಗಳೊಳ್ ಬಾಸ್ಪುರಂತಾಗ ಕೃಪಾ ಳ್ಪನ್ನಂ ನುಗಾಗ ದೇವ್ಪುರ್ ನುದರ್ ಪುದಾನುಗದಾಸೊಳ್ಗೆತ್ತರ್ ॥

ಚೆಲುವರ್ ನುತಂಗಾದ ನಲಗೊಂಡಿಯುಂದದಾತಿಗಳ್ ಬಿಪಂ ಗಜರ್ತ ಕೊಳ್ತುಗೊಂಡೆಗಮುಗದ್ರನ ಬಿತುಗೆತ್ತು .......... ..........ನೆಗಳ್ಲ್ಲುದಿರುಮಂತಪರಂ ಯುವುದಾತರಂದು ತಾಂ ಬಿಚರ್ವರಾದರ್ ಮೊದ್ದಗುರುಲೊಳ್ ಹುಗೆ ದಿಲ್ಲಗುಂದಿಗಾಳ ಕೇಳ್

ವಚನ ॥ ಹಿಂದಣ ಮೂರುಂ ನಪ್ತಪದಿಯೊಳ್ ಪ್ರಪತ್ತಿಯೇ ಮೋಕ್ಷೋಪಾಯವೆಂದು ಪೇಳ್ದರ್. ಈನಾಲ್ಕನೆಯ ನಪ್ತಪದಿಯೊಳ್ ಶ್ರೀಮನ್ನಾರಾಯಣನುಪಾಯಾಂತರನಿಷ್ಟಗೆ ದುರ್ಲಭನಾದೊಡಂ ಪ್ರಪನ್ನಗೆ

ಠ

ಸುಲಭನೆಂಬುದಂ ಪೇಳ್ದು ದೃಢೀಕರಿಸುವರ್. ಅದಱಿಂಮೇಲೊಂದಱ ಪಂಚಪದಿಯೊಳ್ ಸ್ವಾಮಿಯ ಸ್ವರೂಪರೂಪಗುಣವಿಭವಾದಿಗಳನಿತುಮಂ ಭಾವಿಸಿ ತಿಳಿವ ಉಪಾಯಾಂತರನಿಷ್ಠೆಯರಿದಾದೊಡಮವನಾಳ್ದನುಂ ತಾನಾಳುಮೆಂದು ತಿಳಿದು ಪ್ರೀತಿಗೊಂಡಿ ನಂಬಿರ್ಪ ಪ್ರಪತ್ತಿನಿಷ್ಠೆ ಸುಲಭನೆಂಬುದಂ ತಿಳಿಪುವರ್.

|| ರಾಗ—ಯದುಕುಲಕಾಂಬೋಧಿ ‖ ತಾಳ—ಝಂಪೆ ||

ನಿನ್ನ ನೆಲೆಯಱಿಯಲೆನ್ನಳವೆ । ನೀ । ನೆನ್ನನಿಯನೆನ್ನಾಳ್ದನೆಂಬನಿತಲ್ಲದೆ ||ಪಲ್ಲವಿ||

ಚ || ಆಱಿಯರು ಗಡನಂತವೆಂಬವರು ।
ನಿನ್ನನಱಿವರು ಗಡನನಂತನೆಂಬರು ।
ಈಯಱಿತಱಿಯದಿರ್ಪ ಪೊಸತೆಱನ ನೀನೆ ಬಲ್ಲೆ ||೧

ಕಿಱಿಯ ಗಡ ಕಿಱಿಯರೊಳಗೆಲ್ಲ ।
ನೀನು ಪಿರಿಯ ಗಡ ಪಿರಿಯರೊಳಗೆಲ್ಲ ।
ಈ ಕಿಱುಪಿರಿಯತನದೊಂದು ಕೀಲ ನೀನೆ ಬಲ್ಲೆ ||೨

ಇಂತಿರ್ಪನೆನಸಲ್ಲದು ಗಡ ।
ನೀನಿಂತಲ್ಲವೆನಸಲ್ಲದು ಗಡ ।
ಮೇಣೆಂತಪ್ಪುದಿಂತಲ್ಲವೆಂಬುದನು ನೀನೆ ಬಲ್ಲೆ ||೩

ಎಲ್ಲರೊಳಗಿರ್ಪ ಗಡ ನೀನು ।
ನಿನ್ನೊಳೆಲ್ಲ ಜಗಮಿರ್ಪುದು ಗಡೇನು ।
ಇಂತೆಲ್ಲರೊಳು ನೀ ನಿನ್ನೊಳೆಲ್ಲಮಿರ್ದ ನೀ ಬಲ್ಲೆ ||೪

ಸುರರಿಗೆಲ್ಲರಿಗೊಡೆಯನು ಗಡ ।
ನೀ ನರನ ಕೆಯ್ಯಾಳೆನಿಸಿದೆ ಗಡ ।
ಸ್ವಾಮಿ ತಿರುಮಲಾರ್ಯರಿಗೊಲಿದ ದೇವ ನೀನೆ ಬಲ್ಲೆ|| ೫ —೧—

ವಚನ || ಈಮುಂದಣನೆಯ ತ್ರಿಪದಿಯೊಳ್ ಸರ್ವೇಶ್ವರಂ ಕರ್ಮಯೋಗಾದಿನಿಷ್ಠರಂ ಪ್ರೇರಿಪೆಡೆಯೊಳವರವರ ಕರ್ಮಾನುಗುಣವಾಗಿ ನಡೆಸುವೇಱಿಕ್ಕೆಂಬ ನೀತಿಗೊಳಗಾಗದೊಡಂ ಪ್ರಪನ್ನರ ವಿಷಯದೊಳ್ ಕೃಪಾಪರವಶನಾಗಿ ನೀತಿಯುಂ ಮೀಱಿ ಸಲಹುವನೆಂಬುದಂ ನಿರವಿಸುವರ್.

|| ರಾಗ—ಕಾಂಬೋಧಿ || ಅಟ್ಟತಾಳ ||

ನೀತಿಯಾವುದು ನಿನಗೆ । ಭಾವಿಸೆಯಪನೀತಿಯಾವುದು ನಿನಗೆ ||

ನೀತಿಯಾವುದು ಕೃಷ್ಣ ನಿನಗೆ ನಿನ್ನವನೆಂದೋತು ಪಾಲಿಪುದೆನ್ನನುಚಿದ ಮಾತುಗಳೇಕೆ ॥ ಪಲ್ಲವಿ ॥

ಚ॥ ನಡೆಯುತಕ್ಕುದಲ್ಲದ ಮತ್ತೊರ್ವರು ನುಡಿಯುತಕ್ಕುದಲ್ಲದ। ದುಡುಕಿನೊಳೆಸಗುವ ದುರುಳುತನದ ಕಿಡುನಡತೆಗಳೆಲ್ಲವು ನಲವೆನಿಸುತಲಿದೆ ॥ ೧

ಹಿಡಬಲವನಾರಯ್ಯದೆ ಹಿಂದುಮುಂದೆಣಿಸಿ ಹಿಂದಕೆ ಸಾರದೆ । ಬಿಡಲು ಮಿಡಿದು ನೀನುಸಿರ್ದ ಪೂಜ್ಯಮಾತುಗಳೊಡನೆ ವೇದಂಗಳನೊಂದುವೆರಸುತಿದೆ ॥ ೨

ಪುರುಷಪಶುಗಳೆನಿಪ ಗೊಲ್ಲರೊಳೊಡವೆರೆದು ಜಾಱುವ ನಿನ್ನನು। ಪರಮರಕ್ಷಕನೆಂದು ಭಜಿಸಿ ಭಾವಿಸುವರು ತಿರುಮಲೆಯಾರ್ಯಾದಿದೇಶಿಕರೆಂದಪನೆ ॥ ೩

ವಚನ। ಈಮೂರನೆಯ ತ್ರಿಪದಿಯೊಳ್ ಅರ್ಜುನಂಗೆ ಸಾರಥಿಯುಂ ಗೋಪಿಯರ್ಗೆ ವಲ್ಲಭನುಂ ಪಾಂಡವರ್ಗೆ ಮಾತುಲಸುತನಾದುದಂ ನಿದರ್ಶನಂಗೆಯ್ದು ಭಕ್ತಿವಿಷಯದೊಳ್ ಭಕ್ತಪರವಶನಾಗಿ। ಸ್ತ್ರೀಯುಂ। ವಿಪ್ರರ್ ಸಲಪ್ಪುವನೆಂಬುದಂ ಸ್ಪಷ್ಟೀಕರಿಸುವರ್.

॥ ರಾಗ—ಕಾಂಬೋಧಿ ॥ ಝಂಪೆತಾಳ ॥

ಉತ್ತರೆಯ ಸಿಸುವಿಗುಸಿರಿತ್ತ ಪಾವನಲೀಲನೆ । ನಿನ್ನ ಸತ್ಯಬ್ರಹ್ಮಚರ್ಯಪ್ರಭುತನಗಳಂತಿರಲಿ ॥ ಪಲ್ಲವಿ ॥

ಚ॥ ಕಡುಗಕ್ಕೈದುಗಳೊಂದ ಹಿಡಿಯನೆಂದಿರ್ದ ಕೈ ।
ಹಿಡಿದ ಫಲುಗುಣನು ಕೈಗಿಡಲು ಕಂಡು ॥
ಕಡುಗಿ ಭೀಷ್ಮನ ಶಿರವ ಕಡಿವ ತವಕದಿ ಚಕ್ರ ।
ಹಿಡಿದ ಸತ್ಯವ ಲೋಕವೆಲ್ಲರಱಿಯದುದೆ ॥ ೧

ಕೊಳಲೂದಿ ಜಗವ ಮರುಳ್ಗೊಳಿಸಿ ಯಮುನೆಯ ತಡಿಯ ।
ಪುಳಿನವನಪೆಡೆಯ ಪೂಪೊದಱುಗಳಲಿ ।
ಎಳೆಯ ಗೋವಳತಿಯರ ನಳಿತೋಳ ತಕ್ಕೈಸಿಗು ।
ಹಿಱಿಯುದಿಹ ಬ್ರಹ್ಮಚರ್ಯವೆಲ್ಲರಱಿಯದುದೆ ॥ ೨

ದೊರೆತನದ ನೋಡಿಯಲಿ ಕರೆದು ಧರ್ಮಜ ನಿನ್ನ ।
ಭರದಿ ಸಪೆ ಕೌರವನ ಬಱಿಗೆನ್ನಲು ।
ಹಿರದೊಳಾಜ್ಞೆಯ ಧರಿಸಿ ತೆರಳ್ದ ಪಕ್ಷಿತುರಂಗ ।
ದೆಸೆಯ ನಿನ್ನರಸುತನವಾರುಮಱಿಯದುದೆ ॥ ೩ —೩—

ವಚನ || ಈ ನಾಲ್ಕನೆಯ ಸಂಕೀರ್ತನದೊಳ್ ಪ್ರಪನ್ನರ್ ಭಗವತ್ಪರತಂತ್ರರಾಗಿ ಸ್ವಬುದ್ಧಿಯುಂ ಸ್ವಪ್ರಯತ್ನಮುಮಿಲ್ಲದೆ ವಿಕಲಕರಣರಂತೆಯುಂ ಅಚೇತನದಂತೆಯುಮಿರ್ಪುದರಿಂದಿವರಂ ಕಾಪಿಡದಿರ್ದೊಡೆ ತನಗೂನೆಯುಂ ಬರ್ಪುದರಿಂ ತಾನೇ ಕಾಪಿಡುವನೆಂಬುದಂ ನಿರೂಪಿಸುವರ್.

|| ರಾಗ—ಶಂಕರಾಭರಣ || ಅಟ್ಟತಾಳ ||

ತಪ್ಪದಾರದು। ತಿಳಿದು ನೋಡೆ ತಪ್ಪದಾರದು। ತಪ್ಪುನೆಪ್ಪುಗಳ ನಿಶ್ಚಯಿಸದೆಲ್ಲವ।
ನೊಪ್ಪುಗೆಯ್ದೆನ್ನನೊಲಿದು ಪಾಲಿಸು ಕೃಷ್ಣ || ಪಲ್ಲವಿ ||

ಚ || ಅರಿಯ್ದೆ ಮುಗ್ಗರಿಪಂಥನ ತಪ್ಪೋ।
ದಾಟಿಡೋಡುವ ದಂಡಧಾರನ ತಪ್ಪೋ।
ಮೇರೆಯಳಿಯದೆನ್ನ ಮೇಲಣ ತಪ್ಪೋ।
ನಾರಾಯಣ ನಿನ್ನ ಸಟೆಗೆಯ ತಪ್ಪೋ || ೧

ತೊಂಡು ಮೇವ ಪಸುವಿಂಡಿನ ತಪ್ಪೋ।
ಕಂಡು ಕಾಯದ ತುಱುಗಾವನ ತಪ್ಪೋ।
ಗಂಡುಮೀಱುವೆನ್ನ ಗರ್ವ್ವಿಯ ತಪ್ಪೋ।
ಕೊಂಪಾಳುವ ನಿನ್ನ ರೂಪೆಯ ತಪ್ಪೋ || ೨

ಬಾಸಿಯ ಒಳಸುವ ಪಸುಳೆಯ ತಪ್ಪೋ।
ತಾ ಮಂದು ತಡೆಯದ ತಾಯಿಯ ತಪ್ಪೋ।
ಈ ವಿಷಯಕೆ ಮುಗ್ಗುವೆನ್ನದು ತಪ್ಪೋ।
ಆವೇಶಿಗಾಪುಗೆಯ್ಯದ ನಿನ್ನ ತಪ್ಪೋ || ೩

ಗುಱಿಯ ತಾಕದ ಮೊನೆಗೋಲಿನ ತಪ್ಪೋ।
ಕುಱಿತೆಸೆಯದ ಬೀರಗುವರನ ತಪ್ಪೋ।
ಒಱುಗೆಯ್ತೆಗೆಯ್ವೆನ್ನ ಭಾವದ ತಪ್ಪೋ।
ಅಱಿವುದೋಱಿಸದ ನಿನ್ನಾಟದ ತಪ್ಪೋ || ೪

ಓಡಿಗುಂದುವ ನೀಗೆಯುಲಿಹಿನ ತಪ್ಪೋ।
ಬಾಚಿಸುವನ ಕೈಯ್ಯ ಪರ್ವಶಿನ ತಪ್ಪೋ।
ರಾಜಶ್ರೀಚಿಕದೇವರಾಯನಿಗೊಲಿದ ಶ್ರೀ।
ರಾಜಗೋಪಾಲ ನಿರಾಕರಿಸದೆ ಪೇೞು || ೫

—೪—

ವಚನ || ಈಐದನೆಯ ತ್ರಿಪದಿಯೊಳ್ ಜಗದೀಶ್ವರಂ ಲೋಗರ್ಗೆ ದುರ್ಲಭನಾದೊಡಂ ತನ್ನಂ ನಂಬಿದವರ್ಗೆ ಸುಲಭನಾಗಿ ಸಿಲ್ಕಿ ಸರ್ವಾಭೀಷ್ಟಮನೀವನೆಂಬುದಂ ನಿರೂಪಿಸುವರ್.

॥ ರಾಗ—ಶಂಕರಾಭರಣ ॥

ಎಲೆಲೆ ಕಳ್ಳಕಳ್ಳನೆಚ್ಚಱಿರೊ । ಎಚ್ಚಱಗೂಡಿ ಬಳಿಸಂದು ಭರದೊಳು ಬಸ
ಗೆಯ್ಯಿರೊ ॥ ಬಸಕೆ ತಂದು ಪಲವಗೆಯ್ಯುರ್ಘವ ಬರನೋಡಿ ಬದುಕಿರೊ ॥ ಪಲ್ಲವಿ ॥

ಚ ॥ ಪೆತ್ತವರನು ಬಿಟ್ಟು ಪಂಜರ ಸೇರಿದ ಕಳ್ಳ ।
ಮುತ್ತವರಿಗೆ ತನ್ನ ಮಾಯದೋರಿದ ಕಳ್ಳ ।
ಒತ್ತಿ ಪೊಳೆಯನೊಡೆಯುನಿರುಂಡ ಬಲುಗಳ್ಳ ।
ಸುತ್ತುವ ಗಾಳಿಯ ಸೋಂಕ ಕೊಲುವ ಕಳ್ಳ ॥ ೧

ತುಡುಕಿ ಪಾಲ್ಗೆನ್ನೆಯ ತುದುತಿಂದ ಬಲುಗಳ್ಳ ।
ಪಿಡಿದೊರಳಿಗೆ ಕಟ್ಟಿ ಪಿಂಪೇರಿದ ಕಳ್ಳ ।
ಕಡುಗಿ ಕಳುವನಿಟ್ಟು ಕಾಪ್ಗೆ ದನಿದ ಕಳ್ಳ ।
ಒಡನೆಳಸೆಂಡಿರುಳ್ಳುದೆಯ ಕಳ್ಳ ಕಳ್ಳ ॥ ೨

ಇದಿರಿಸೆ ವಿಧಿಸಿವರಿದಪ್ಪುಗಿಡಿಸ ಕಳ್ಳ ।
ಪದಿನಾಲ್ಕು ಲೋಕವ ಬಾಯಿನಾಲುವ ಕಳ್ಳ ।
ಚದುರ ಶ್ರೀ ಜಯದೇವಕವೀಂದ್ರನ ಬಿನ್ನಣ ।
ಪೊದವಿಸ ಪೆರ್ಬರಿಸಿಳಗುಂದೊಡತಿಗೆ ಬನ್ನ ॥ ೩ —೫—

ಪತನ ಭಯದಾಸೆಯು ತ್ರಿಪುಟಂಗಳ್ ಸ್ವಾಮಿಯ ಪದದಿಂದಮೋ
ಕ್ಷಮಂ ಸ್ವಾಮಿಯುಪಾಯಂಗಳನ್ನುಳಿದು ಮೋಕ್ಷಸಾಧನಮೆಂದುಂ.
ಪ್ರಾಣೇಶನ ತಾನೇ ಉಪಾಯಮನ್ನೆಂಬುದಂ ನಿರವಿಸುವರ್.

॥ ರಾಗ—ಮೋಹನ ॥

ನಿನ್ನೊಳಗಣ ನಾನೇಳಸುವೆ । ಸ್ವಾಮಿ ।
ನಿನ್ನಿಂದಲೇ ಇದ ನೆರವೇರಿಸುವೆ ॥ ಪಲ್ಲವಿ ॥

ಚ ॥ ಸಿರಿಯಾಣ್ಮ ಕೇಳ್ ನಿನ್ನ ಸೇವೆಗಲ್ಲದ ನಾದ ।
ಸಿರಿಬಲುಮೆಯ ಕೂರ್ತು ಚಿಂತಿಸೆನು ।
ಬದ । ಭರದಿ ಸಾಧಿಪೆನೆಂದು ಪಲವಾರುಗಳೊಳು ಪರಿ ।
ಪರಿದು ಪಲರ ಬೇಡಿ ಪಡಲಾರೆನು ಕೃಷ್ಣ ॥ ೧

ಪತನವಪ್ಪುದೆಂಬ ಭಯಪರವಶನೊಳು ।
ಖತಿಗೊಂಬ ಸಗ್ಗವ ಕಾಮಿಸೆನು ।
ಗತಿ ನೀನೆಂದೆಣಿಸದ ಕಾಮ್ಯಕರ್ಮದ ವಿ ।
ಪ್ರತಿಪತ್ತಿಯೊಳಾನು ಪಡಲಾರೆನು ಕೃಷ್ಣ ॥ ೨

ಎಱೆಯ ಶ್ರೀಚಿಕದೇವೇಂದ್ರವರದ ನಿನ್ನ ।
ಮಱೆವ ಕೈವಲ್ಯಕೆ ಮನವಿಡೆನು ॥
ಈಸೆಱೆಯನೆಳಸಿ ನಿನ್ನ ಸೇವೆಯುಂಬುದು ಗೆಯ್ವ ।
ಒಱುವಯಾಗದೊಳಾನು ಪಡಲಾರೆನು ಕೃಷ್ಣ ॥ ೩

—೬—

ವಚನ ॥ ಈಯೋಱಿನೆಯ ಪಾಂಚಪದಿಯೊಳ್ ತನ್ನಂ ನಂಬಿದವರಂ ವೈರಾಗ್ಯದೊಳಂ ಕರ್ಮಜ್ಞಾನಭಕ್ತಿಗಳೊಳಂ ಪ್ರಪತ್ತಿಯೊಳಂ ಕೊಱತೆಯುಳ್ಳೊಡಮಾಭಾರಮನವರೊಳ್ ಪೋಱಿಸದೆ ತಾನೇ ಪೊತ್ತು ನಿರ್ವಹಿಸಿ ರಕ್ಷಿಸುವನೆಂಬುದಂ ನಿರವಿಸುವರ್.

॥ ರಾಗ—ಕೇದಾರಗೌಳ ॥

ನಡೆಯದಿರ್ಪವನಲ್ಲ ನಡೆವವನುಮಲ್ಲ । ನಡೆಯುವೆ ನಡೆವ ಒಱನಟನೆಯ ನಗೆನಗೆ ನಲ್ನಡತೆಗಳನಿತ್ತು ನಿನ್ನಾಳೆನಿಪುದೆನ್ನ ॥ ಪಲ್ಲವಿ ॥

ಚ ॥ ಬಿಡೆಯುನಾಣತಿಮೆರಸಿದೂಱಗವಿದೇಂದು ಮನ ।
ವಿಡಿದು ಸತ್ಕರ್ಮಗಳನೊತರಿಸುವೆನೊಮ್ಮೆ ॥
ಒಡಲೊಡವೆ ಪೊನ್ಪೊಡಿ ಮಡದಿಮಕ್ಕಳ ಪೊರೆವ ।
ನಡಗರದೊಳೀವಗೆಯ ನಡಿಸುವೆನೊಮ್ಮೆ ॥ ೧

ಅಱಿಯದಿರ್ಪವನಲ್ಲ ಅಱಿವವನುಮಲ್ಲ । ಅಱಿಯದಱಿತವನೆನಿಸುವಱುಮರುಳಿಗೆನಗೆ ನಲ್ಲಱಿವವನುಗೊಳಿಸಿ ನಿನ್ನಾಳೆನಿಪುದೆನ್ನ ॥ ಪಲ್ಲವಿ ॥

ಚ ॥ ಪೆಱತೆನಿಪ ತತ್ವಗಳ ಚಿತ್ತರವನಾರಯ್ದು ।
ನೆಱೆಯಿರುವ ಜೀವನನು ಚಿಂತಿಸುವೆನೊಮ್ಮೆ ।
ಒಱುಯ ವಿಷಯದ ಸವಿಗೆ ಬಸವಳಿದು ಸೊರ್ಕಿ ಮ ।
ಯ್ಮಱೆತು ಜಱ್ರಸೆ ಜೆಱೆತು ಮತಿಗಿಡುವೆನೊಮ್ಮೆ ॥ ೨

ಆಸೆಯಿಲ್ಲದವನಲ್ಲ ಆಸೆಗನುಮಲ್ಲ । ಆಸೆಯಿಲ್ಲೆಂದು ಪಲವಾಸೆಗೆಯ್ವೆನ್ನ ಬಯಲಾಸೆಯನು ಕಳೆದು ನಿನ್ನಾಳೆನಿಪುದೆನ್ನ ॥ ಪಲ್ಲವಿ ॥

ಚ ॥ ಈಸಕಲವಿಷಯಂಗಳಿರವನೆರ್ದೆಗೊಳಿಸಿ ಬಲು ।
ಪೇಸಿಕೆಯಿದೆಂದೊಡನೆ ಪೆಱದೆಗೆವೆನೊಮ್ಮೆ ॥
ಮೋಸದಿಂದವಱೊಳುಱೆ ಮುಱುಗಿ ಮುಂಗೆಟ್ಟು ಕಡು ।
ಗಾಸಿವಡೆದಳವಳಿದು ಖತಿಗೊಳುವೆನೊಮ್ಮೆ ॥ ೩

ನೇಹವಿಲ್ಲದವನಲ್ಲ ನೇಹಿಗನುಮಲ್ಲ । ನೇಹವಿಲ್ಲದ ಪುಸಿಯ ನೇಹಿಗನಿಗೆನಗೆ ನೆರೆನೇಹವನು ಬಳೆಸಿ ನಿನ್ನಾಳೆನಿಪುದೆನ್ನ ॥ ಪಲ್ಲವಿ ॥

ಚ || ದೇಹಕರಣಗಳ ಬುದ್ಧಿಯನಿತ್ತವನಿಗೆ ದಾ |
ಸೋಹಮೆಂದಕ್ಕಱೊಳು ಸೊರ್ಕುವೆನದೊಮ್ಮೆ |
ಈಹದನನುಱಿದು ನಾನೆನ್ನದೆಂಬೀಕ್ಷೆಜದ |
ಮೋಹದೊಳು ಕಾಲೂಱು ಮೊಗಗೆಡುವೆನೊಮ್ಮೆ || ೪

ನಂಬದಿರ್ಪವನಲ್ಲ ನಂಬುವನುಮಲ್ಲ | ನಂಬದೇ ನಂಬಿದವನೆಂಬ ಡಂಬಕಗೆನಗೆ ನಂಬುಗೆಯನಿತ್ತು ನಿನ್ನಾಳೆನಿಪುದೆನ್ನ || ಪಲ್ಲವಿ ||

ಚ || ನಂಬಿ ಚಿಕದೇವೇಂದ್ರನಾಥಗೋಪಾಲನ ಪ |
ದಾಂಬುಜದ ನಿರ್ಝರದೊಳನುಗೊಳುವೆನೊಮ್ಮೆ |
ಕೊಂಬ ಫಲಮುಂಬೂಟವೆಂಬ ಬಲೆಗಿಲುಕಿನೊಳು |
ಪಂಬಲಿಸಿ ಫಲವನುೞಿ ಬಸವಳಿವೆನೊಮ್ಮೆ || ೫

ನಾಲ್ಕನೆಯ ಸಪ್ತಪದಿ ಸಂಪೂರ್ಣಂ.

— ಸಪ್ತಪದಿ — V. —

ನೇಳ್ದು ಸುರಾಸುರರ್ ಪರಿಭವಮಂ ಕಡೆಯುತ್ತಿರ್ದುದಂತು ಡಕ್ಕೆನೊಳ್
ತರೆ ಕಪಿದಿಪ್ಪು ಸುರ್ಗಸುಗೆಯ್ಯು ಪಣಿಂಕುವ ಸುಂದರಾದ್ರಿಪ್ರೋಲ್ |
ಕಿಡಿಪಿದಿಪೆನ್ನದೆಪ್ಪೆಸೆಯ ಮನ್ನಯರಾಜ್ಯಿ ಸುರಾಸುರಂದೆ ಪೇಳಯೊಳ್ |
ಪರಿತರೆ ಪ್ರೊಯ್ಯು ಪ್ರೊಯ್ಯು ಭರದಿಂ ಬಿಡುಗೆಯ್ಯ ಸಘನ್ನವಿಕ್ರಮಂ ||

ಮುಂಗ ಕೂಡಿಪ್ಪು ಸೆಪಂತರಾಪ್ರವನಸಂಗತ್ತ ಸ್ತ್ರ ಸನ್ಯಾಸಮಂ
ಶೃಂಗರ್ ಭಾಪೆಸ ಪ್ರೊಯ್ಯು ಚಿತ್ರಸಘ ಪಪ್ಪ ಕೇತಕೀಘ್ರಾಣಿಯುಂ |
ಜೀಗಂ ದಾವಜಿಕಾಕಪಾಂಕಸಣಲಿಂ ಕೂಯ್ದಿಲ್ಲ ಪೇಕ್ಕಮು |
ಪ್ವಂಗಂ ಪ್ರೋಕ್ಷಿಸವಾಳ್ದ ಸಪ್ರತಿಮುಪುರಂ ಮೋಹಿಸೀಚಕ್ರಮಂ ||

ವಚನ | ಈ ಐದನೆಯ ಸಪ್ತಪದಿಯೊಳ್ ಪ್ರಸನ್ನರ್ಗೆ ಶ್ರೀಮನ್ನಾರಾಯಣನಲ್ಲದೆ ಕೇತ್ರೊಂದು ಗತಿಯಿಲ್ಲವೆಂಬುದಂ ಸಿರವಿಸುವರ್.

|| ರಾಗ—ಯರಕಲ ಕಾಂಭೋಧಿ || ತಾಳ—ರೂಪಕ ||

ಚೆಲ್ಲವಾಡದಿರೆನ್ನ ಸಲಹೊ ಪಕ್ಷಿತುರಂಗ | ವಲ್ಲಭ ವಾಸುದೇವಾ ||
ಬಲ್ಲರ ಮಾತಿನ ಬರವಸದೊಳು ಬಂದೆ | ಒಲ್ಲೆನೆಂದೊದೆದೊಡಮುಱಿದು ಪೋಪವನಲ್ಲ || ಪಲ್ಲವಿ ||

ಚ॥ ಕಡಲೊಳು ನಡೆವ ಪಡಗಿನ ಕಂಭವ ।
ನಡರಿ ಸೇರಿದ ಪಕ್ಕಿಯಂದದಿಂದಾನು ॥
ಎಡಬಲದೊಳು ಬೇಱೊಂದಿರವುಗಾಣೆನು ನಿ ।
ನ್ನಡಿಗಳ ಸೇರಿದೆನನ್ಯವನಱಿಯೆನು ॥ ೧

ಮೊಳಗುಸಿಡಿಲುಗಳ ಮೋಹರದೊಳು ನೊಂದು ।
ಒಱಲಿ ಬಾನೊಳು ಪರಿಪರಿದು ಮುಗಿಲುಗಳಿಂ ॥
ದಿಱಿವ ಮಿಸಲ ನೀರನೆಳಸುತ ಬಾಯ್ದೆಱೆದು ।
ಪೆಳೆಯ ಚಾದಗೆಗೆ ನಾನೆಣೆಯೆನಿನಿಸರ್ವನು ॥ ೨

ನೀತಿಯಾದೊಡಮಪನೀತಿಯಾದೊಡಮದ ।
ನೀತೆಱನೆಂದು ಬಂದಿದಿರಾಡಲಱಿಯದೆ ॥
ಭೂತಳಾಧಿಪನೆಂತು ಪೊರೆವೊಡಮುಪಸಡಿ ।
ಗೋತು ಸೇರಿದ ಕುಳವೊಕ್ಕಲಂತಿರ್ದೆನು ॥ ೩

ಕಾರಮೊಗರುಹುಱಿಕಪಿಗಳನಿತ್ತ್ರಾಡ ।
ಪೋರಂತೆ ಸಾಱಿದಪುಱೊಳು ಭೇದಪೇಳಿಸದೆ ॥
ಹಾತ್ತೈಸಿ ವೈದ್ಯನ ಹವಣನಾರಯ್ದು ಮ ।
ಹಾರೋಗಿಯಂತಾನು ಹದವಱಿದಿರ್ದೆನು ॥ ೪

ಒಲಿದು ಲಾಲಿಸಿದೊಡಮೊಲ್ಲದಿರ್ದೊಡಮೊಂದೆ ।
ನೆಲೆಯೊಳು ನಲ್ಲನ ನೆರೆನಂಬಿ ಬಾಳುವ ॥
ಕುಲದೊಳು ಪುಟ್ಟಿದ ಕುಮರಿಯಂದದೊಳು ನಿ ।
ನ್ನೊಲವ ಕೂರ್ತಿರುವೆ ನಾನಱಿದುದನಱಿಯೆನು ॥ ೫

ತಡೆಯಲಾಱದ ಕೋಪದಬ್ಬಿಳಿಯಿಂದೊಮ್ಮೆ ।
ಬಡಿದು ನೂಕಿದ ತಾಯ ಒಱಿಯಿಂದ ತೊಲಗದೆ ॥
ಎಡೆಬಿಡದದಱಂತವಳಱಿಕವನೆಳಸುವ ।
ಕಡುಗೂಸಿನಂದದ ಕೈವಿಡಿದಿರ್ದೆನು ॥ ೬

ಪರಿಪರಿ ಫಲಗಳ ಬಗೆಗೊಳಿಸದೆ ನಿನ್ನ ।
ಚರಣವ ಬಯಸುವ ಚದುರರಂತಾನು ॥
ತಿರುಮಲೆಂಬಾರ್ಯರ ದಿವ್ಯಕೃತಿಯನಿದ ।
ನಿರದೆ ಪಾಡುವೆನು ಕೇಳಿತರವನಱಿಯೆನು ॥ ೭

ಉಪಾಯ ಸಪ್ತಪದಿ ಸಂಪೂರ್ಣಂ.

## — ಸಪ್ತಪದಿ — VI. —

ಬಳಸಿಯುಮೆನೆಂದುಗೂಡಿ ಪರಿತಂದ ರಿಪುಕ್ಷಿತಿಪಾಲವರ್ಗಮಂ |
ಘಳಿಲನೆ ಪೊಯ್ದು ನೆಂದೊಡನೆ ಕೀರ್ತಿಯುಮಪ್ರತಿಮಂಗಿದಿರ್ಚಿದಾ ||
ಬಳಯುತರಪ್ಪ ಬಲ್ಪುತುಪದಾಪನನೆಂದುಳಪಾಪನಂ ಕರಂ |
ಮುಜುಗಿಸಿ ಪ್ರೈಮೆಸೆತ್ತ ನೆಸಳೊಪ್ಪುಗುವಿರಾಜಿಕದೇವಭೂವರಂ || ೧೩

ತಪ್ಪದೆ ಧಿಕ್ಕಿಯರಾಪ್ಪ ದೊರೆಯುಂ ಕೆಸಗೊಂಡಪನಸತ್ತಣಿಂದಮೇ |
ತೊಂಪ್ಪಳನೆತ್ತ ಭಾಗನಗರಾಧಿಪನಂ ವಿಜಯಾಪುರೀಶನಂ ||
ಬಾಜಿಣ್ಣನೆಂಟಿನಂ ಪಿಡಿದು ಕೆಯ್ದುಳಿಗೊಂಡುಜಿತ ಪಾಡುಪಂತದಿಂ |
ಬಾಜ್ಪುಸಭೇದ್ಯವಿಕ್ರಮನೆನಿಸಲ್ ನೆಗಳ್ದಂ ಚಿಕದೇವಭೂವರಂ || ೧೪

ಮತ್ತಂ, ಈಯಗಾನವು ಸಪ್ತಪದಿಯೊಳ್ ಪ್ರಸನ್ನಗೆ ಭಗವದ್ಗಾನುಭವಮುಂ ತತ್ಕಿಂಕರಪ್ರವೃತ್ತಿಯುಮುಳ್ಳದೆ ಕೆಟ್ಟೊಂದು ಭೋಗಮುಂ ರುಚಿಸದೆಂಬುದಂ ನಿರೂಪಿಸುವರ್.

|| ರಾಗ— ಕಾಂಭೋಧಿ || ತಾಳ ರೂಪಕ ||

ನಿನ್ನ ನಲ್ಲದನ್ಯರನೇನೊಪನೆ । ಅ । ಚೆನ್ನಿಗ ಪಶ್ಚಿಮರಂಗ ಪಟ್ಟಣದ ಚೆಲುವ ಲಕ್ಷ್ಮೀನಾರಸಿಂಹ ನಿನ್ನೆಂದೆಯಾ || ಪಲ್ಲವಿ ||

ಚ || ಜಲರುಹನಾಭ ನೀನು ಸಕಲ । ಜಗದೀಶನೆಂದು ತಿಳಿದು ಮಿಕ್ಕಿ । ನಳತೆಯು ನೆಲಸನಾಳುವ ದೇವರಿಗಾಸೆಬಗುವೆನೆಂತು || ಕಳೆದು ಮೂಜಗದ ಕತ್ತಲೆಯೆಲ್ಲವ । ತೊಳಗುವ ಸೂರ್ಯನ ತೋರುಕೆಗಲರ್ದ । ಕಳೆವೆತ್ತ ಮಡುವೊಳುದಾವರೆ ಮಿಂತು । ಬಿಡುವಿನ ಬೆಳಕಿಗೆ ಪೊಗರೇರುವುದೆ || ೧

ಪರಮಾತ್ಮ ನೀನು ಪರತತ್ವವೆಂದು । ಭಾವಿಸಿ ನಿನ್ನ ಬಯಸಿ ಮಿಕ್ಕ । ತರವಳಿ ದೈವದಾಸೆಗೆ ಸಿಲುಕಿ ದಾಟುದಸ್ಪೃಹನೆಂತು || ಧರದೊಳು ಕಡಲ ಬಳಿಗೆ ಪರಿವ । ಬಲುಮೊಯೊಳೆಸೆವ ಬಿಂಕದ ಪೆರ್ವೊಳೆ । ಮಿರವುಗೆಟ್ಟಿದಿರೊಳು ತೋರುವ ಕಿರುಹೊಕ್ಕರಣೆಯು ಬಾವಿಗೆ ಹವಣಿಸುವುದೆ || ೨

ಸಿರಿರಾಣಿಯರಸ ನಿನ್ನ ದಿವ್ಯ । ಚರಣಾರವಿಂದದೊಳೆರಗಿ ಮಿಕ್ಕ । ಮರುಳು ದೈವಗಳ ಮಾಯೆಗೆ ಸಿಲುಕಿ ಪ್ರೈಮಜೆವಿರ್ಪೆನೆಂತು || ಸರಸಿಯೊಳಲರ್ದ ಕೆಂದಾವರೆಗೆರಗಿ । ಸವಿವದಮಲೊಳುಗಂಪ ಸಂತಸದೊಳೊಗುಮಿಗೆ । ಪರವಶಗೊಂಡಿರ್ಪ ತುಂಬಿನಿಂಡು ಕೊಳವಳಿಕೆಗೆ ಮೇಲಿಕ್ಕಿ ಕೂರ್ತೆರಗುವುದೆ || ೩

ಪಬಿವಿನಿತಿಲ್ಲವೆನಿಸಿ ಮೆರೆವ । ಪಾವನಚರಿತ ನಿನ್ನ ಭಜಿಸಿ । ಬಡಿಕಾಸು ಪಲವು ಬಣಗುದೆವದ ಭಜನೆಗೆಯ್ವೆನೆಂತು || ತಿಳಿನೀರೊಳೆಸೆವ ಮಾನಸಸರಸಿಗೆಱದಲ್ಲಿ ನಲಿದು

ನಲವೇಱುವಂಚೆ । ಪುೞಿತು ಪೊಲಸುಗಂಪುವೆತ್ತು ಪಾವಸೆಗೊಂಡ ಕೊಳಚಿವಳ್ಳದೊಳು ಕೂರ್ತೆಱಗುವುದೆ ॥ ೪

ಶ್ರೀವರ ನಿನ್ನ ಕಲ್ಯಾಣಗುಣವ ಭಾವಿಸಿ । (ಯಾನಂದವಡೆದು) ನಿನ್ನ ಬಯಸಿ ಮಿಕ್ಕ । ಗಾವಿಲ ದೈವದ ಗಡಣದಿರವ ಗಣನೆಗೆಯ್ವೆನೆಂತು ॥ ಮಾವಿನಿಂಬಣ್ಣ ಮಸವಾೞ(ಸವಿ)ಸವಿದು । ವೈಮಱೆದುರ್ಕಿ ಸೊರ್ಕಿಱುವರಗಿಳಿ । ಗಾವಳಿವಡೆದು ಕಾಗೆಗಳೆಱಗುವ । ಬೇವಿನ ಪಣ್ಗಾಸೆಪೆತ್ತೆಱಗುವುದೆ ॥ ೫

ಅಂಬುಜಲೋಚನ ಕೇಳು ನಿನ್ನ । ಕೃಪಾಮೃತಪಾನದಿ ತಣಿದು ಮಿಕ್ಕ । ಡೊಂಬಿ ದೈವಂಗಳ ಬೆಂಬಳಿವಿಡಿದು ಪಂಬಲಿಸುವೆನೆಂತು ॥ ಅಂಬರತಲವನಡರಿ ಮುಗಿಲ । ಮುಂಬನಿಯುಂಡು ಸೊರ್ಕುವ ಚಾದಗೆ । ಗುಂಬಚೆಂಬಿನೊಳು ತುಂಬಿರ್ದ ಪಟಿನೀರ ಕೊಂಬೆನೆಂದೆಣಿಸಿ ಕೂರ್ತೆಱಗುವುದೆ ॥ ೬

ಶ್ರೀನರಸಿಂಹ ನಿನ್ನಡಿಗೊಲಿದು । ತಿರುಮಲೆಯಾರ್ಯನುಸಿರ್ದ ಸರಸ । ಗಾನವನಾಲಿಸಿ ಮಿಕ್ಕ ದೈವಗಳ ಗನ್ನವ ಕೇಳ್ವೆನೆಂತು ॥ ಜೇನಿಗೆ ಸಾಸಿರವಡಿ ಸೊಗಸೆನಿಸುವ । ತೇಜದೊಳೆಸೆವ ಸೊಪೆಯುಂಡು ಸೊರ್ಕಿ ನಿಂ । ದಾನಂದದೊಳು ಬಾೞುವಮರಿಳೆಯು ಪುಲು । ಪಾನಸರೂಟವ ಮನಗೊಳಿಸುವರೆ ॥ ೭

ಫಲಸಪ್ತಪದಿ ಸಂಪೂರ್ಣಂ.

## — ಸಪ್ತಪದಿ — VII —

ಇಡೆ ಕೆಯ್ಪಿಟ್ಟಿಯನೊಂದನೆ ಜಡಿದು ನೀನೀಡಾಡುವರ್ ತಮ್ಮ ಕೆ |
ಯ್ವಿಡಿವೊಳ್ಕ್ರಮವನೆಲ್ಲಮುಂ ರಿಪುನೃಪರ್ ನೀಂ ಬಂಡೆಯುಂಗೊಂಡು ಬೊ||
ಬ್ಬಿಡುವಾರ್ಪಿಂದಿದಿರೇೞ್ತಾಮಿದಿರಿಸರ್ ವ್ಯಾಸನುಂ ಶೀರ್ಷಂಗಳಿಂ |
ನುಡಿ ನಿನ್ನಪ್ರತಿಮತ್ವಮೆಂತೊ ಚಿಕದೇವಾ ಬಲ್ಲರೊಳ್ ಬಲ್ಲಹಾ || ೧೫

ಇರದೊಱೆವಾಲಿನೀರ್ವೊರ್ನಲನೀಂಟೆ ತೃಷಾಭರಮಂ ನಿವಾರಿಪರ್ |
ಜರಿದು ಕ್ರೋದಜ್ಜಿ ನೀಳ್ಕ್ಮಡಿಯ ಪೆರ್ಮುಗಸುಕಿಂ ಬಿಸಿಲಾರ್ಪನಾಱಿಪರ್ ||
ಭರವಸದಿಂದೆ ನಂದಿಸುವೆವೆಂದೆರ್ಗೆ*ಗಿಜ್ಜನರಾತಿಕಾಂತೆಯರ್ |
ಪರಿತರೆ ನಿನ್ನ ಬಲ್ಪಡೆ ನೊಗಂಬಡುವರ್ ಚಿಕದೇವಭೂವರಾ || ೧೬

ವಚನ|| ಇಂತಾಱುಂ ಸಪ್ತಪದಿಗಳೊಳ್ ದಿವ್ಯಾತ್ಮಗುಣಂಗಳನನುಭವಿಸಿ ಈ ಸಪ್ತಮಸಪ್ತಪದಿಯೊಳ್ ದಿವ್ಯಮಂಗಳವಿಗ್ರಹಗುಣಂಗಳನನುಭವಿಸುವರ್.

ರಾಗ—ಯುದಕಲ ಕಾಂಬೋಧಿ ॥ ತಾಳ—ಝಂಪೆ ॥

ಕಂಗೊಳಿಸದಿರಲಾಱೆ ಕಣ್ಣ ಪುಣ್ಯದ ಬೆಳಸ । ಕಂಗೊಳಸದಿರಲಾಱೆನೆ ।
ಪೊಂಗೊಳಲ ನುಡಿಸುತಿಱ್ಱೊತ್ತಿನೊಳು ಪುರವೀಧಿ । ಸಿಂಗರಿಸಿ ಮೆಱೆವ ಹರಿಯು ಸಿರಿಯು ॥ ಪಲ್ಲವಿ ॥

ಚ ॥ ಕ್ರಮದಿ ನಡುತೋಳ್ಮುಡಿಗಳೊಂದಿನಿಸು ಕೊಂಕಿನೊಳು ಕಮನೀಯವೆಂದೆನಿಸಿ ಮೆಱೆಯೆ । ಸಮತಳದಿ ನಿಂದಡಿಯು ಮುಂದೆ ಮತ್ತೊಂದಡಿಯು ನಾರ್ಜಿಯುಂಗುಟುವನೂಱು । ರಮಣೀಯರೇಖೆಯೊಳು ನಿಂದು ಕೊಳಲುಲಿಗೊಳುವ । ರಾಯಗೋವಳನ ತೋಱು ನೀಱೇ ॥ ೧

ಬಳಬಳಸಿ ನಲಿನಲಿವ ಬಾಲಕರ ಕೆಯ್ಯ ತಪ್ಪಳೆಯೊಳುಱೆ ಬಣ್ಣವೇಱು । ಕೆಳೆವಕ್ಕಳೆಡಬಲದೊಳೊಲಿದೂದುವೆಲೆಸುತ್ತಿನೊಳು ಸರವನೊಂದುವೆರಸಿ । ಕೊಳಲ ಸುಜ್ಞಾರವ ಕೊನರಿಡಿಸಿ ಕುಡಿವರಿಯಿಸುವ । ಕುವರಗೋವಳನ ತೋಱು ನೀಱೇ ॥ ೨

ಮತ್ತಕದೊಳೆಸೆವ ಕಾಟ್ಮರದ ಪೂಸನೆತಳಿರು ಕತ್ತುರಿಯು ಹೀಲಿ ಚಲಿಸೆ । ಸುತ್ತುವೆಳದುಂಬಿಗಳ ಸೊಬಗಿನೊಳು ನಿಱುಗುರುಳು ಸುಱಿಯೆ ಮೊಗದಾವರೆಯೊಳ । ಚಿತ್ತಜಾವೇಶಮಂತ್ರಗಳ ಕೊಳಲಿಂದಳೆವ । ಚೆನ್ನಗೋವಳನ ತೋಱು ನೀಱೇ ॥ ೩

ಕಳೆವೆತ್ತ ಕತ್ತುರಿಯು ವೀಣೆಯೊಡನೊಡನುಣ್ಮಿ ಕವಿವ ತನಿಗಂಪಿನಂತೆ । ಬಳೆವ ತಾನದ ಗಮಕಗತಿಯು ಪ್ರೈಸಿರಿಗೆ ಮೊಗ ಬಗೆಬಗೆಯು ಭಾವವಡೆಯೆ । ಕೊಳಲಿಗಿಂದುಟಿಯು ಸವಿದೋಱುವೊಳುದನಿಗೊಳುವ । ಕೊನಬುಗೋವಳನ ತೋಱು ನೀಱೇ ॥ ೪

ಗುಡಿಗೊಳುವ ಕುಣಿವ ಕೊಂಕುವ ನಿಮಿರ್ವ ಚಳಕದೊಳು ಕುಡುವುರ್ವ ಕೋಟಲೆಗೊಳೆ । ಒಡನೊಲೆವ ತೊನೆವ ತೂಗುವ ಭರದಿ ಕನ್ನವುರ ಜಡಿದು ಕದಪಿನೊಳು ನಲಿಯೆ । ಬೆಡಗು ಮಿಗೆ ಶಿರವನೊಲೆದೊಲೆದು ವೇಣುವ ನುಡಿಪ । ಬಿನದಗೋವಳನ ತೋಱು ನೀಱೇ ॥ ೫

ಕವಿವ ಕಡೆಗಣ್ಗೆ ಸೇರುವ ನೀಳ್ವ ನೆಲೆಗೊಳುವ ಕರಗುವರೆಮುಗಿವ ನಗುವ । ನೆವದಿ ತೆರೆಗೊಳುವ ತೇಲುವ ಪೊಳೆವ ಪೊಗರೊಗುವ ನೇಹದಿನಿರಸದಿ ನನೆವ । ಸವಿನೋಟದಿಂದ ಕಣ್ಮನವ ಕೈಸೆಱೆಗೊಳುವ । ಚದುರಗೋವಳನ ತೋಱು ನೀಱೇ ॥

ಹರವಿರಿಂಚರ ಬಗೆಗೆ ಹವಣೆನಿಸದಾನಂದದಿರವ ಗೊಲ್ಲರ ಬೀಡಿನ । ನೆರೆಹೊರೆಯು ಪಲವು ಮರ ಮೊರಡಿ ಮಿಗ ಪಕ್ಕಿ ಕಱು ತುಱುಗಳಿಗೆ ಸೂಱೆಗೊಳಿಸಿ । ತಿರುಮಲಾರ್ಯರ ಮನವ ನೆಲೆವೀಡುಗೊಂಡೆಸೆವ । ದೇವ ಗೋವಳನ ತೋಱು ನೀಱೇ ॥ ೭.

ಮೂರ್ತಿಧ್ಯಾನ ಸಪ್ತಪದಿ ಸಂಪೂರ್ಣಂ.

ವೃ ॥ ವಲಿತಾರಾತಿಸಿರಾಙ್ಕುರಪ್ರತಿಸರಾಲಂಕಾರೆ ಸಂಭಿನ್ನಕೃ ।
ತ್ತಿಲಸಚ್ಚಿತ್ರಪಟೀಪರೀತೆ ರಿಪುಹೃತ್ಪಂಕೇರುಹೋತ್ತಂಸಮಂ ॥
ಜ್ವಲೆ ಸೊಂಪಿಂ ಚಿಕದೇವಖಡ್ಗವಧು ಗಾಢೋತ್ಸಾಹದಿಂ ದುರ್ಹೃದಾಂ ।
ತ್ರಲತಾಮಾಲೆಯನಿಟ್ಟಳಂದು ಜಯಕಾಂತಾಂಗಾಪ್ರೋದ್ವಾಹದೊಳ್ ॥ ೧೭

ದಳಿತಾರೀಭಶಿರಃಕಪಾಲತತಿಭೃಂಗಾರಂಗಳಂ ವಿದ್ವಿಷ ।
ದ್ಗಳಶೃಂಗಂಗಳಸಂಸ್ಖಂಡಿತಸಿರಾವಂಶಂಗಳಂ ದೇಸಿಯಿಂ ॥
ತಳೆದೊಳ್ಪಂ ಚಿಕದೇವಖಡ್ಗವಧು ರಕ್ತಾಸಾರಕಾಶ್ಮೀರದೋ ।
ಕುೞಿಯಂ ಸೂಸಿದಳಾಹವಪ್ರೋತ್ಸವದೊಳಾಶಾಕಾಮಿನೀಬೃಂದದೊಳ್ ॥ ೧೮

ಬಳಿಯುತ್ತೆ ಲೀಲೆಯೊಳ್ ಕರಟಸತ್ಕೃತಿಯಿಂ ಚಿಕದೇವ ತಾವಕಾ ।
ಸಿಲಲನೆ ಸಂಗರಾಂಗಣದೊಳೊಳ್ಪಸನೆಚ್ ಪೊಸಗೆಲ್ಲವೆಣ್ಣುಮು ।
ಗ್ಗಲಿಸೆ ಗತಾಗತಕ್ರಮದೆ ದ್ಯೂತಜಿದಾವಜಿಕಾಕಥಾದಿಮು ।
ರ್ಗಳಿತಮರಾಟರೊಳ್ಪಡೆಯ ಪಂದೞೆಯಿಂ ತಿರಿಕಲ್ಲನಾಡಿದಳ್ ॥ ೧೯

॥ ಲಯಗ್ರಾಹಿ ॥

ಬಂದು ದೆಸೆಯೊಳ್ ತುರುಕರೊಂದು ಕಡೆಯೊಳ್ ಮೊರಸ
ರೊಂದೆಡೆಯೊಳಾರೆಯರ ಬಿಂದಮುಳಿವಿಂ ಜೇ ।
ಟೊಂದು ಬೞಿಯೊಳ್ ತಿಗುಳರೊಂದಿರವಿನೊಳ್ ಕೊಡಗ ।
ರೊಂದು ಕೆಲದೊಳ್ ಮಲೆಪರೊಂದುಮೆರೆದೆಲ್ಲರ್ ॥
ಸಂದಣಿಸಿ ಕಾಳೆಗಕೆ ಮುಂದುವರಿವನ್ನಮುದ
ಟಿಂದವರ ಘಟ್ಟುಗಳ ಪಂದೞೆಗಳಂ ದಿ ।
ಗ್ಬೃಂದಬಲಿಯಿತ್ತು ಸಲವಿಂದೆ ಚಿಕದೇವನೃಪ ।
ನಂದಮಿಗೆ ಪೆರ್ಜಸಮನೊಂದಿ ಸೊಗವಾಜ್ಗಂ ॥ ೨೦

॥ ಗದ್ಯಂ ॥

ಇದು ಸಕಲಜಗದುದಯವಿಭವಾದಿಲೀಲನುಂ, ಲಕ್ಷ್ಮೀಲೋಲನುಂ, ಅಖಿಲಹೇಯಪ್ರತ್ಯನೀಕನುಂ, ಅಪ್ರಾಕೃತಪ್ರತೀಕನುಂ, ಅವಾಪ್ತಸಮಸ್ತಕಾಮನುಂ, ಅನಂತಕಲ್ಯಾಣಗುಣಗಣಾರಾಮನುಂ, ಸಾರಸಭವಪೂಜಿತನುಂ, ಸನಕಮುನಿಸಭಾಜಿತನುಂ, ಯದುಶಿಖರಿಶಿಖರಾಲಂಕಾರನುಂ, ಯತಿರಾಜಸಂಪತ್ಕುಮಾರನುಂ, ಆಶ್ರಿತರಕ್ಷಾಪರಾಯಣನುಮಪ್ಪ ಯಾದವಗಿರಿ ನಾರಾಯ

ಣನಡಿದಾವರೆಯುಗಳದೊಳ್ ಬಳೆದೇಱ್ಗಿ ವಳೆದ ಯಾದವಕುಲೋದ್ಧಾರಕನುಂ, ಶುಭಗುಣೋದ್ಧಾರಕನುಮಾದ ದೇವರಾಜನೃಪಾಲಪೌತ್ರನುಂ, ಅತ್ರಿಗೋತ್ರಪವಿತ್ರನುಂ, ದೊಡ್ಡದೇವರಾಜ ಗರ್ಭಾಂಬುಧಿಕಲಾಧರನುಂ, ಸಕಲಕಲಾಧರನುಂ, ಅಶ್ವಾರೋಹಣಕಲಾರೇವಂತನುಂ, ಗಜಾರೋಹಣಮಘವಂತನುಂ, ಅಸ್ತ್ರವಿದ್ಯಾಭೃಗುರಾಮನುಂ, ಅಪ್ರತಿಮಧಾಮನುಂ, ಕರ್ಣಾಟಭೂಮಂಡಲಾಧೀಶನುಂ, ದೇವಸಂಕಾಶನುಂ, ಪಶ್ಚಿಮರಂಗಪುರಸಿಂಹಾಸನಾಧಿಷ್ಠಿತನುಂ, ಸುಪ್ರತಿಷ್ಠಿತನುಂ, ದೇವಬ್ರಾಹ್ಮಣಪರಿಪಾಲನೈಕಾನ್ತನುಂ, ಸಕಲಪ್ರಜಾಕಾನ್ತನುಂ, ಅಸಕೃದಾವರ್ತಿತಷೋಡಶಮಹಾದಾನನುಂ, ಆಶ್ರಿತಸರ್ವಶ್ರೇಯೋನಿದಾನನುಂ, ರಸಿಕಜನಕರ್ಣರಸಾಯನೀಕೃತಸಂಗೀತವಿಸ್ತರನುಂ, ಸಾಹಿತ್ಯವಿದ್ಯಾನಿಕಷಪ್ರಸ್ತರನುಂ, ಪೂರ್ವದಿಗ್ವಿಜಯಯಾತ್ರಾವಿತ್ರಾಸಿತ ಚೇದಿಮಂಗಲೋಪಾನ್ತ ಕಾನ್ತಾರೋಪಗೂಢವ್ಯೂಢಸೇನಾಭಿಗುಪ್ತಪಾಂಡ್ಯಸೇನಾಧಿಪ ಸಂಗರಕಿರೀಟ ವೆಂಕಟಕೃಷ್ಣಶಿಬಿರಸರ್ವಸ್ವಹರಣಸಮಸಮಯಸಮಾಕ್ರಾನ್ತ ಮಳಲಿ ಪರಮತ್ತಿಶಾಲೆಯ ಚೇದಿಮಂಗಲ ಕೊಂಗು ಧಾರಾಪುರಾದಿ ಪಾಂಡ್ಯನೃಪ ದುರ್ಗಮದುರ್ಗಸ್ತೋಮನುಂ, ಸಂಗರಭೀಮನುಂ, ಉದ್ವೃತ್ತಸುರತ್ರಾಣಚಮೂವಿಕ್ಷೋಭಣವಿಚಕ್ಷಣ ವಿಕಟಮರಾಟ ಶಿವಾಜಿ ವಾಜಿಸೇನಾಧಿಪ ಜಯತಜಿಕಾಟಕರ ದಾದಜಿಕಾಕಡ ಪ್ರಮುಖಕಂಠನಾಳೋಚ್ಛಲದ್ರಕ್ತಧಾರಾಸಿಕ್ತಕೃಪಾಣಸಂದರ್ಶನವಿಲೀನಹರಜಿ ಸಂತಜಿ ಮುಖ್ಯಮಹಾರಾಷ್ಟ್ರನೃಪಪ್ರವೇಕನುಂ, ಅಪ್ರತ್ಯನೀಕನುಂ, ಗಂಭೀರೋದ್ಧತಪರಿಘಾವರಣಭೀಷಣಶತಘ್ನೀಶತಸಂಕುಲಮತ್ತಮಾವಳಿಸೇನಾವಳೀವರ್ಮಿತಧರ್ಮಪುರೀಪ್ರಸಭಾಕ್ರಮಣಶ್ರವಣನಿರ್ಜನೀಕೃತ ಕೆಂಗೇರಿ ವಾಮಲೂರು ಬೇವುಹಳ್ಳಿ ಬೈರನೆತ್ತ ಕುನ್ನತ್ತೂರ್ ಮುಖ್ಯದುರ್ಗವರ್ಗನಿರಾಯಾಸಾಕ್ರಮಣನಿವೃತ್ತನಿಜಸೈನಿಕಸಮೂಹನುಂ, ಆಹವಕಲಾಶ್ವೇತವಾಹನನುಂ, ದಕ್ಷಿಣದಿಗ್ವಿಜಯಯಾತ್ರಾವಿತ್ರಾಸಿತ ಪಲಾಯಿತ ಪಾಂಡ್ಯಬಲಾನುಧಾವನಶ್ರಾನ್ತನಿಜಬಲವಿಶ್ರಾನ್ತಿಸ್ಥಾನೀಕೃತ ಜಲಧಿವೇಲಾತಮಾಲಾರಣ್ಯನುಂ, ಆನತಜನಶರಣ್ಯನುಂ, ಪಶ್ಚಿಮದಿಗ್ವಿಜಯಪ್ರಸ್ಥಾನ ಭೇರೀರವಾಕರ್ಣನಸಂಭ್ರಾನ್ತದುರ್ದಾನ್ತಹುಶಾನಖಾನಸನಾಥ ಕೆಳದಿನೃಪ ಸಮರ್ಪಿತಸರ್ವಸ್ವನಿರ್ವಾಪಿತಕೋಪನುಂ, ಅಮಿತಪ್ರತಾಪನುಂ, ಉತ್ತರದಿಗ್ವಿಜಯ

ಸಮಯಾಭಿಯಾತ ಕುತುಪಶಾಹ ವಾಹಿನೀವಿಮರ್ದನ ಕ್ಷಣಾಕ್ರಾಂತ ಕಂಡಿಕೆರೆ ಚಿಕ್ಕನಾಯಕನಹಳ್ಳಿ ಹೊನ್ನವಳ್ಳಿ ಸಾರತವಳ್ಳಿ ತುಱುಗೆರೆ ಪ್ರಮುಖ ದುರ್ಗ್ರಹಪ್ರಾಕಾರವಾರನುಂ, ಅಸಹಾಯಶೂರನುಂ, ಜಡಕನದುರ್ಗಹಠಾದ್ಗ್ರಹಣವೇಳಾನಿಖಾತಸುರಂಗಮುಖಾನಲೋತ್ಕ್ಷಿಪ್ತಗಂಡೋಪಲಪಾತ ನಿರ್ಧೂತ ಬಿಜ್ಜವರ ಮದ್ದಗಿರಿ ಚೆನ್ನರಾಯದುರ್ಗ ವೀರಣದುರ್ಗಾದ್ಯಸಂಖ್ಯ ದುರ್ಗವರ್ಗಾಕ್ರಮಣಾವಸರಾವನತಸಾಮಂತನೃಪಾಲಮೌಳಿಮಣಿಘೃಣೀನೀರಾಜಿತಪದರಾಜೀವನುಂ, ಮಹಾನುಭಾವನುಂ, ಸಾಹಜಿಮುಖಮರಾಟನೃಪರಾಜಧಾನೀಕೃತಾಭಂಗುರಬೆಂಗಳೂರ್ ಹರಣ ನಿಷ್ಪ್ರಾಣಿತ ಶಂಭುಜಿ ಸಾಹಜಿ ಸಂತಜಿ ಹರಜಿ ಪ್ರಮುಖ ಮಹಾರಾಷ್ಟ್ರ ನೃಪಾಲಜಾಲನುಂ, ರಿಪುಕುಲಕಾಲನುಂ, ಸಂಗ್ರಾಮರಾಮನುಂ, ಸಾಹಸೋದ್ದಾಮನುಂ, ಪ್ರೌಢಪ್ರತಾಪನುಂ, ಪ್ರಕಟಿತಾಟೋಪನುಂ, ಅಮಿತಪರಾಕ್ರಮನುಂ, ಅಭೇದ್ಯವಿಕ್ರಮನುಂ, ಕರ್ಣಾಟಚಕ್ರವರ್ತಿಯುಂ, ಕಲ್ಯಾಣಕೀರ್ತಿಯುಂ, ಲೋಕೈಕವೀರನುಂ, ವೀರರೊಳ್ಗಂಡನುಂ, ಗಂಡರೊಳ್ಗಂಡನುಂ, ಅಂತೆಂಬರ ಗಂಡನುಮೆನಿಸಿ ನೆಗಳ್ದ ಶ್ರೀಮದಪ್ರತಿಮವೀರನರಪತಿ ಶ್ರೀ ಚಿಕದೇವಮಹಾರಾಜ

ವಿರಚಿತಮಪ್ಪ

ದಿವ್ಯಪ್ರಬಂಧಂಗಳೊಳ್

ಶ್ರೀ ಗೀತಗೋಪಾಲ ಮಹಾಪ್ರಬಂಧದೊಳ್

ಉತ್ತರಭಾಗಂ ಸಂಪೂರ್ಣಂ.

ಗೀತಗೋಪಾಲಂ ಸಮಾಪ್ತಂ.